ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Thursday, the 27th September 1979 | Asvija 5, 1901 S.E.

The House met in the Assembly Chamber, Vidhana Soudha, at Nine of the Clock.

[MADAM DEPUTY SPEAKER (SMT. SUMATI B. MADIMAN) in the Chair.]

PAPERS LAID ON THE TABLE

SRI D. DEVARAJ URS (Chief Minister).—I beg to lay on the Table fo the House :

"The 3rd Annual Report of the Karnataka Dairy Development Corporation, Limited, for the year 1976-77.

under section 619-(A) (i) of the Companies Act, 1956.

SRI S. M. YAHYA (Minister for Finance).—I beg to lay on the Table of the House :

"The 20th Annual Report and Accounts of Karnataka State Financial Corporation, Bangalore, for the year ended 31st March 1979.

under Section 38 (3) of the State Financial Corporation Act, 1951.

MADAM DEPUTY SPEAKER.—Papers are laid.

SECRETARY.—I beg to lay on the Table the Motor Vehicles (Karnataka Amendment) Bill, 1979 as passed by the Legislative Council.

Notice under Rule 153.

FURTHER DISCUSSION ON THE MOTION OF NO CONFIDENCE IN THE COUNCIL OF MINISTERS

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಸಭಾಧ್ಯಕ್ಷಿಣಿಯವರೆ, ನಾನು ತಮ್ಮಲ್ಲಿ ಒಂದೇ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ,.........

SRI D. DEVARAJ URS.—I am sorry, I cannot oblige.

ಶ್ರೀ ಎಂ. ವಿ. ರಾಜಶೇಖರನ್.— ಮಾನ್ಯ ಸಭಾಧ್ಯಕ್ಷಿಣಿಯವರೆ, ನಾನು ಏನು ಹೇಳುತ್ತಿದ್ದೇನೆಂಬುದನ್ನು ದಯವಿಟ್ಟು ಕೇಳಿ. ಕಳೆದ ಎರಡು ದಿವಸಗಳಲ್ಲಿ ಈ ಸದನದಲ್ಲಿ ಏನು ಚರ್ಚೆಯನ್ನು ಮಾಡಿದ್ದೇವೆ,

ಅದರ ಬಗ್ಗೆ ನಾವೂ, ನೀವೂ ನಾಚಿಕೆಪಟ್ಟುಕೊಳ್ಳಬೇಕಾಗಿದೆ. ಇದುವರೆಗೆ ಹಳ್ಳಿಗಾಡಿನಲ್ಲಿರತಕ್ಕ ಬಡ ಜನರಿಗೆ ಅನುಕೂಲವಾಗುವಂಥ ಯಾವುದಾದರೂ ಒಳ್ಳೆಯ ಕೆಲಸವನ್ನು ಮಾಡಿದ್ದೇವೆಯೇ ಎಂಬುದನ್ನು ತಾವು ಯೋಚಿಸಬೇಕು.

SRI D. DEVARAJ URS.—The House is not here to oblige him for any lenghts of time. The hon'ble member can take some other occasion to discuss it.

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಅಧ್ಯಕ್ಷಣಿಯವರೇ, ಗ್ರಾಮಾಂತರ ಪ್ರದೇಶದ ಜನಗಳ ಕಷ್ಟ ಏನೆಂಬುದನ್ನು ಇಲ್ಲಿ ವಿಚಾರ ಮಾಡುವುದು ಬೇಡವೆ ?

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷಣಿಯವರೇ, ನನಗೆ ಅರ್ಧ ಗಂಟೆ ಸಮಯ ಮಾತ್ರ ಕೊಡಿ ; ನಿನ್ನೆಯಿಂದ ನಾನು ಕೇಳುತ್ತಿದ್ದೇನೆ. Madam Deputy Speaker......

MADAM DEPUTY SPEAKER.—I request the hon'ble member Sri Bhimanna Khandre to sit down. Yesterday what happened was when I asked the Leader of the Opposition and other members, they said that the House can go on till 7-30 P.M. Sri S. R. Bommai requested me to give some time to Smt. Pramila who was the only lady member to speak. Accordingly, a chance was given to her. Then Sri R. Gundu Rao said, better give five minutes to other members who were anxious to speak. Accordingly, I called Sri C. M. Ibrahim to speak. Immediately, Sri M. V. Rajasekharan stood up and provailed upon Sri C. M. Ibhrahim to yield. Sri C. M. Ibrahim yielded to Sri M. V. Rajasekharan. Sri M. V. Rajasekharan went on saying that he was not given chance to speak about the plight of the farmers in the rural areas. Later, I told the hon'ble member to contact the Leader of his party to see that equal time was given to the members of his party. But each of the Leaders took more than one hour or $1\frac{1}{2}$ hours. Therefore I could not help. They should have decided amongst themselves about sharing of time between them. They did not do it. If the time allotted to the Opposition was consumed by the leaders themselves, how can I help all the members ?

SRI P. RAMDEV.—I may also be given some time to speak.

MADAM DEPUTY SPEAKER.—In the beginning they gave me three lists but later on withdrew them and said only two of them were going to speak. At this rate how can we conduct the proceedings of this House ?

ಶ್ರೀ ಭೀಮಣ್ಣ ಖಂಡ್ರೆ.—ನಿನ್ನೆ ಇದ್ದಂತಹ ಪಟ್ಟಿಯಲ್ಲಿ ನನ್ನ ಹೆಸರು ಇತ್ತು. ಆದರೂ ತಾವು ನನಗೆ ಅವಕಾಶ ಕೊಡಲಿಲ್ಲ. ಸಭೆಯನ್ನು ಅಡ್ಜರ್ನ್ ಮಾಡಿದಿರಿ. ಇವತ್ತು ನನಗೆ ಅರ್ಧ ಗಂಟೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಡಿ.

MADAM DEPUTY SPEAKER.—You must ask your leader.

ಶ್ರೀ ಭೀಮಣ್ಣ ಖಂಡ್ರೆ.—ಹೋಗಲಿ ೧೫ ನಿಮಿಷ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಡಿ. ಕೊನೆಯ ಪಕ್ಷ ೫ ನಿಮಿಷ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MADAM DEPUTY SPEAKER.—Yesterday I have given enough time to all the leaders of the opposition parties. If they have not used that time proprely or not brought forth the points properly, I cannot help. I had declared yesterday that discussion would be completed yesterday and the Chief Minister would reply to the debate today.

ಶ್ರೀ ಎಂ. ವಿ. ರಾಜಶೇಖರನ್.—ಈ ಸದನದಲ್ಲಿ ಈ ರಾಜ್ಯದ ರೈತರ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಎಷ್ಟು ಕಾಲ ತೆಗೆದುಕೊಂಡಿದ್ದೇವೆಂಬುದನ್ನು ತಾವು ನೋಡಿ.

SRI D. DEVARAJ URS.—You ask your leader.

SRI M. V. RAJASEKHARAN.—Since I am too reasonable, I am requesting the Chair ; but the Chair is not obliging me. In the debate so many problems affecting the rural folks have not been touched.

MADAM DEPUTY SPEAKER.—I have been reasonable to your party.

(At this stage some hon members staged a walk out).

SRI D. DEVARAJ URS.—I cannot yield now.

SRI BHIMANNA KHANDRE.—You must give me time.

MADAM DEPUTY SPEAKER.—I cannot give you time ; you please resume your seat.

SRI BHIMANNA KHANDRE.—I request you to give me half an hour to speak.

SRI D. DEVARAJ URS.—I am not prepared to yield.

MADAM DEPUTY SPEAKER.—If you do not listen to me, I will have to name you. You please resume your seat.

SRI BHIMANNA KHANDRE.—I must speak about the farmers.

MADAM DEPUTY SPEAKER.—If you adopt such methods, I will name you.

SRI BHIMANNA S. KHANDRE.—If this is the attitude of the Government and Deputy Speaker, I will stage a walk out in protest.

SRI C. M. IBRAHIM.—Since I am also not allowed to speak in protest I will also stage a walk out. I wanted to bring to the notice of the House the atrocities committed against the minorities and the Harijans.

ಶ್ರೀ ಧರ್ಮಸಿಂಗ್.—ಯಾದ್ಗಿರಿನಲ್ಲಿ ಪಿ. ಜಿ. ಸೆಂಟರ್‌ನಲ್ಲಿ ಎಸ್. ಸಿ. ಹುಡುಗಿಯನ್ನು ಗೂಂಡಾಗಳು ಹೊಡೆದಿದ್ದಾರೆ.

MADAM DEPUTY SPEAKER.—You ask your leader.

ಶ್ರೀ ಧರ್ಮಸಿಂಗ್.—ನಾವು ಇಲ್ಲಿಗೆ ಬಂದಿರತಕ್ಕಂಥಾದ್ದು ಏತಕ್ಕೆ ? ನಾವುಗಳು ಮಾತನಾಡುವುದಕ್ಕೆ ಅವಕಾಶ ಇಲ್ಲವೆ ?

MADAM DEPUTY SPEAKER.—You have just now come to the House. You please ask your leader.

MADAM DEPUTY SPEAKER.—You please resume your seat. What are you trying to do ? When I ask you to resume your seat, you must resume your seat. You can speak with the permission of your leader.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷಿಣಿಯವರೆ, ಅವಿಶ್ವಾಸ ನಿರ್ಣಯದ ಮೇಲೆ ೨-೩ ದಿವಸಗಳಿಂದ ಒಂದೇ ಸಮನೆ ಚರ್ಚೆ ನಡೆದಿದೆ. ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಸಾಕಷ್ಟು ಅವಕಾಶವನ್ನು ವಿರೋಧಪಕ್ಷದವರಿಗೆ ಕೊಟ್ಟಿದ್ದೀರಿ. ಆದರೂ ಕೂಡ ಈ ರೀತಿಯಾಗಿ ಅವರು ಜಗಳ ಮಾಡತಕ್ಕಂಥಾದ್ದು ಸರಿಯಲ್ಲ : ನ್ಯಾಯವಲ್ಲ ಎಂದು ಹೇಳುತ್ತೇನೆ.

ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಸದಸ್ಯರುಗಳಿಗೆ ಸ್ವಲ್ಪ ಗಂಭೀರವಾಗಿ ಗಲಾಟೆ ಇಲ್ಲದೆ ಕುಳಿತು ಕೊಳ್ಳುವಂತೆ ತಿಳಿಸಬೇಕು ಎಂದು ನಾನು ತಮ್ಮ ಮುಖೇನ ಬಹಳ ವಿನಂತಿ ಯಿಂದ ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸುದೀರ್ಘವಾಗಿ ಭಾಷಣ ಮಾಡಿ ನಾನು ಪಕ್ಷದಿಂದ ಹೊರಕ್ಕೆ ಹೋಗಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಕ್ಕಾಗಿ ತುಂಬಾ ಆಕ್ಷೇಪಣೆ ಎತ್ತಿದ್ದಾರೆ. ಹಾಗೆ ಅವರು ಮತ್ತೊಂದು ಮಾತು ಏನು ಹೇಳಿದರು ಅಂದರೆ, ಜನತಾ ಪಕ್ಷಕ್ಕೆ ಸೇರಿದ್ದರೆ ಇವರಿಗೆ ತೊಂದರೆ ಇರಲಿಲ್ಲವಂತೆ. ಇವೊತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷ ಜನರಿಂದ ರಿಜೆಕ್ಟ್ ಆಗಿದೆ ಆದರಿಂದ ಅದಕ್ಕೆ ಸೇರಬಾರದಾಗಿತ್ತು ಎಂದು ಅವರ ಅಭಿಪ್ರಾಯ. ಜನತಾ ಪಕ್ಷಕ್ಕೆ ಸೇರಿದ್ದರೆ ಅದಕ್ಕೆ ಆಕ್ಷೇಪಣೆ ಎತ್ತುತ್ತಾ ಇರಲಿಲ್ಲ ಅಂತ ಏತಕ್ಕೆ ಹೇಳಿದರು ಅನ್ನುವ ವಿಚಾರವನ್ನು ಬಹಳವಾಗಿ ಯೋಚನೆ ಮಾಡಿದೆ. ನನಗೆ ಗೊತ್ತಾಗಿದ್ದು ಏನು ಅಂದರೆ ಇವರ ಪಕ್ಷಕ್ಕೆ ಜನತಾ ಪಕ್ಷದಿಂದ ಕೆಲವರನ್ನು ಸೇರಿಸಿಕೊಂಡಿದ್ದಾರೆ. ಆದ್ದರಿಂದ ಆ ಮಾತನ್ನು ಹೇಳುತ್ತಿದ್ದಾರೆ. ನಾನು ಜನತಾ ಪಕ್ಷಕ್ಕೆ ಸೇರಿದ್ದರೆ ಪರವಾಗಿಲ್ಲ ಅಂತ ಅವರು ಹೇಳುವುದಕ್ಕೆ ಅದೇ ಕಾರಣ. ಐದಾರು ಜನರಂತೂ ಜನತಾ ಪಕ್ಷದಿಂದ ಅವರ ಪಕ್ಷಕ್ಕೆ ಸೇರಿಸಿಕೊಂಡಿರತಕ್ಕದ್ದು ನಿಜ ಶ್ರೀಮತಿ ಇಂದಿರಾ ಗಾಂಧಿಯವರ ವ್ಯಕ್ತಿತ್ವ ದೊಡ್ಡದು ಇದೆ. ನಾವು ಮಾನ್ಯತೆ ಕೊಡಬೇಕು, ನೀವು ಹಿಂದೆ ಕೊಟ್ಟಿದ್ದೀರಿ ಹಾಗೆ ಎನ್ನುವುದನ್ನು ಹೇಳಿದ್ದಾರೆ. ಅದನ್ನು ನಾನಾದರೂ ಇಲ್ಲ ಅಂತ ಹೇಳಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ದೊಡ್ಡ ವ್ಯಕ್ತಿ ಅಲ್ಲ ಎಂದು ನಾನು ಹೇಳಲಿಲ್ಲ. ದೊಡ್ಡ ವ್ಯಕ್ತಿ ಆದಾಕ್ಷಣ ಅವರಲ್ಲಿ ಯಾವ ವಿಧವಾದ ನ್ಯೂನತೆಗಳು ಇಲ್ಲ ಅಂತ ಹೇಳಿ ಅವರು ಹೇಳುವುದಾದರೆ ನಾನು ಅವರಿಗೆ ತಿಳಿಸಬೇಕಾಗುತ್ತದೆ ಅದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ ಎಂದು. ಹಾಗೆ ಅವರು ಇನ್ನೊಂದು ಮಾತು ಹೇಳಿದ್ದು ಮೊನ್ನೆ ಮೊನ್ನೆಯ ವರೆಗೂ ನೀವು ಅವರ ಬಗ್ಗೆ ಹೊಗಳಿದ್ದೀರಿ. ಹಾಗೆ ಎನ್ನುವ ಮಾತನ್ನು ತಿಳಿಸಿದ್ದಾರೆ. ನಿಜ, ನಾನು ಅವರ ಬಗ್ಗೆ ಒಳ್ಳೆಯ ಮಾತು ಆಡಿದ್ದೇನೆ. ಅವರು ದೊಡ್ಡ ಲೀಡರ್ ಅನ್ನತಕ್ಕ ಮಾತನ್ನು ಹೇಳಿದ್ದೇನೆ. ವಾಸ್ತವಾಂಶ ನಮಗೆ ಗೊತ್ತಾದಾಗ ಅದನ್ನು ಮರೆತು ಸುಮ್ಮನೆ ಇರುವುದಕ್ಕೆ ಸಾಧ್ಯವಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ೧೯೭೭ನೇ ಇಸವಿಯಲ್ಲಿ ಸೋತಮೇಲೆ ಏನಾಗಿದೆ ಎನ್ನುವುದನ್ನು ಕೂಡ ನಾನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಅದು ವಿರೋಧ ಪಕ್ಷದ ನಾಯಕರಾದಂತಹ ಗುಂಡೂರಾವ್ ಅವ ರಿಗೆ ಗೊತ್ತಿಲ್ಲದೇ ಏನೂ ಇಲ್ಲ. ಅವರು ಕೆಲವಾರು ತಿಂಗಳು ಮನೆಯಿಂದ ಹೊರಗಡೆ ಬರುವುದಕ್ಕೆ ಹಿಂದೂ ಮುಂದೆ ನೋಡುವ ಕಾಲ ಇತ್ತು. ಆ ಕಾಲದಲ್ಲಿ ನಾನು ಒಬ್ಬನೇ ಅಂತ ಅಲ್ಲ, ನಾನು ಮತ್ತು ನಮ್ಮ ಕರ್ನಾ ಟಕದ ಸ್ನೇಹಿತರು ಎಲ್ಲಾ ಸೇರಿ ಅವರಿಗೆ ಧೈರ್ಯ ತುಂಬಿ ಹೊರಗಡೆ ಕರೆದುಕೊಂಡು ಬಂದದ್ದು ಉಂಟು. ಅದೇ ರೀತಿ ಚಿಕ್ಕಮಗಳೂರು ಎಲೆಕ್ಷನ್‌ಗೆ ನಿಲ್ಲಬೇಕಾದರೆ ಕೊನೆಯ ದಿವಸದವರೆಗೆ ಅವರು ಬರುವುದಕ್ಕೆ ಹಿಂದೂಮುಂದು ನೋಡಿದರು. ಮತ್ತೆ ಅನೇಕರು ಅವರಿಗೆ ಚಾಡಿ ಹೇಳಿ, ನಾವೇನೇ ಅವರಿಗೆ ವಿರೋಧ ಮಾಡುತ್ತೇವೆ ಅಂತ ಹೇಳಿ ಅದನ್ನೂ ಕೂಡ ಅವರ ಕಿವಿಗೆ ತಿಳಿಸಿದ್ದರು. ಕಡೆಗೆ ಕೊನೇ ದಿವಸ ಒಪ್ಪಿ ಎಲೆಕ್ಷನ್ನಿಗೆ ಬಂದರು ಚುನಾವಣೆಯಲ್ಲಿ ನಿಂತರು, ಅನಂತರ ಗೆದ್ದರು. ಈ ಚುನಾವಣೆ ಗೆಲುವಿಗೆ ನಾನೆಂದೂ ನಾನು ಒಬ್ಬನೇ ಕಾರಣ ಎಂದು ಹೇಳಿಲ್ಲ ಪರೋಕ್ಷವಾಗಿ ಆಗಲಿ, ಪ್ರತ್ಯಕ್ಷವಾಗಿ ಆಗಲಿ ಆ ಮಾತನ್ನು ನಾನು ಎಂದೂ ಹೇಳಿಲ್ಲ. ಆದರೆ ಚುನಾವಣೆಗೆ ನನ್ನಿಂದ ಏನೂ ಪಾತ್ರ ಇಲ್ಲವೇ ಇಲ್ಲ ಮುಖ್ಯಮಂತ್ರಿ ಗಳಾದವರಿಂದಾಗಲಿ ನಮ್ಮ ಪಕ್ಷದ ಕಾರ್ಯಕರ್ತರಿಂದ ಆಗಲಿ ಪಾತ್ರ ಇಲ್ಲ. ಶ್ರೀಮತಿ ಇಂದಿರಾ ಗಾಂಧಿ ಯವರೊಬ್ಬರಿಂದಲೇ ಚುನಾವಣೆ ಗೆದ್ದು ಹೋಯಿತು ಅಂತ ಅಂದರೆ ಅದನ್ನು ಶ್ರೀಮಾನ್ ಗುಂಡೂ ರಾವ್ ಅವರು ಒಬ್ಬರೇ ಹೇಳಿಕೊಳ್ಳಬೇಕಷ್ಟೆ. ಲೋಕದಲ್ಲಿ ಯಾರೂ ಅದನ್ನು ಒಪ್ಪುವುದಿಲ್ಲ. ಚುನಾ ವಣೆ ಕಳೆದ ಮೇಲೆ ನಮ್ಮ ದೇಶದ ಪತ್ರಿಕೆಗಳೇ ಅಲ್ಲ ಹೊರ ದೇಶದ ಪತ್ರಿಕೆಗಳು ಕೂಡ ಇದಕ್ಕೆ ಯಾರಿಂದ

ಶಕ್ತಿ ಬಂದಿದೆ ಅಂತ ಹೇಳಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಗಂಟೆಗಟ್ಟಲೆ ವಾದ ಮಾಡಿದರು. ಅವರ ವಾದ ಏನು ಅಂದರೆ ಶ್ರೀಮತಿ ಇಂದಿರಾ ಗಾಂಧಿಯವರ ಒಂದು ವ್ಯಕ್ತಿತ್ವದ ಮೇಲೆ ಎಲ್ಲಾ ನಡೆದುಕೊಂಡು ಬಂದಿದೆ. ಆ ವ್ಯಕ್ತಿತ್ವ ಇಲ್ಲದೇ ಇರುವುದರಿಂದ ಇಲ್ಲಿ ಏನೂ ನಡೆಯುವುದಿಲ್ಲ. ಸೂರ್ಯ ನಾಳೆ ಹುಟ್ಟುವುದಿಲ್ಲ ಎನ್ನುವ ರೀತಿ ಅವರು ವಾದ ಮಾಡಿದರು. ಶ್ರೀಮತಿ ಇಂದಿರಾ ಗಾಂಧಿ ಅವರ ವ್ಯಕ್ತಿತ್ವ ಇದ್ದರೆ ಸೂರ್ಯ ಹುಟ್ಟುವುದು ಇಲ್ಲದಿದ್ದರೆ ಇಲ್ಲ ಅನ್ನುವ ವಾದ ಮಾಡಿದ್ದಾರೆ, ನಾನು ಒಂದು ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ನಮ್ಮ ಕಾಂಗ್ರೆಸ್ ೧೯೭೮ನೇ ಇಸವಿಯಲ್ಲಿ ಕಾಂಗ್ರೆಸ್(ಐ) ಪಕ್ಷ ಚುನಾವಣೆಯಲ್ಲಿ ನಿಂತು ಗೆದ್ದಾಗ ಎಷ್ಟು ಪರ್ಸೆಂಟೇಜ್ ಆಫ್ ಓಟ್ಸ್ ಬಂತು. ಆಗ ೪೩ ಪರ್ಸೆಂಟ್ ಓಟ್ ಬಂದಿತ್ತು. ಹಾಗೇನೆ ಜನತಾ ಪಕ್ಷಕ್ಕೆ ೩೭ ಪರ್ಸೆಂಟ್ ಓಟ್ ಬಂದಿದ್ದು, ಅದೇ ರೀತಿ ಕಾಂಗ್ರೆಸ್ ಪಕ್ಷಕ್ಕೆ ೮ ಪರ್ಸೆಂಟ್ ಓಟ್ ಬಂದಿತ್ತು. ೧೯೭೭ನೇ ಇಸವಿಯಲ್ಲಿ ಎಷ್ಟು ಪರ್ಸೆಂಟೇಜ್ ಓಟು ಬಂದಿತ್ತು ? ೧೯೭೭ನೇ ಇಸವಿಯಲ್ಲಿ ಕಾಂಗ್ರೆಸ್‌ಗೆ ೫೩.೫೬ ಪರ್ಸೆಂಟ್ ಬಂದಿತ್ತು. ೫೩.೫೬ ಪರ್ಸೆಂಟ್ ಹೋಗಿ ೧೯೭೮ನೇ ಇಸವಿ ಚುನಾವಣೆಯಲ್ಲಿ ೪೩ ಪರ್ಸೆಂಟಿಗೆ ಇಳಿದಿದೆ. ಇದನ್ನೂ ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದನ್ನ ಗಮನದಲ್ಲಿಟ್ಟುಕೊಂಡು ಶ್ರೀಮತಿ ಇಂದಿರಾ ಗಾಂಧಿಯವರ ಚರಿಸ್ಮದಿಂದಲೇ ನಾವು ಗೆದ್ದಿದ್ದೇವೆಂದು ಹೇಳುವುದಾದರೆ, ಅದು ಕಂಟಿನಿಯಸ್ ಆಗಿ ಇದ್ದಿದ್ದ ಪಕ್ಷದಲ್ಲಿ ಈ ಪರ್ಸೆಂಟೇಜ್ ಕಡಿಮೆ ಆಗಲಿಕ್ಕೆ ಕಾರ ಇರಲಿಲ್ಲ ಜಾಸ್ತಿಯಾಗಬೇಕಾಗಿತ್ತು, ಅದು ಕಡಿಮೆಯಾಗಲಿಕ್ಕೆ ಕಾರಣ ಏನು ?

೯-೩೦ ಎ.ಎಂ.

ಕೇವಲ ಇಂದಿರಾ ಗಾಂಧಿಯವರ ಚರಿಷ್ಮದಿಂದಲೇ ಮತಗಳು ಬರುವುದಾಗಿದ್ದರೆ ಕಡಿಮೆಯಾಗುವುದಕ್ಕೆ ಎಂದೆಂದಿಗೂ ಕಾರಣವಿರುತ್ತಿರಲಿಲ್ಲ. ಅಂದರೆ ಬೇರೆ ಕಾರಣಗಳೂ ಇವೆ ಎಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಚುನಾವಣೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಗಾಳಿಯಿಂದಲೇ ಗೆದ್ದಿದ್ದಾರೆ ಅಥವಾ ಗೆಲ್ಲುತ್ತಾರೆ ಎಂದು ಏನು ವಾದ ಮಾಡಿದ್ದಾರೆ ಅದು ಖಂಡಿತವಾಗಿಯೂ ಸರಿಯಲ್ಲ. ಚುನಾವಣೆಯಲ್ಲಿ ಗೆಲ್ಲುವುದಕ್ಕೆ ನಮ್ಮ ಕಾರ್ಯಕ್ರಮಗಳ ಆಧಾರವೂ ಇದೆ. ಜನರನ್ನು ಒಲಿಸಿಕೊಳ್ಳತಕ್ಕ ಮತ್ತು ಜನರಿಗೆ ಉಪಯುಕ್ತವಾಗತಕ್ಕ ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳನ್ನು ನಾವು ಜಾರಿಗೆ ತರುವುದು ಬಹಳ ಮುಖ್ಯ ಎಂಬುದನ್ನು ೭೭ನೇ ಇಸವಿಯ ಹಾಗೂ ೭೮ನೇ ಇಸವಿಯ ಚುನಾವಣೆಯಲ್ಲಿ ನಮಗೆ ಚನ್ನಾಗಿ ಸ್ಪಷ್ಟವಾಗಿದೆ. ಆಂಧ್ರ ಮತ್ತು ಕರ್ನಾಟಕದಲ್ಲಿ ಗೆದ್ದಹಾಗೆ ಬೇರೆ ಕಡೆ ಏತಕ್ಕೆ ಗೆಲ್ಲುವುದಕ್ಕೆ ಆಗಲಿಲ್ಲ ? ಅದೇ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್(ಐ) ಪಕ್ಷಕ್ಕೆ ಸೇರಿದಂಥವರೊಬ್ಬರು ಮುಖ್ಯಮಂತ್ರಿಯಾಗಿದ್ದರು. ಆದರೆ ಅಲ್ಲಿ ಚುನಾವಣೆಯಲ್ಲಿ ದೊಡ್ಡ ಪ್ರಮಾಣದಲ್ಲಿ ನಮಗ ಮತ ಸಿಗಲಿಲ್ಲ. ಅಂದರೆ ಏನಾಯಿತು ? ಅಲ್ಲಿ ಇಂದಿರಾ ಗಾಂಧಿಯವರು ಹೋಗಿರಲಿಲ್ಲವೇ ? ಹೋಗಿದ್ದರೂ ಕೂಡ ವಿದರ್ಭ ಕ್ಷೇತ್ರ ಬಿಟ್ಟರೆ ಬೇರೆ ಎಲ್ಲೂ ಹೆಚ್ಚಾಗಿ ಮತಗಳು ಬರಲಿಲ್ಲ. ಮುಂಬಯಿಯಲ್ಲೂ ಬರಲಿಲ್ಲ. ಮರಾಠವಾಡ ಏರಿಯಾದಲ್ಲೂ ಬರಲಿಲ್ಲ. ಹೀಗೆ ಒಂದೊಂದು ರಾಜ್ಯದಲ್ಲೂ ಒಂದೊಂದು ರೀತಿಯಾದಂಥ ಕಾರಣಗಳಿವೆ. ಮತ್ತೆ ಮಾನ್ಯ ಗುಂಡೂರಾಯರು ಮತ್ತೊಂದು ಮಾತನ್ನು ಹೇಳಿದ್ದಾರೆ ; ಚರಿತ್ರೆಯಲ್ಲಿ ನೀವು ಅಪಾದನೆಗೆ ಗುರಿಯಾಗುತ್ತೀರಿ ಎಂದು. ಚರಿತ್ರೆಯಲ್ಲಿ ಅಪಾದನೆಗೆ ಯಾರು ಗುರಿಯಾಗುತ್ತಾರೆ, ಬಿಡುತ್ತಾರೆ ಎಂಬುದನ್ನು ಕಾದು ನೋಡಬೇಕು. ಚರಿತ್ರೆಕಾರರು ನಮ್ಮ ಕಾಲದಲ್ಲಿ ಬರೆದರೆ......ಯಾರು ಬರೆಯುತ್ತಾರೋ ನನಗೆ ಗೊತ್ತಿಲ್ಲ. ಅಥವಾ ಮಾನ್ಯ ವಿರೋಧಪಕ್ಷದ ನಾಯಕರಾದ ಗುಂಡೂರಾಯರು ಬರೆಸಿದರೆ ಬೇಕಾದ ರೀತಿಯಲ್ಲಿ ಹೇಳಿ ಬರೆಯಿಸಬಹುದು. ಆದರೆ ಸ್ವತಂತ್ರವಾಗಿ ಬರೆಯುವ ಚರಿತ್ರೆಕಾರ ಏನಾದರೂ ಬರೆದರೆ ಅಥವಾ ಏನು ಬರೆಯುತ್ತಾರೆ ಎಂಬುದನ್ನು ಕಾದು ನೋಡೋಣ. ಅದನ್ನು ಈಗ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಚರಿತ್ರೆಕಾರರು ನನ್ನ ಬಗ್ಗೆ ಹಿಯಾಳಿಸಿ ಬರೆಯುತ್ತಾರೆ ಎಂದು ಹೇಳಿದ್ದಾರೆ. ನಾನೂ ಶ್ರೀಮತಿ ಇಂದಿರಾ ಗಾಂಧಿಯವರನ್ನು ಹಿಯಾಳಿಸಿ ಬರೆಯುತ್ತಾರೆಂದು ಹೇಳುವುದಕ್ಕೆ ಹೋಗುವುದಿಲ್ಲ, ಒಂದು ಮಾತ್ರ ಸತ್ಯ, ನಾವು ಮಾಡಿದ ಕೆಲಸವನ್ನು ಎಲ್ಲರೂ ಮೆಚ್ಚಿದ್ದಾರೆ. ನನ್ನನ್ನು ಕಾಂಗ್ರೆಸ್(ಐ) ಪಕ್ಷದಿಂದ ಹೊರಗೆ ಹಾಕಿದರು. ತದನಂತರ ನಾವೇ ಕರ್ನಾಟಕ ಕಾಂಗ್ರೆಸ್ ಪಕ್ಷ ಎಂದು ಮಾಡಿದೆವು. ಈ ವಿಚಾರದಲ್ಲಿ ಮಾತ್ರ ಭಾರತದ ಎಲ್ಲಾ ಭಾಷೆಯ ಪತ್ರಿಕೆಗಳವರೂ ಶ್ರೀಮತಿ ಇಂದಿರಾ ಗಾಂಧಿಯವರು ಮಾಡಿದಂಥ ಕಾರ್ಯವನ್ನು ಎತ್ತಿ ಹಿಡಿಯಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ಮಾಡಿದ್ದು ಸರಿಯಲ್ಲ ಎಂದು ಎಲ್ಲಾ ಪತ್ರಿಕೆ

ಗಳು ತಮ್ಮ ಎಡಿಟೋರಿಯಲ್‌ನಲ್ಲಿ ಬರೆದಿದ್ದಾರೆ. ಹೊರಗಡೆ ದೇಶದ ಪತ್ರಿಕೆಗಳೂ ಎಡಿಟೋರಿಯಲ್ ಬರೆದಿವೆ. ಇದೆಲ್ಲಾ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಆರ್. ಗುಂಡೂರಾವ್.—ಎಲ್ಲಾ ಗೊತ್ತಿದೆ. ನೀವೇ......

ಶ್ರೀ ಡಿ. ದೇವರಾಜ ಅರಸ್.—ನಾನೇ ಹೇಳಿ ಬರೆಸುವಷ್ಟು ಚೈತನ್ಯ ನನಗಿಲ್ಲ. ಅದು ನಿಮಗೂ ಮತ್ತು ನಿಮ್ಮ ಮಿತ್ರರಿಗೂ ಇರಬಹುದು. ಆಮೇಲೆ ಅವರಿಗೆ ನಾನು ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಶ್ರೀಮತಿ ಇಂದಿರಾ ಗಾಂಧಿಯವರಿಗೆ ನನ್ನನ್ನು ಪಕ್ಷದಿಂದ ಹೊರಗೆ ಹಾಕುವುದಕ್ಕೆ ಏನು ಕಾರಣವಿತ್ತು ? ಅವರು ಯಾರನ್ನು ಈ ಪಕ್ಷಕ್ಕೆ ಅಧ್ಯಕ್ಷರನ್ನು ಮಾಡಿದರೋ ಆ ಅಧ್ಯಕ್ಷರನ್ನು ನಾವು ಒಪ್ಪಲಿಲ್ಲ. ಮತ್ತೆ ನಾನೇ ಪ್ರದೇಶ ಕಾಂಗ್ರೆಸ್ ಸಮಿತಿ ಕರೆದು ನಾವೇ ಒಬ್ಬ ಅಧ್ಯಕ್ಷರನ್ನು ಪ್ರಜಾಸತ್ತೆ ರೀತ್ಯ ಚುನಾಯಿಸಿದೆವು. ಇದು ನಾನು ಮಾಡಿರತಕ್ಕ ತಪ್ಪು. ಈ ನನ್ನ ತಪ್ಪಿಗೆ ಅವರು ಕೊಟ್ಟ ಶಿಕ್ಷೆ ೬ ವರ್ಷಗಳ ಕಾಲ ನನ್ನನ್ನು ಪಕ್ಷದಿಂದ ಹೊರಗೆ ಹಾಕಿರತಕ್ಕದ್ದು.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಒಂದೇ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

ಶ್ರೀ ಬಿ. ಬಾಸ್ಕರ ಶೆಟ್ಟಿ.—ಆಮೇಲೆ ಕೇಳಿ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಒಂದೇ ಒಂದು ಸಣ್ಣ ಕ್ಲಾರಿಫಿಕೇಷನ್ ಅಷ್ಟೇ. ಆಡ್‌ಹಾಕ್ ಕಮಿಟಿ ಅಧ್ಯಕ್ಷರನ್ನಾಗಿ ಬಂಗಾರಪ್ಪನವರನ್ನೇ ಮಾಡಬೇಕು ಎಂದು ಹೇಳಿ ನೀವು ನಿಮ್ಮ ಪೊಲಿಟಿಕಲ್ ಸೆಕ್ರೆಟರಿ ಸ್ವಾಮೀಜಿ ಮತ್ತು ರಾಜ್ಯ ಸಭಾ ಸದಸ್ಯರಾದ ಶ್ರೀ ಬಸವರಾಜ್ ಅವರನ್ನು ದೆಹಲಿಗೆ ಕಳುಹಿಸಿದ್ದು ನಿಜವೇ ?

ಶ್ರೀ ಡಿ. ದೇವರಾಜ ಅರಸ್.—It is utterly a falsehood. ಅದು ಅಪ್ಪಟ ಸುಳ್ಳು. ಶುದ್ಧ ಸುಳ್ಳು. ಈ ರೀತಿಯಾಗಿ ಅವರು ಪ್ರಜಾಸತ್ತೆಗೆ ವಿರುದ್ಧವಾಗಿ ಏತಕ್ಕೆ ಮಾಡಿದರು ಎಂಬ ಮಾತನ್ನು ಕೇಳುವ ಚೈತನ್ಯ ನಿಮ್ಮ ವಿರೋಧ ಪಕ್ಷದ ನಾಯಕರಿಗೆ ಏತಕ್ಕೆ ಬರಲಿಲ್ಲ ಎಂದು ನಾನು ಕೇಳುತ್ತೇನೆ...ಇವರು ಶ್ರೀಮತಿ ಇಂದಿರಾ ಗಾಂಧಿಯವರಿಗೆ ಮತ್ತು ಸಂಜಯ್ ಗಾಂಧಿಯವರಿಗೆ ಬಹಳ ಆಪ್ತರು ಎಂಬುದು ಎಲ್ಲರಿಗೂ ಗೊತ್ತಿದೆ. ಅದರಲ್ಲೂ ನನ್ನ ಸಂಪುಟದಲ್ಲಿ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಕೇಳಬಾರದಾಗಿತ್ತೆ ? ನೀವು ಮಾಡುವುದು ಸರಿಯಿಲ್ಲ ಎಂದು ಹೇಳುವುದಕ್ಕೆ ಆಗುತ್ತಿರಲಿಲ್ಲವೆ? ಇವರು ಏತಕ್ಕೆ ತಪ್ಪಿಸಲು ಪ್ರಯತ್ನ ಮಾಡಲಿಲ್ಲ ? ಅವರು ಪ್ರಯತ್ನಪಡಲಿಲ್ಲ ಎಂದು ನಾನೇನು ವ್ಯಥೆ ಪಡುತ್ತಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ ನನ್ನನ್ನು ಇಷ್ಟೊಂದು ವಿಚಾರ ಕೇಳಿದರಲ್ಲಾ, ಅದ್ದರಿಂದ ನಾನು ಕೇಳುತ್ತಿದ್ದೇನೆ. ಇದರಿಂದ ಇವರಿಗೂ ನನ್ನನ್ನು ಪಕ್ಷದಿಂದ ಓಡಿಸಲಿ ಎಂಬ ಅಭಿಪ್ರಾಯ ಇತ್ತು ಎಂದು ನಾನು ಊಹೆ ಮಾಡಬೇಕಾಗುತ್ತದೆ, ಇದರ ಜೊತೆಗೆ ಶ್ರೀಮತಿ ಇಂದಿರಾ ಗಾಂಧಿಯವರ ಹತ್ತಿರ ಅನೇಕರು ಚಾಡಿಗಳನ್ನು ಹೇಳುತ್ತಾ ಹೋದರು. ಶ್ರೀಮತಿ ಇಂದಿರಾ ಗಾಂಧಿಯವರಿಗೆ ಸ್ವಲ್ಪ ಹಿತ್ತಾಳೆ ಕಿವಿ. ಜೊತೆಗೆ ಅವರು ಯಾರನ್ನೂ ನಂಬುವುದಿಲ್ಲ ಅವರಿಗೂ suspicious mind ವಿಪರೀತ. ಅದಕ್ಕೆ ತಕ್ಕಂತೆ ಕೆಲವು ಜನರೂ ಅವರ ಹತ್ತಿರ ಹೋಗಿ ಚಾಡಿ ಹೇಳುತ್ತಿದ್ದರು. ೧೯೭೮ನೇ ಇಸವಿ ಆದಮೇಲೆ ಏನೋ ಬದಲಾವಣೆಯಾಯಿತು ಎಂದು ಶ್ರೀಮಾನ್ ಚಂದ್ರಶೇಖರ್ ಅವರು ಹೇಳುತ್ತಿದ್ದರು. ನಿಜ. ಆ ಬದಲಾವಣೆ ಏತಕ್ಕಾಯಿತು ಎಂಬುದು ನನಗೆ ಗೊತ್ತಿದೆ. ಕೆಲವು ಜನರು ಶ್ರೀಮತಿ ಇಂದಿರಾ ಗಾಂಧಿಯವರ ಹತ್ತಿರ ಹೋಗಿ ಹೇಳಿ ಹೇಳಿ... ...ನೀವು ಹೇಳಿದ್ದೀರಿ ಎಂದು ನಾನು ಹೇಳುವುದಿಲ್ಲ, ಬೇರೆಯವರಿಗೆ ಆಗಿಂದಾಗ್ಗೆ ನಾನು ಕೂತರೆ, ನಿಂತರೆ, ಇನ್ನೊಬ್ಬರ ಹತ್ತಿರ ಮಾತನಾಡಿದರೆ, ಬೊಂಬಾಯಿಗೆ ಹೋದರೆ, ಎಲ್ಲದಕ್ಕೂ ಇವನು ಏನೊ ನಿಮ್ಮ ವಿರುದ್ಧವಾಗಿ ಪಿತೂರಿ ಮಾಡುತ್ತಿದ್ದಾನೆ ಎಂದು ಶ್ರೀಮತಿ ಇಂದಿರಾ ಗಾಂಧಿಯವರ ಹತ್ತಿರ ಹೇಳಿಕೊಂಡು ಬಂದರು. ನಾನುಒಂದು ವರ್ಷ ಕಾಲ ಯೂನಿಟಿ ಬಗ್ಗೆ ಪ್ರಯತ್ನ ಮಾಡಿದೆ. ಇದನ್ನೂ ಅವರು ಹೇಳುವಾಗ ಜೊತೆಗೆ ಸೇರಿಸಿಕೊಂಡರು. ದೇವರಾಜ ಅರಸುರವರು ಯೂನಿಟಿಗೆ ಪ್ರಯತ್ನ ಮಾಡುತ್ತಿರುವುದು ನಿಮ್ಮನ್ನು ಕೆಳಕ್ಕೆ ಹಾಕಿ ಅವರು ಮುಂದೆ ಬರುವುದಕ್ಕೆ ಅದಕ್ಕೋಸ್ಕರ ಅವರು ಹೊಂಚು ಹಾಕುತ್ತಿದ್ದಾರೆ ಎಂದು ಶ್ರೀಮತಿ ಇಂದಿರಾ ಗಾಂಧಿಯವರಿಗೆ ಕೆಲವರು ಹೋಗಿ ಹೇಳಿದ್ದಾರೆ. ಅವರೂ ಒಂದು ದಿನ ನನ್ನನ್ನು ಕೇಳಿದರು......ಮಾನ್ಯ ಉಪಾಧ್ಯಕ್ಷರು ಕ್ಷಮಿಸ

ಬೇಕು, ನಾನು ಈಗಾಗಲೇ ಒಂದೂವರೆ ಗಂಟೆಗಳ ಕಾಲ ಮಾತನಾಡಿದ್ದೇನೆ. ನ್ಯಾಯವಾಗಿ ಇದೆಲ್ಲಾ ಸಭೆಯಲ್ಲಿ ಮಾತನಾಡುವ ವಿಚಾರ ಅಲ್ಲ. ಮಾನ್ಯ ವಿರೋಧಪಕ್ಷದ ನಾಯಕರಾದಿಯಾಗಿ ಮಾತನಾಡಿದ ಕಾಂಗ್ರೆಸ್(ಐ) ಪಕ್ಷದ ಮಿತ್ರರೆಲ್ಲಾ ಪೂರ್ತಾ ರಾಜಕೀಯ ಭಾಷಣವನ್ನು ಮಾಡಿರುವುದರಿಂದ ವಿಧಿಯಿಲ್ಲದೇ ನಾನು ಇದನ್ನೆಲ್ಲಾ ಹೇಳಬೇಕಾಗುತ್ತಿದೆ.

ಇಷ್ಟೆಲ್ಲ ನಾವು ವಿಮರ್ಶೆ ಮಾಡಿ ಪ್ರತಿಯೊಂದನ್ನು ಅದು ಹಾಗೆ, ಇದು ಹೀಗೆ ಎಂದೆಲ್ಲಾ ಹೇಳಿದರೂ ಕೂಡ ಅವರಿಗೆ ನಂಬಿಕೆಯೇ ಬರಲಿಲ್ಲ. ಯಾರು ಹೋಗಿ ಚಾಡಿಯನ್ನು ಹೇಳುತ್ತಿದ್ದರೋ ಅವರ ಮಾತೇ ಪ್ರಧಾನವಾಗಿತ್ತು. ಮತ್ತೆ ಅವರ ಮನಸ್ಸು ಬದಲಾವಣೆಯಾಗಲೂ ಇಲ್ಲ. ಅದಕ್ಕೆ ಕಾರಣ ಅವರ ಪ್ರೀತಿಪಾತ್ರರ ಪ್ರಭಾವ ಇದೆ. ಇದರ ಬಗ್ಗೆ ಹಿಂದಿನಿಂದಲೂ ಇರತಕ್ಕಂಥ ಹಿನ್ನೆಲೆ ಇದೆ. ಈ ಹಿನ್ನೆಲೆಯ ಆಧಾರದ ಮೇಲೆ ನಾವು ಅದನ್ನು ಕೇಳಲಿಕ್ಕೆ ಇಷ್ಟಪಡಲಿಲ್ಲ. ಆದ್ದರಿಂದ ಅವರು ಬೇರೆಯವರ ಮಾತನ್ನು ನಂಬಿಕೊಳ್ಳುವುದಕ್ಕೆ ಕಾರಣವಾಯಿತು. ಒಂದು ವರ್ಷ, ಒಂದೂವರೆ ವರ್ಷದಲ್ಲಿಯೇ ಅಧ್ಯಕ್ಷ ಪದವಿಯ ಬದಲಾವಣೆಯನ್ನು ಮಾಡುವುದಕ್ಕೆ ಏನು ಕಾರಣ? ನಾನು ಬೇಡವೆಂದು ಹೇಳಿರಲಿಲ್ಲ. ಅದಕ್ಕೆ ನಾನೂ ಕೂಡಒಪ್ಪಿದೆ. ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಾಗಬೇಕೆಂದು ಹೇಳಿ, ಹಿಂದೆ ಶ್ರೀಮಾನ್ ಬ್ರಹ್ಮಾನಂದರೆಡ್ಡಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದಾಗ, ಆ ಒಂದು ತತ್ವವನ್ನೇ ಅನುಸರಿಸಿ ಎಂದು ನಾವು ಕೇಳಿದಾಗ ಅದಕ್ಕೆ ಅವರು ಒಪ್ಪಲಿಲ್ಲದ ಕಾರಣ ಅವರಿಗೂ ನನಗೂ ಭಿನ್ನಾಭಿಪ್ರಾಯ ಬಂದಿತು. ಅದರ ಪರಿಣಾಮ ಎಲ್ಲಿಗೆ ಹೋಯಿತು ಎಂದರೆ ೧೯೭೮ನೇ ಇಸವಿ ಜನವರಿ ೨-೩ನೇ ತಾರೀಖು ನಾವು ಬೇರ್ಪಡುವ ಪರಿಸ್ಥಿತಿ ಬಂದಿತು. ಕಾಂಗ್ರೆಸ್ ಮತ್ತೆ ಒಡೆಯುವ ಪರಿಸ್ಥಿತಿ ಬಂದಿತು. ಯಾವ ಒಂದು ತತ್ವಕ್ಕೆ what you call internal democracy ನಮ್ಮ ಪಕ್ಷದ ಒಳಗಡೆ ಪ್ರಜಾಸತ್ತೆಯ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನುವ ಉದ್ದೇಶವಿತ್ತೋ, ಅದಕ್ಕೆ ಬೇರೆ ರೀತಿಯಲ್ಲಿ ಒಂದು ಅಡ್‌ಹಾಕ್ ಸಮಿತಿಯನ್ನು ರಚಿಸಿ ಅಡ್ಡದಾರಿಯನ್ನು ಹಿಡಿದರು. ಅದೇ ರೀತಿಯಲ್ಲಿ ಮತ್ತೊಂದು ಸಾರಿ ಅದೇ ತತ್ವವನ್ನು ಅನುಸರಿಸಿ ಇನ್ನೊಂದು ಕೆಲಸಮಾಡುವ ಪ್ರಯತ್ನವನ್ನು ಮಾಡಿದಾಗ ಅದನ್ನು ನಾವು ಪ್ರತಿಭಟಿಸಿದ್ದು ಉಂಟು. ಈ ರೀತಿಯ ಪ್ರತಿಭಟನೆಯ ಪರಿಣಾಮ ಎಲ್ಲಿಯವರೆಗೆ ಹೋಯಿತು ಎನ್ನುವುದೂ ತಮಗೆ ಗೊತ್ತೇ ಇದೆ. ನಾವು ಪ್ರತಿಭಟನೆ ಮಾಡುವುದಿಲ್ಲ ಎಂದು ನಮ್ಮ ಎಲ್ಲಾ ಸ್ನೇಹಿತರು ಹೇಳಿದ್ದಾರೋ ಏನೋ ನನಗೆ ಗೊತ್ತಿಲ್ಲ. ಪ್ರತಿಭಟನೆ ಮಾಡಿದರೂ ಕೂಡ ನನಗೆ ಶಕ್ತಿ ಇಲ್ಲ ಎಂದೆಲ್ಲಾ ಕೂಡ ಹೇಳಿರಬಹುದು. She was misled ಎಂದು ನನ್ನ ಭಾವನೆ. ಈ ರೀತಿ ಮಿಸ್‌ಲೀಡ್ ಮಾಡಿಬಿಟ್ಟರೆ ದೇವರಾಜ ಅರಸ್ ಅವರ ಶಕ್ತಿ ಕಡಿಮೆಯಾಗುತ್ತದೆ, ಅಷ್ಟೇ ಅಲ್ಲ ಅವರ ಹತ್ತಿರ ೮೦ ಜನ ಏನು ಇದ್ದಾರೆ ಅವರೂ ಕೂಡ ಹೊರಗೆ ಬಂದುಬಿಡುತ್ತಾರೆ. ಆಗ ಅವರದೇನು ನಡೆಯುವುದಿಲ್ಲ ಹೀಗೆಂದೆಲ್ಲ ಏನೇನೋ ಹೇಳಿದ್ದಾರೆ. ಅವರು ಅದನ್ನು ನಂಬಿಕೊಂಡು ಈ ರೀತಿ ನನ್ನ ಮೇಲೆ, ಅದು ಯಾರನ್ನು ಅಲ್ಲ. ನನ್ನ ಕ್ಯಾಬಿನೆಟ್‌ನಲ್ಲಿ ಇರತಕ್ಕಂಥವರನ್ನೇ ನನ್ನನ್ನು ಕೇಳದೆ ಅವರ ಕಡೆಗೆ ಎಳೆದುಕೊಂಡಿದ್ದಾರೆ. ಇದು ಸರಿಯೇ? ಇದು ನ್ಯಾಯವೇ? ನಮ್ಮಲ್ಲಿಯೇ ಒಳಜಗಳವನ್ನು ಅವರು ತರತಕ್ಕಂಥದ್ದು ನ್ಯಾಯವೇ? ಅವರು ಏನೇನು ಹೇಳಿಕೊಂಡಿರುತ್ತಾರೋ ಅದು ನನಗಂತೂ ಏನೂ ಗೊತ್ತಿಲ್ಲ. ಕ್ಯಾಬಿನೆಟ್‌ನಲ್ಲಿಯೇ ಇದ್ದುಕೊಂಡು ನನ್ನ ಮೇಲೆ ಪಿತೂರಿ ಮಾಡಿರತಕ್ಕಂಥ ಜನ ಇವರು. ಆ ಪಿತೂರಿಯ ಪರಿಣಾಮ ಈ ರೀತಿ ಆಯಿತು. ಕ್ಯಾಬಿನೆಟ್‌ನಲ್ಲಿ ಇರುವ ಮನುಷ್ಯರು ಮೂರು ದಿವಸದ ಹಿಂದೆ ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ, ಮತ್ತು ಯಾರು ಶ್ರೀಮತಿ ಇಂದಿರಾಗಾಂಧಿಯವರ ತತ್ವವನ್ನು ಪ್ರತಿಭಟನೆ ಮಾಡಬೇಕು, ಪ್ರಜಾಸತ್ತೆ ನಡೆಯಬೇಕು ಎಂದೆಲ್ಲ ಹೇಳಿದ್ದರೋ ಅವರನ್ನೇ ಅಧ್ಯಕ್ಷರನ್ನಾಗಿ ಶ್ರೀಮತಿ ಗಾಂಧಿಯವರು ಮಾಡಿದ್ದಾರೆ. ಇದಕ್ಕೆ ಸಾಕ್ಷಿ, ಆ ಸಂದರ್ಭದಲ್ಲಿ ಲಾ ಮಿನಿಸ್ಟರ್ ಅವರು ಇದ್ದರೂ, ಶ್ರೀ ಕೆ.ಬಿ. ಶಿವಯ್ಯನವರೂ ಇದ್ದರು. ನಾನು ಒಬ್ಬನೇ ಇರಲಿಲ್ಲ, ಮೂರು ದಿವಸ ಆದ ಮೇಲೆ ಅವರ ಹೆಸರು ನನಗೆ ಗೊತ್ತಿಲ್ಲದ ಹಾಗೆ ಪತ್ರಿಕೆಯಲ್ಲಿ ಬಂದಿರುತ್ತದೆ.

ಶ್ರೀ ಎಚ್.ಡಿ. ದೇವೇಗೌಡ.—ಇದು ಪಿತೂರಿಯ ಯುಗ.

ಶ್ರೀ ಡಿ. ದೇವರಾಜ ಅರಸ್.—ಕ್ಯಾಬಿನೆಟ್‌ನಲ್ಲಿ ಇದ್ದ ಮನುಷ್ಯನನ್ನು ಈ ರೀತಿ ಅಪಾಯಿಂಟ್ ಮಾಡಿದ್ದಾರೆ ನನ್ನನ್ನು ಕೇಳದೆ, ನನಗೆ ಗೊತ್ತಿಲ್ಲದೆ ಅವರನ್ನು ಅಪಾಯಿಂಟ್ ಮಾಡಿದ್ದು ಯಾವ ಧರ್ಮ? ಇದನ್ನು ಕ್ಯಾಬಿನೆಟ್‌ನಲ್ಲಿಯೇ ಇದ್ದವರು ಒಪ್ಪಿಕೊಳ್ಳುವುದಾದರೂ ಯಾವ ಧರ್ಮ. ಶ್ರೀಮಾನ್ ಗುಂಡೂರಾಯರು ನನಗೆ ರಾಜಕೀಯ ಧರ್ಮವನ್ನು ಹೇಳಿಕೊಡುವುದಕ್ಕೆ ಬರುತ್ತಿದ್ದಾರೆ. ಕ್ಯಾಬಿನೆಟ್ ಅಧ್ಯಕ್ಷರಾಗಿ ಇದ್ದುಕೊಂಡು ಹಿಂದುಗಡೆಯಿಂದ ಬಾಕು ಹಾಕುವುದು ರಾಜಕೀಯ ಧರ್ಮವೇ?

ಇದು ಅವರು ಮಾಡಿರತಕ್ಕಂಥಾದ್ದು ತಾವು ತಿಳಿದುಕೊಂಡ ಹಾಗೆ ಏತಕ್ಕೆ ಜನ ನಿಮ್ಮ ಕಡೆ ಬರಲಿಲ್ಲ ಎಂದು ಹೇಳಿದರೆ, ನಿಮ್ಮ ಚರಿತ್ರೆ ಜನರಿಗೆ ಗೊತ್ತಿದೆ, ನೀವು ಹಿಂದಿನಿಂದಲೂ ಏನು ಮಾಡಿಕೊಂಡು ಬಂದಿರುತ್ತೀರಿ ಎನ್ನುವುದೂ ಎಲ್ಲರಿಗೂ ಗೊತ್ತಿದೆ.

ಶ್ರೀ ಧರ್ಮಸಿಂಗ್.––ಶ್ರೀ ಚರಣಸಿಂಗ್‌ರ ನಾಯಕತ್ವವನ್ನು ತಾವು ಒಪ್ಪಿಕೊಂಡಿದ್ದು ಯಾವ ರಾಜಕೀಯ ಧರ್ಮ.

ಶ್ರೀ ಡಿ. ದೇವರಾಜ ಅರಸ್.––ಶ್ರೀ ಚರಣಸಿಂಗ್‌ರ ನಾಯಕತ್ವವನ್ನು ನಿಮ್ಮ ಮುಖಂಡರೇ ಒಪ್ಪಿಕೊಂಡಿದ್ದು. ಇದೊಂದು ರೀತಿಯ ರಾಜಕೀಯ ಧರ್ಮ. ನಾವು ಒಪ್ಪುವ ಮೊದಲು ಒಪ್ಪಿಕೊಂಡಿದ್ದವರು ಶ್ರೀಮತಿ ಇಂದಿರಾ ಗಾಂಧಿಯವರು. ನೀವು ಅದನ್ನು ಮರೆತಿದ್ದೀರಿ. ಬಹಿರಂಗವಾಗಿ ಹೇಳಿಕೆಯನ್ನು ಕೊಟ್ಟವರು ಯಾರು? ಶ್ರೀ ಚರಣಸಿಂಗ್‌ರವರಿಗೆ ಸಂಪೂರ್ಣವಾಗಿ ಬೆಂಬಲ ಕೊಡುತ್ತೇವೆ ಸಪೋರ್ಟ್ ಕೊಡುತ್ತೇವೆಂದು ಒಪ್ಪಿಕೊಂಡವರು ಯಾರು? ಶ್ರೀಮತಿ ಇಂದಿರಾ ಗಾಂಧಿಯವರಲ್ಲವೇ? ಕೊನೆಯ ಗಳಿಗೆಯಲ್ಲಿ ಅವರಿಗೆ ಮೋಸ ಮಾಡಿದವರು ಯಾರು? ಶ್ರೀಮತಿ ಇಂದಿರಾ ಗಾಂಧಿಯವರೇ? ಆದ್ದರಿಂದ ಚರಣಸಿಂಗ್‌ರ ನಾಯಕತ್ವವನ್ನು ನಾವು ಒಪ್ಪಿಕೊಂಡೆವೆಂದು ಏತಕ್ಕೆ ಹೇಳುತ್ತೀರಿ? ಇದು ಒಂದು ಕಡೆ ಇರಲಿ. ಮೊದಲು ಸಪೋರ್ಟ್ ಮಾಡುತ್ತೇವೆಂದು ಒಪ್ಪಿಕೊಂಡು ಅನಂತರ ಕೊಡಬಾರದು ಎಂದು ಹೇಳುವುದು ರಾಜಕೀಯ ಧರ್ಮವೇ? ಈ ರಾಜಕೀಯ ಧರ್ಮವನ್ನು ನಾವು ಕೇಳುವುದಿಲ್ಲ. ಮತ್ತೆ ಸ್ವಾಮಿ ಭಕ್ತಿಯ ಬಗ್ಗೆ ಮಾತನಾಡಿದರು. ಇದಕ್ಕೆ ಕರ್ಣನ ಉತ್ತರವನ್ನು ಕೊಟ್ಟರು "This is very important; because this is going to lay the foundation for all our political activities. ಶ್ರೀಮಾನ್ ಗುಂಡೂರಾಯರ ಸ್ವಾಮಿ ಭಕ್ತಿಯ ಬಗ್ಗೆ ನಮ್ಮ ಡಿಕ್ಷನರಿಯಲ್ಲಿ ಅರ್ಥ ಇಲ್ಲ. ಅವರು ಏನು ತಿಳಿದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಅವರು ಸ್ವಾಮಿ ಭಕ್ತಿಯ ಬಗ್ಗೆ ಮಾತನಾಡುವಾಗ ಕರ್ಣನನ್ನು, ಕೌರವರನ್ನು ತೆಗೆದುಕೊಂಡು ಹೋಲಿಸಿದರು. ಅವರು ಮಹಾ ಭಾರತ ರಾಮಾಯಣವನ್ನು ಚೆನ್ನಾಗಿ ಕೇಳಿರಬಹುದು, ಮತ್ತು ಓದಿರಲೂಬಹುದು. ಆದರೆ ಓದಿದವರು, ಕೇಳಿದವರು ಎಲ್ಲರೂ ಅದರ ಅರ್ಥವನ್ನು ಪೂರ್ತಿ ತಿಳಿದುಕೊಂಡಿರುತ್ತಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಸ್ವಾಮಿ ಭಕ್ತಿ ಎಂದರೆ ಅವರು ಹೇಳಿದರು, ಅವರ ಮನೆಯ ಕಸವನ್ನು ಗುಡಿಸುವುದಕ್ಕೂ ತಯಾರಾಗಿದ್ದೇನೆಂದು. ಸಂತೋಷ, ಅದಕ್ಕೆ ಬೇಡವೆನ್ನುವವನು ನಾನಲ್ಲ. ಅವರ ಮನೆಯ ಬಟ್ಟೆಯನ್ನಾದರೂ ತೊಳೆಯಲಿ ಅದಕ್ಕೆ ನನ್ನ ಅಭ್ಯಂತರವಿಲ್ಲ, ಆದರೆ ನೀವು ಹಾಗೆ ಮಾಡುತ್ತೀರೆಂದು ನನ್ನನ್ನು ಮಾಡಬೇಕೆಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಹಿಂದೆ ನಾವು ನೀವು ಮಾತನಾಡುವಾಗ ನಿಮಗೆ ನಾನು ಅಡ್ಡಿ ಬಂದಿರಲಿಲ್ಲ. ನಿಮ್ಮ ಸ್ವಾಮಿ ಭಕ್ತಿ ಯಾವ ರೀತಿ ತೋರಿಸುತ್ತೀರೋ ಆರೀತಿ ತೋರಿಸಿ ನನ್ನದೇನು ಅಭ್ಯಂತರವಿಲ್ಲ ಆದರೆ ದೇವರಾಜ ಅರಸು ತೋರಿಸಬೇಕು ಎಂದರೆ ನನ್ನಿಂದಲಂತೂ ಅದು ಸಾಧ್ಯವಿಲ್ಲ. ನನ್ನ ಕತ್ತು ಕೊಯ್ದರೂ ಅದು ಸಾಧ್ಯವಿಲ್ಲ. ನಾನು ರಾಜಕೀಯ ಸನ್ಯಾಸವನ್ನು ತೆಗೆದುಕೊಂಡು ಹೋದರೂ ಅದು ಸಾಧ್ಯವಿಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. What is the concept of Swamy Bhakti ? In the feudal times, this was alright. When there was Kingship, when there was pallegarship, this concept of Swami Bhakti was brought about to see that the people were loyal to the King. To-day, can I say all my friends in the party should have Swami Bhakti? How stupid and nonsense it is ! There are as equal to me as anybody else. I cannot call them subordinates to me. They are all equals. Then loyalty to the party; What does it mean ? Loyalty to the party means loyalty to the party programmes and principles. I am only asked to lead the party and I am not more than that. I understand what it means. ಅಂದರೆ ಶ್ರೀರಾಮನಿಗೆ ಆಂಜನೇಯನು ತೋರಿಸಿದ ಭಕ್ತಿಯನ್ನು ತೋರಿಸಬೇಕಾಗಿತ್ತೇ? ಈಗಿನ ಡೆಮೊಕ್ರೆಟಿಕ್ ಸೆಟ್‌ಅಪ್‌ನಲ್ಲಿ ಆ ಪದಕ್ಕೆ ಅರ್ಥವಿಲ್ಲ. ಶ್ರೀಮಾನ್ ಗುಂಡೂರಾಯರು ಸ್ವಾಮಿ ಭಕ್ತಿ ಬಗ್ಗೆ ಹೇಳಿದರು. ಅವರ ಲಾಯಲ್ಟಿ ಇಂಟರೆಸ್ಟ್ ಎಂದರೆ. ಇಂಡಿವಿಜುಯಲ್ಸ್‌ಗೆ ಲಾಯಲ್ ಆಗಿ ಇರಬೇಕೆಂದು ಅವರ ಅರ್ಥ. ಶ್ರೀಮತಿ ಇಂದಿರಾ ಗಾಂಧಿಯವರು 1972ನೇ ಇಸವಿಯಲ್ಲಿ ನನ್ನನ್ನು ಪಕ್ಷದ ಕನ್‌ವೀನರ್ ಆಗಿ ಮಾಡಿದರು,

ಅನಂತರ ೧೯೭೨ನೇ ಇಸವಿಯಿಂದ ೧೯೭೭ನೇ ಇಸವಿಯವರೆಗೆ ಚೀಫ್ ಮಿನಿಸ್ಟರ್ ಆಗಿ ಮಾಡಿದರು, ಆದ್ದರಿಂದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ನಾನು ಲಾಯಲ್ ಆಗಿ ಇರಲಿಲ್ಲವೆನ್ನುವುದೇ ಅವರ ಪ್ರಲಾಪ.

ಶ್ರೀಮತಿ ಇಂದಿರಾಗಾಂಧಿಯವರು ನನ್ನನ್ನು ಕನ್‌ವಿನರ್ ಮಾಡಿದ್ದು ನಿಜ. ಆದರೆ ಶ್ರೀಮತಿ ಇಂದಿರಾ ಗಾಂಧಿಯವರು ಏತಕ್ಕಾಗಿ ನನ್ನನು ಕನ್‌ವೀನರನ್ನಾಗಿ ಮಾಡಿದರು ಎಂಬುದನ್ನು ನೀವು ತಿಳಿದುಕೊಳ್ಳ ಬೇಕು. ೧೯೬೯ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಯಾವ ಒಬ್ಬ ಗಂಡುಮಗನಿಗೂ ಕೂಡ ಬಾವುಟ ಹಿಡಿದುಕೊಂಡು ಶ್ರೀಮಾನ್ ನಿಜಲಿಂಗಪ್ಪನವರ ಎದುರಿಗೆ ಹೋಗುವ ಚೈತನ್ಯ ಇರಲಿಲ್ಲ. ಅದಕ್ಕಾಗಿ ನನ್ನನ್ನು ಕನ್‌ವೀನರ್ ಮಾಡಿದರು. ಇದನ್ನು ಸ್ಪಷ್ಟವಾಗಿ ಎಲ್ಲರೂ ತಿಳಿದುಕೊಳ್ಳಬೇಕು.

ಶ್ರೀ ಆರ್. ಗುಂಡೂರಾವ್.—ಇದೆಲ್ಲಾ ನನಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಮತ್ತೆ ಏತಕ್ಕೆ ಎಲ್ಲಾ ಹೇಳಿದಿರಿ ?

ಶ್ರೀ ಆರ್. ಗುಂಡೂರಾವ್.—ನಾನು ಎಲ್ಲಾ ಆಮೇಲೆ ಹೇಳುತ್ತೇನೆ. ನೀವು ಹೇಳಿದ್ದನ್ನೆಲ್ಲಾ ಬರೆದುಕೊಂಡಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ನಾನು ನನ್ನನ್ನೇ ಮಾಡಿ ಎಂದು ಕೇಳಿಕೊಳ್ಳುವುದಕ್ಕೆ ಹೋಗಿರ ಲಿಲ್ಲ. ಅಥವಾ ಯಾರನ್ನೂ ಹಿಂದುಗಡೆಯಿಂದ ಕಳುಹಿಸಿರಲಿಲ್ಲ. ನಾನು ಆಗ ಬೆಂಗಳೂರಿಗೆ ಹೊರಡ ಬೇಕು ಎಂದಿದ್ದೆ. ಶ್ರೀಮಾನ್ ಸುಬ್ರಹ್ಮಣ್ಯಂ ಅವರು ಆಫೀಸಿಗೆ ಕರೆದು ಹೀಗೆ ಮಾಡಿದ್ದೇವೆ ಎಂದು ಹೇಳಿದರು. ಶ್ರೀಮಾನ್ ನಿಜಲಿಂಗಪ್ಪನವರ ಎದುರುಗಡೆ ಬಾವುಟ ಹಿಡಿದುಕೊಂಡು ಹೋಗುವುದಕ್ಕೆ ಕರ್ನಾಟಕದಲ್ಲಿ ಯಾರಿಗೂ ಧೈರ್ಯ ಇಲ್ಲದಿದ್ದಾಗ ನನ್ನನ್ನು ಮಾಡಿದರೇ ಹೊರತು ಇನ್ನಾವ ಕಾರಣಕ್ಕೂ ಮಾಡಲಿಲ್ಲ. ನಂತರ ೧೯೭೨ನೇ ಇಸವಿಯಲ್ಲಿ ನನ್ನನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಿದರು. ನನ್ನನ್ನು ಮಾಡುವ ಬಗ್ಗೆ ಮೆಜಾರಿಟಿ ಒಪೀನಿಯನ್ ಇತ್ತು, ಆದ್ದರಿಂದ ಮಾಡಿದರು. ಇಲ್ಲ ಎಂದು ನಾನು ಹೇಳುವುದಿಲ್ಲ ಮೆಜಾರಿಟಿ ಒಪೀನಿಯನ್ ಇಲ್ಲದಿದ್ದರೆ ಅವರೂ ಕೂಡ ನನ್ನನ್ನು ಮಾಡುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಆ ರೀತಿ ಮಾಡಿದರೆ ಅವರದೂ ತಪ್ಪಾಗುತ್ತಿತ್ತು ಮೆಜಾರಿಟಿ ಒಪೀನಿ ಯನ್ ಇಲ್ಲದಿದ್ದರೂ ನನ್ನನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಿದ್ದಿದ್ದರೆ ನಾನು ಎಷ್ಟು ದಿವಸ ಇರುವುದಕ್ಕೆ ಆಗುತ್ತಿತ್ತು? ಬೇರೆ ಕಡೆ ಎಷ್ಟೋ ಕಡೆ ಬದಲಾವಣೆಗಳು ಆಗಲಿಲ್ಲವೆ? ಆ ರೀತಿ ನನಗೂ ಆಗುತ್ತಿತ್ತು ನಾನು ೫ ವರ್ಷಗಳ ಕಾಲ ಇಲ್ಲಿ ಉಳಿಯುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಮತ್ತೆ ೧೯೭೮ನೇ ಇಸವಿಯಲ್ಲೂ ನಮ್ಮ ಪಕ್ಷದ ಜನ ನನ್ನನ್ನೇ ಮುಖ್ಯ ಮಂತ್ರಿಯಾಗುವುದಕ್ಕೆ ಒಪ್ಪದಿದ್ದರೆ ನಾನು ಮುಖ್ಯಮಂತ್ರಿ ಯಾಗುವುದಕ್ಕೆ ಎಲ್ಲಿ ಸಾಧ್ಯವಾಗುತ್ತಿತ್ತು? ಬಹುಮತ ನನಗೆ ಇದ್ದುದರಿಂದ ನನ್ನನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದಕ್ಕೆ ಸಾಧ್ಯವಾಯಿತು ಒಟ್ಟಿನಲ್ಲಿ ನನ್ನ ಕಡೆ ಹೆಚ್ಚು ಬಹುಮತ ಇಲ್ಲದಿದ್ದರೆ ಮುಖ್ಯಮಂತ್ರಿಯಾಗಿ ನನ್ನನ್ನು ಮಾಡುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಬಹುಮತ ಇಲ್ಲದೇ ನನ್ನನ್ನು ಮಾಡಿದ್ದಾರೆ ಎಂದು ಯಾರಾದರೂ ಹೇಳಿದ್ದರೆ ಅದು ಸರಿಯಾದ ಮಾತಲ್ಲ. ಆದ್ದರಿಂದ ಮಾನ್ಯ ಗುಂಡೂರಾಯರು ಹೇಳತಕ್ಕ ರಾಜಕೀಯ ಧರ್ಮ ಮತ್ತು ಸ್ವಾಮಿ ಭಕ್ತಿ ಏನಿದೆ ಅದಕ್ಕೆ ಅರ್ಥ ಬೇರೆ, ನಾವು ಇಂದಿನ ಪ್ರಜಾಪ್ರಭುತ್ವಕ್ಕೆ ಅನುಗುಣವಾದಂಥ ಅರ್ಥವನ್ನು ಅದಕ್ಕೆ ಕಲ್ಪಿಸಿಕೊಳ್ಳಬೇಕಾಗುತ್ತದೆ. ಇದನ್ನು ಅವರು ತಿಳಿದುಕೊಳ್ಳಬೇಕು ಅವರನ್ನು ಬದಲಾವಣೆ ಮಾಡಬೇಕು ಎಂಬುದು ನನ್ನ ಉದ್ದೇಶವಲ್ಲ. ಅವರು ಬದಲಾವಣೆಯಾಗುವುದಿಲ್ಲ ಎಂಬುದೂ ನನಗೆ ಗೊತ್ತಿದೆ. ಅವರು ಬದಲಾವಣೆ ಆಗಬೇಕಾದ್ದು ಅಗತ್ಯ ಇಲ್ಲದೇ ಇರಬಹುದು. ನಮ್ಮ ದೃಷ್ಟಿಯಲ್ಲಿ ಸ್ವಾಮಿಭಕ್ತಿ ಎಂದರೆ ಬೇರೆ. ನೀವು (ಗುಂಡೂರಾಯರು) ಸಂಜಯ್ ಗಾಂಧಿಯವರು ಏನು ಹೇಳಿದರೂ... ಬಾವಿ ಯಲ್ಲಿ ದುಮುಕು ಎಂದರೂ ಧುಮುಕುವುದಕ್ಕೆ ತಯಾರಾಗಿದ್ದೀರಿ, ಸಂತೋಷ. ಒಂದು ರೀತಿಯಲ್ಲಿ ಅದನ್ನು ನಾನು ಮೆಚ್ಚುತ್ತೇನೆ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. I do not question your loyalty to an individual. But for heaven sake don't expect me to do it. There may be some others to do that. I don't know. I know definitely you will do that.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—೧೯೭೨ನೇ ಇಸವಿಯಲ್ಲಿ ದೀಕ್ಷಿತರು, ಸದಸ್ಯರನ್ನು ಕನ್‌ಸಲ್ಟ್ ಮಾಡದೇ ತಮ್ಮ ಹೆಸರನ್ನು ಅನೌನ್ಸ್ ಮಾಡಿರಲಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ಅರ್ಥದಲ್ಲಿ ಸ್ವಾಮಿ ಭಕ್ತಿ ಎಂದು ಹೇಳಿದರೆ ಬೇರೆ ಅರ್ಥ ಇಟ್ಟುಕೊಂಡಿದ್ದೇವೆ. ನಮಗೆ ಒಬ್ಬರು ಸ್ವಾಮಿ ಇದ್ದಾರೆ. ನಮಗೆ ಇರುವ ಸ್ವಾಮಿ ಯಾರು ಎಂದು ಹೇಳಿದರೆ ಈ ದೇಶದ ಪ್ರಜೆಗಳು, ಅವರಿಗೆ ನಾವು ಭಕ್ತಿಯನ್ನು ತೋರಿಸಬೇಕಾದುದು ನ್ಯಾಯ. ಅದು ನಮ್ಮ ರಾಜಕೀಯ ಧರ್ಮ. ಪ್ರಜೆಗಳ ಹಿತದೃಷ್ಟಿಯಿಂದ ನಾವು ನಿಷ್ಠೆಯಿಂದ ನಡೆಯಬೇಕು. ಅವರ ಗೋಸ್ಕರ ನಿಷ್ಠೆಯಿಂದ ನಡೆಯಬೇಕಾದ್ದು ನಮ್ಮ ರಾಜಕೀಯಧರ್ಮ. ಅವರನ್ನು ಪ್ರೀತಿಯಿಂದ ಕಾಣಬೇಕಾದ್ದು ನಮ್ಮ ರಾಜಕೀಯ ಧರ್ಮ. ಅವರಿಗೆ ಇರತಕ್ಕ ಕಷ್ಟ ಸುಖಗಳ ಕಡೆ ಗಮನ ಕೊಡ ತಕ್ಕದ್ದು ನಮ್ಮ ರಾಜಕೀಯ ಧರ್ಮ. ಇದು ನಮ್ಮ ಸ್ವಾಮಿ ಭಕ್ತಿ. ಇದನ್ನು ಬಿಟ್ಟು ಶ್ರೀಮತಿ ಇಂದಿರಾಗಾಂಧಿಯವರಿಗೆ ಲಾಯಲ್ಲಾಗಿರು ಎಂದು ಹೇಳಿದರೆ ಅದನ್ನು ನಾನಂತೂ ಒಪ್ಪುವುದಿಲ್ಲ. ಅದು ಸ್ವಾಮಿ ಭಕ್ತಿ ಅಲ್ಲ. ಅದೊಂದು feudal concept. ಯಾವುದೋ ಕಾಲದಲ್ಲಿ ಆ ರೀತಿ ಹೇಳುತ್ತಿದ್ದುದು ನಿಜ. ಮಾನ್ಯ ಗುಂಡೂರಾಯರು ಶಿವಪುರಾಣದಲ್ಲೋ, ಪುಸ್ತಕದಲ್ಲೋ ನೋಡಿಕೊಂಡು ಬಂದಿದ್ದಾರೆ. ಆದ್ದರಿಂದ ಅವರಿಗೆ ಅದೇ ಸ್ವಾಮಿಭಕ್ತಿ ಇರಬಹುದು. ಅದು ನಿಮ್ಮ ಮಟ್ಟಿಗೆ ಸರಿ ಎಂದು ಕಂಡುಬಂದರೆ ಹಾಗೇ ತಿಳಿದುಕೊಳ್ಳಿ. ಆದರೆ ಅದನ್ನು ನಮಗೆ ಕಲಿಸುವುದಕ್ಕೆ ಬರಬೇಡಿ. ನಾವು ಬೇರೆ ಕಲಿತಿದ್ದೇವೆ. ನಿಮಗೆ ಮುಂದೆ ಹೋಗುವುದಕ್ಕೆ ಬೇರೆ ಯಾವ ಮಾರ್ಗವೂ ಇಲ್ಲದೇ ಇರಬಹುದು. ನೀವೇ ಇದನ್ನು ಇಟ್ಟುಕೊಳ್ಳಿ. ಕೆಲವು ದಿವಸಗಳಿಂದ, ಈ ಸರ್ಕಾರ ಉರುಳಿಹೋಗುತ್ತದೆ, ಆಮೇಲೆ ನಮ್ಮ ಪಕ್ಷದವರಿಗೆ ಮುಖ್ಯ ಮಂತ್ರಿ ಸ್ಥಾನ ಸಿಕ್ಕಿ ಹೋಗುತ್ತದೆ ಆದ್ದರಿಂದ ನಮ್ಮ ಪಕ್ಷಕ್ಕೆ ಬೇಗ ಬೇಗ ಬನ್ನಿ, ೩೦ನೇ ತಾರೀಖಿನ ಒಳಗಡೆ ಬರದೇಹೋದರೆ ನಮ್ಮ ಬಸ್ ಮುಂದಕ್ಕೆ ಹೊರಟುಹೋಗುತ್ತದೆ ಈಗಲೇ ಬೇಗ ಬೇಗ ಬನ್ನಿರಿ ಎಂದೆಲ್ಲಾ ಹೇಳುತ್ತಿದ್ದುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ೩೦ನೇ ತಾರೀಖು ಮುಗಿದಮೇಲೆ ಬೇರೆ ತರಹ ಶುರು ಮಾಡಿದರು. 'ನೋಡಿ ದೇವರಾಜ ಅರಸು ಸರ್ಕಾರ ಅಸೆಂಬ್ಲಿಯನ್ನು ರದ್ದು ಮಾಡುವುದಕ್ಕೆ ಹೊರಟಿದೆ' ಎಂದು ಹೇಳುತ್ತಿದ್ದರು, ನಿನ್ನೆ ಮಾನ್ಯ ವೀರಪ್ಪ ಮೊಯಿಲಿ ಯವರು ಹೇಳುತ್ತಾರೆ ವಿಧಾನಸಭೆಯನ್ನು ರದ್ದು ಮಾಡಿ ಎಂದು. ಅಸೆಂಬ್ಲಿಯನ್ನು ರದ್ದು ಮಾಡುವುದಕ್ಕೆ ದೇವರಾಜ ಅರಸು ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂದು ಹೇಳುತ್ತಿದ್ದ ಅವರೇ ಈಗ ಅಸೆಂಬ್ಲಿಯನ್ನು ರದ್ದು ಮಾಡಬೇಕು ಎಂದು ಹೇಳುತ್ತಿದ್ದಾರೆ. ನಾನು ಅನೇಕ ಸಾರಿ ಹೇಳಿದೆ, ನನಗೆ ಅಸೆಂಬ್ಲಿಯನ್ನು ರದ್ದು ಮಾಡುವುದಕ್ಕೆ ಇಚ್ಛೆ ಇಲ್ಲ ಎಂದು. ಒಂದು ವೇಳೆ ಅವರ ಕಡೆ ಹೆಚ್ಚು ಜನ ಸದಸ್ಯರು ಹೋಗಿ ಅವರಿಗೆ ಬೆಂಬಲ ಕೊಟ್ಟರೆ ಸರ್ಕಾರ ರಚಿಸಬಹುದು. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ನಾನೇ ಆಳಬೇಕು. ನಾನೇ ಮುಖ್ಯಮಂತ್ರಿಯಾಗಿರಬೇಕು, ನಾನಲ್ಲದೆ ಬೇರೆಯವರು ಯಾರೂ ಬರಬಾರದು ಎಂದು ನಾನೆಂದೂ ಯೋಚನೆ ಮಾಡಿಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಿನ್ನೆ ದಿವಸ ಮಾನ್ಯ ವೀರಪ್ಪ ಮೊಯಿಲಿಯವರು ಮಾತನಾಡುತ್ತಿದ್ದಾಗ ವಿಧಾನಸಭೆಯನ್ನು ರದ್ದು ಮಾಡಿ ಹೊಸದಾಗಿ ಚುನಾವಣೆ ನಡೆಸಬೇಕು ಎಂದು ಹೇಳುತ್ತಿದ್ದರು. ಆಗ ಮಾನ್ಯ ಗುಂಡೂರಾಯರು ಇರಲಿಲ್ಲ ಎಂದು ಕಾಣುತ್ತೆ. ಕಾಂಗ್ರೆಸ್ (ಐ) ಪಕ್ಷದ ಉಪನಾಯಕರಾದ ವೀರಪ್ಪ ಮೊಯಿಲಿ ಯವರು ಈ ಮಾತನ್ನು ಹೇಳಿದ್ದಾರೆ ನಾನಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಗುಂಡೂರಾಯರೂ ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅಸೆಂಬ್ಲಿ ರದ್ದು ಮಾಡಿ ಎಂದು ಇವರು ಹೇಳಿದಹಾಗೆ ನನಗೆ ಜ್ಞಾಪಕವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಸೆಂಬ್ಲಿ ರದ್ದು ಮಾಡಿ ಎಂದು ಹೇಳಲಿಲ್ಲ, ನೀವು ರಾಜೀನಾಮೆ ಕೊಟ್ಟು ಚುನಾವಣೆಗೆ ನಿಂತು ಆರಿಸಿಬನ್ನಿ ಎಂದು ಹೇಳಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಅದರ ಅರ್ಥ ಅಷ್ಟೆ.

ಒಬ್ಬ ಸದಸ್ಯರು.—ಅಳಿಯ ಅಲ್ಲ, ಮಗಳ ಗಂಡ.

ಶ್ರೀ ಡಿ. ದೇವರಾಜ ಅರಸ್.—ಇದು ನನ್ನ ಅದೃಷ್ಟವೋ, ದುರದೃಷ್ಟವೋ ಗೊತ್ತಿಲ್ಲ, ಯಾರಿಗೆ ನಾನು ಹೆಚ್ಚು ಸಹಾಯ ಮಾಡುತ್ತೇನೋ ಅವರಿಂದಲೇ ನನಗೆ ಒದೆ ಬೀಳತಕ್ಕದ್ದು. ಅವರಲ್ಲಿ ಶ್ರೀಮಾನ್ ಗುಂಡೂರಾಯರೂ ಒಬ್ಬರು, ಅವರಂತೆ ಇನ್ನೂ ಅನೇಕ ಜನ ಇದ್ದಾರೆ. ಎಲ್ಲಕಿಂತ ಹೆಚ್ಚಾಗಿ ಶ್ರೀಮಾನ್ ಬಂಗಾರಪ್ಪನವರು. ಅವರಿಗೆ ಏನು ತಾಪತ್ರಯ ಇದೆಯೋ ಗೊತ್ತಿಲ್ಲ. ಅವರು ಇನ್ನೂ ಸಭೆಗೆ ಬಂದಿಲ್ಲ. ಅವರು ನಮಗೆ ನೀತಿ, ನಡವಳಿಕೆ, ಆಡಳಿತದ ವಿಚಾರ, ವಗೈರೆ ವಗೈರೆ ಎಲ್ಲಾ

ಹೇಳಿದ್ದಾರೆ. ನಾನು ಒಂದು ಪ್ರಶ್ನೆ ಕೇಳುತ್ತೇನೆ, ಇದೆಲ್ಲಾ ನಿನ್ನೆ ಮೊನ್ನೆ ನಡೆಯಿತೇ? ಅಥವಾ ಎರಡು ತಿಂಗಳಿಂದೀಚೆಗೆ ನಡೆಯಿತೇ? ಅವರು ಮಂತ್ರಿಮಂಡಲ ಬಿಟ್ಟು ಎರಡು ತಿಂಗಳಾಗಿದೆ. ಎರಡು ತಿಂಗಳ ಹಿಂದೆ ಮಂತ್ರಿಮಂಡಲದಲ್ಲಿ ಇವರೆಲ್ಲಾ ಇದ್ದರು. ಶ್ರೀಮಾನ್ ಬಂಗಾರಪ್ಪನವರು ಏಕಾಂಗಿಯಾಗಿ ಅಲ್ಲಿ ಕುಳಿತುಕೊಳ್ಳುತ್ತಿದ್ದರು. ಅವರ ಜೊತೆ ಇನ್ನೊಬ್ಬರಾರೂ ಇರಲಿಲ್ಲ. ಅವರು ನನ್ನ ಪಕ್ಷಕ್ಕೆ ಸೇರುತ್ತೇನೆ ಎಂದಾಗ ಪಕ್ಷಕ್ಕೆ ಸೇರಿಸಿಕೊಂಡು ಮಿನಿಸ್ಟರ್ ಆಫ್ ಸ್ಟೇಟ್ ಮಾಡಿದ್ದಾಯಿತು. ಆಮೇಲೆ ಚುನಾವಣೆಯಲ್ಲಿ ಎಲ್ಲರಂತೆ ಇವರೂ ಗೆದ್ದು ಬಂದರು, ಚುನಾವಣೆಯಲ್ಲಿ ಗೆದ್ದವರನ್ನು ಮಂತ್ರಿ ಕೂಡ ಮಾಡಿದ್ದಾಯಿತು. ಅವರು ಈಗ ಯಾವ ಬಾಯಿಂದ ಮಾತನಾಡುತ್ತಿದ್ದಾರೋ ನನಗೆ ಅರ್ಥವಾಗಲಿಲ್ಲ, ಅವರು ಭಾಷಣ ಮಾಡಿದಾಗ ನಾನು ಇರಲಿಲ್ಲ. ಅವರು ಏನೇನೋ ಬಹಳ ಟೀಕೆ ಮಾಡಿದ್ದಾರೆ. ನಮ್ಮ ಸರ್ಕಾರ ಸರಿಯಿಲ್ಲವೆಂದು ಕಂಡುಬಂದಿದ್ದರೆ, ನಾನು ಇಂಥ ಅಯೋಗ್ಯ ಎಂದು ತಿಳಿದಿದ್ದರೆ ಇವರೆಂಥ ಅಯೋಗ್ಯರು ನನ್ನ ಸರ್ಕಾರದಲ್ಲಿ ಬಂದು ಮಂತ್ರಿಯಾಗುವುದಕ್ಕೆ ಎಂದು ನಾನೂ ಕೇಳಬೇಕಾಗಿದೆ.

10-00 A.M.

He knew that I was a bad fellow; that I was a wicked fellow, that I was a corrupt follow; Whatever you consider wicked and bad, I was that but think of a man who accepts Cabinet post under my leadership. ಪಾಪ, ಇದನ್ನೆಲ್ಲಾ ಅವರು ಮರೆತುಬಿಟ್ಟು ಮಾತನಾಡಿದ್ದಾರೆ, as if these things had not happened. They talked about Chakra Project and they talked about so many other things. I will come to that. ಇವೆಲ್ಲಾ ನೆನ್ನೆ ಮೊನ್ನೆ ನಡೆದದ್ದು ಏನೂ ಅಲ್ಲ. ಶ್ರೀಮಾನ್ ಬಂಗಾರಪ್ಪನವರು ಮಂತ್ರಿಯಾಗಿ ಬರುವುದಕ್ಕಿಂತ ಮುಂಚೆ ನಡೆದದ್ದೋ ಅಥವಾ ಮಂತ್ರಿಯಾಗಿದ್ದಾಗ ನಡೆದದ್ದೋ ಇದನ್ನು ನಾನು ಹೇಳುವುದಿಲ್ಲಾ ಅವರೇ ಹೇಳಲಿ. ಹಾಗೆ ತಿಳಿದಂಥಾವರು ೧೯೭೮ನೇ ಇಸವಿಯಲ್ಲಿ ಚುನಾವಣೆಯಾದ ಮೇಲೆ ಮತ್ತೆ ಮಂತ್ರಿಯಾಗುವುದಕ್ಕೆ ಏತಕ್ಕೆ ಬಂದರು ಅದರಲ್ಲೂ ಕೂಡ ನನಗೆ ಪಿ.ಡಬ್ಲ್ಯು.ಡಿ. ಬೇಕು ಅಂತ ಏತಕ್ಕೆ ತೆಗೆದುಕೊಂಡರು ಎಂದು ನಾನು ಕೇಳುತ್ತೇನೆ.

ಇನ್ನು ಮಾನ್ಯ ಗುಂಡೂರಾಯರು ಬಹಳ ಸ್ವಾರಸ್ಯವಾಗಿ ಹೇಳಿದರು, ಅದೇನೆಂದರೆ ಅವರು ಜನರಲ್ ಎಕ್ಸೈಜ್ ವಿಚಾರ ತೆಗೆದುಕೊಂಡರೇ ವಿನಾ ಜನರಲ್ ಟ್ರಾನ್ಸ್‌ಪೋರ್ಟ್ ಬಗ್ಗೆ ವಿಚಾರ ಹೇಳಲಿಲ್ಲಾ.

ಶ್ರೀ ಆರ್. ಗುಂಡೂರಾವ್.—ನಾನು ಫೀಲ್ಡ್ ಮಾರ್ಷಲ್ ಬಗ್ಗೆ ಹೇಳಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಅದಕ್ಕೇ ತಾವು ಫೀಲ್ಡ್ ಮಾರ್ಷಲ್ ಆಗಿಬಿಟ್ಟಿರಿ. ಅದಕ್ಕೇ ಇಷ್ಟು ಅನಾಹುತಕ್ಕೆ ತಂದಿರಿ. ನಾನು ಕೇಳುತ್ತೇನೆ You did not belong to the category of the Generals. You are the Field Marshal. He said that there are General Excise, General Irrigation, General Mines, General Industries There was Field Marshal of Transport and General of P.W.D. also. ಆವಾಗ ಇವರೆಲ್ಲಾ ಏನು ಮಾಡುತ್ತಾ ಇದ್ದರು? ಬೇರೆ ಜನರಲ್‌ಗಳು ನನಗೆ ಸಹಾಯ ಮಾಡುತ್ತಾ ಇದ್ದರು. ಆದರೆ ಇನ್ನೊಬ್ಬ ಜನರಲ್ ನನಗೆ ಏನು ಮಾಡುತ್ತಾ ಇದ್ದರು ಎಂದು ಕೇಳುತ್ತೇನೆ. ಇದರ ಅರ್ಥ ಏನು ಎಂದರೆ ಅವರು ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದರು ಅನ್ನುವ ಅರ್ಥ. ಶ್ರೀಮಾನ್ ಗುಂಡೂರಾಯರು ನನ್ನ ಬಗ್ಗೆ ವೈಯುಕ್ತಿಕವಾಗಿ ಗೌರವ ಇಟ್ಟುಕೊಂಡಿದ್ದಾರೆ ಅನ್ನುವುದು ನನಗೆ ಗೊತ್ತು ಅಥವಾ ಅವರು ಹಿಂದೆ ಲಘುವಾಗಿ ಮಾತನಾಡುವುದಿಲ್ಲ ಅನ್ನುವುದೂ ಸಹ ಗೊತ್ತಿದೆ. ಆದರೆ ತಾತ್ವಿಕವಾಗಿ ಇಲ್ಲಿ ಬಂದಿರತಕ್ಕಂಥಾದ್ದು ಈ ದೇಶದಲ್ಲಿ ಯಾವುದೇ ರಾಜಕೀಯ ಪಕ್ಷ ಇರಲಿ ಅದರಲ್ಲೂ ನನ್ನ ಪಕ್ಷದಲ್ಲಿ ಆಂತರಿಕ ಪ್ರಜಾಸತ್ತೆ ವಿಷಯದಲ್ಲಿ ಏನು ಮಾರ್ಗ ಇದೆ ಅದು ಎಲ್ಲರಿಗೂ ಗೊತ್ತಿರುವಂಥಾ ಮಾರ್ಗ, ಆ ಮಾರ್ಗದಲ್ಲಿ ಹೋಗಬೇಕು ಅನ್ನುವಾಗ ಹೊಡೆತ ಬಿತ್ತು. ಆ ಹೊಡೆತದಿಂದ ಘರ್ಷಣೆಯೂ ಕೂಡ ಬಂದದ್ದು ನಿಜ. ಆ ಘರ್ಷಣೆಯ ಪರಿಣಾಮವಾಗಿ ನನ್ನನ್ನು ಪಕ್ಷದಿಂದ ಹೊರಗೆ ಹಾಕಿದ್ದೂ ನಿಜ. ಹಾಗೆ ಹೊರಗೆ ನನ್ನನ್ನು ಹಾಕಿದ ಮೇಲೆ ನನ್ನನ್ನು ಸ್ವಾಗತ ಮಾಡಿದ್ದಾರೆ. ನನ್ನ ಜನರು ನನ್ನ ಪಕ್ಷದಸದಸ್ಯರು ಆಗಲಿ ಯಾರೇ ಆಗಲಿ ಶ್ರೀಮತಿ ಇಂದಿರಾಗಾಂಧಿಯವರು ಅವರು ಮಾಡಿರ

ತಕ್ಕಂಥಾ ಕಾರ್ಯ ಸರಿಯಲ್ಲ ಎಂದು ಹೇಳಿ ನನಗೆ ಬೆಂಬಲ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೇ ಯಾವುದಾದರೂ ಒಂದು ರೀತಿಯಲ್ಲಿ ಅವರನ್ನೆಲ್ಲಾ ಕೊಂಡು ಇಟ್ಟುಕೊಳ್ಳಬೇಕಾದಂಥಾ ಅಯೋಗ್ಯ ನಾನಲ್ಲ. ಅವರೂ ಕೂಡ ಅಂಥಾ ಅಯೋಗ್ಯತನವನ್ನು ಪಡೆದಿಲ್ಲಾ ಮತ್ತು ಸದಸ್ಯರನ್ನು ಯಾರೂ ಕೂಡ ಹಾಗೆ ಕೊಂಡು ಇಟ್ಟುಕೊಳ್ಳುವುದಕ್ಕಾಗುವುದಿಲ್ಲಾ. ನೀವು ಬೇಕಾದಷ್ಟು ಇದಕ್ಕೆ ಪ್ರಯತ್ನಪಟ್ಟಿರಿ ಆದರೂ ಸಹ ಮೆಜಾರಿಟಿ ಇರತಕ್ಕಂಥಾ ನಮ್ಮ ಪಕ್ಷವನ್ನು ಒಡೆಯುವುದಕ್ಕೆ ನಿಮ್ಮಿಂದ ಆಗಲಿಲ್ಲಾ. ಇದಕ್ಕೆ ಮೇಲುಗಡೆಯಿಂದಲೂ ಸಹ ಬಂದಿದ್ದರು. ದಿವಸಗಟ್ಟಲೆ ಅವರು ಇಲ್ಲಿಗೆ ಬಂದದ್ದೂ ನನಗೆ ಗೊತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರು ಅವರನ್ನು ಕಳುಹಿಸಿದ್ದಾರೆ ಅವರು ಯಾರು ಅನ್ನುವ ಹೆಸರನ್ನು ನಾನು ಇಲ್ಲಿ ಹೇಳುವುದಿಲ್ಲಾ, ಎಲ್ಲವೂ ನನಗೆ ಗೊತ್ತಿದೆ, ಇಷ್ಟು ಮಾಡಿದರೂ ಕೂಡ ನಿಮ್ಮ ಪ್ರಯತ್ನ ನಡೆಯಲಿಲ್ಲಾ. ಏತಕ್ಕೆ ನಡೆಯಲಿಲ್ಲಾ ಎಂದರೆ ನಿಮಗೆ ಯಾವ ಶಕ್ತಿಯೂ ಇಲ್ಲ ಅದಕ್ಕೆ ಹಾಗಾಗಿದೆ. ಅಲ್ಲದೆ ನಾವು ನಡೆದಂಥಾ ದಾರಿ ಸರಿಯಾಗಿದ್ದುದರಿಂದ ಈ ರೀತಿ ಆಗಿದೆ. ನೀವು ಮಾಡಿದ್ದ ಒಂದು ಕಾರ್ಯವೂ ಸರಿಯಾಗಿ ನಡೆದಿಲ್ಲ. ನಾವು ದಾರಿ ತಪ್ಪಿದ್ದೇವೆ ಎಂದು ನೀವು ಹೇಳುತ್ತೀರಿ. ಆದರೆ ನಾವು ಆ ರೀತಿ ಏನಾದರೂ ದಾರಿ ತಪ್ಪಿದರೆ ಇಷ್ಟು ದಿವಸದವರೆಗೆ ಈ ಸ್ಥಾನದಲ್ಲಿ ಇರುವುದಕ್ಕೆ ಸಾಧ್ಯ ಇರಲಿಲ್ಲಾ. ಇದಕ್ಕೆ ವಿರುದ್ಧವಾಗಿ ಇನ್ನೂ ನಾವು ಮುಂದೆ ಹೋಗುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಆದರೆ ಮುಂದಿನ ಭವಿಷ್ಯವನ್ನು ಯಾರೂ ಹೇಳುವುದಕ್ಕೆ ಬರುವುದಿಲ್ಲಾ ಏತಕ್ಕೆಂದರೆ ನೀವೇನೂ ಜ್ಯೋತಿಷ್ಯಗಾರರಲ್ಲಾ, ನಾನೂ ಅಲ್ಲ. ಮತ್ತು ಯಾರೂ ಕೂಡ ಹಕ್ಕಿ ಶಕುನ ಹೇಳಿದ ರೀತಿಯಲ್ಲಿ ನಡೆಯುತ್ತಾ ಇಲ್ಲಾ. ನೀವು ತಿಳಿದುಕೊಂಡಿರಬಹುದು ನೀವೇ ಮುಂದೆ ಆರಿಸಿ ಬರುತ್ತೇವೆಂದಾಗ ಬರಲಿ ಬೇಡ ಅನ್ನುವುದಿಲ್ಲಾ ನಾವು ಆರಿಸಿ ಬಂದರೆ ನಾವು ಬರುತ್ತೇವೆ, ನೀವು ಆರಿಸಿ ಬಂದರೆ ನೀವು ಬರುತ್ತೀರಿ ಅದಕ್ಕೆ ಯಾರ ಅಭ್ಯಂತರವೇನೂ ಇಲ್ಲ. ಆದರೆ ಮುಂದಿನ ಒಂದು ಭವಿಷ್ಯ ಹಾಗಾಗುತ್ತದೆ ಹೀಗಾಗುತ್ತದೆ. ನಾವು ಹಾಗೆ ಮಾಡುತ್ತೇವೆ. ಹೀಗೆ ಮಾಡುತ್ತೇವೆ ಅಂತ ಸುಮ್ಮ ಸುಮ್ಮನೆ ಹೇಳುವುದಕ್ಕೆ ಬರುವುದಿಲ್ಲಾ. ಹಾಗೆ ತಿಳಿದುಕೊಳ್ಳಬೇಡಿ ಅದಕ್ಕೋಸ್ಕರ ನಾನು ಹೇಳಿದೆ ೫೫-೫೭ ಪರ್ಸೆಂಟ್ ಇದ್ದುದು ೧೯೭೭ರನೇ ಇಸವಿಯಲ್ಲಿ ೪೫ ಪರ್ಸೆಂಟ್‌ಗೆ ಇಳಿದಿದೆ ೩೭ ಪರ್ಸೆಂಟ್ ಓಟು ದೇವೇಗೌಡರಪಕ್ಷಕ್ಕೆ ಬಂದಿದೆ. ನಾವು ನೀವು ಎಲ್ಲಾ ಒಂದೇ ಪಕ್ಷದಲ್ಲಿ ಇದ್ದಂಥಾ ಕಾಲದಲ್ಲಿ ೪೫ ಪರ್ಸೆಂಟ್ ಬಂದಿದೆ. ಯಾವ ಪಕ್ಷಕ್ಕೆ ಏನೂ ಬಂದಿಲ್ಲಾ ಎಂದು ಟೀಕೆ ಮಾಡಿದಿರಿ ಆ ಕಾಂಗ್ರೆಸ್ (ಎಸ್) ಪಕ್ಷಕ್ಕೆ ೮ ಪರ್ಸೆಂಟ್ ಮಾತ್ರ ಬಂದಿದೆ. ಅಲ್ಲಿಗೆ ೩೭ ಪ್ಲಸ್ ೮ ಓಟು ಸೇರಿದರೆ ಎಷ್ಟಾಯಿತು ಅನ್ನುವುದನ್ನು ಲೆಕ್ಕ ಹಾಕಿಕೊಳ್ಳಿ. ಅಲ್ಲಿಗೆ ೪೫ಕ್ಕಿಂತ ಜಾಸ್ತಿಯಾಯಿತು. ಆದರೆ ಒಂದು ವಿಚಾರ, ತಮಗೆ ಹೇಳುತ್ತೇನೆ. ಜನತಾ ಪಕ್ಷಕ್ಕೆ ಮತ ಕೊಟ್ಟಿರುವವರು ಒಬ್ಬರೂ ಕೂಡ ನಿಮಗೆ ಓಟು ಕೊಡುವುದಿಲ್ಲಾ. ಅವರು ಮತ ಕೊಡಬೇಕಾದರೆ ನಿಮಗೆ ಕೊಡಬೇಕು ಇಲ್ಲವೇ ಜನತಾಕ್ಕೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಾಗಾದರೆ ಜನತಾ ನೀವೂ ಸೇರಿ ಏನಾದರೂ ಮಾಡಿಕೊಂಡಿದ್ದೀರಾ?

ಶ್ರೀ ಡಿ. ದೇವರಾಜ ಅರಸ್.—ಅದು ಬೇರೆ ವಿಚಾರ. ಚುನಾವಣೆ ಯಾವ ಸಂದಿಯಲ್ಲಿ ಹೋಗುತ್ತದೋ ನೋಡೋಣ. ರಾಜಕೀಯದಲ್ಲಿ ನೀವು ಹೇಗೆ ಟ್ಯಾಕ್ಟಿಕ್ಸ್ ಮಾಡುತ್ತೀರಿ ಹಾಗೆಯೇ ನಾವು ಕೂಡ ಟ್ಯಾಕ್ಟಿಕ್ಸ್ ಮಾಡಬೇಕಾಗುತ್ತದೆ. ಟ್ಯಾಕ್ಟಿಕ್ಸ್ ಬಗ್ಗೆ ಎಲ್ಲರೂ ಹೊಂಚು ಹಾಕುತ್ತಾರೆ. ಅವರಲ್ಲೂ ಕೂಡ ಶ್ರೀಮತಿ ಇಂದಿರಾಗಾಂಧಿಯವರಿಗೆ ಎಲ್ಲಾ ಟ್ಯಾಕ್ಟಿಕ್ಸ್ ಗೊತ್ತಿದೆ. ತಮಗೆ ಹೇಳಬೇಕಾದರೆ ಇಂಟೀರಿಮ್ ಪ್ರೈಮ್ ಮಿನಿಸ್ಟರ್ ಆಗಿ ಎಂದು ಶ್ರೀಮಾನ್ ಜಗಜೀವನರಾಂ ಅವರಿಗೆ ಶ್ರೀಮತಿ ಇಂದಿರಾ ಗಾಂಧಿಯವರು ಹೇಳಿದರು. ಅದಕ್ಕೆ ಶ್ರೀಮಾನ್ ಜಗಜೀವನರಾಂರವರು ಓಪನ್ ಆಗಿಯೇ ಆಗುವುದಿಲ್ಲಾ ಎಂದು ಹೇಳಿದರು ಇವೆಲ್ಲಾ ಪೇಪರ್‌ನಲ್ಲಿ ಬಂದಿದೆ. ಅವರನ್ನು ಶ್ರೀಮತಿ ಗಾಂಧಿಯವರು ಏತಕ್ಕಾಗಿ ಇಂಟೀರಿಮ್ ಪ್ರೈಮ್‌ಮಿನಿಸ್ಟರ್ ಆಗಿ ಎಂದು ಹೇಳಿದರು ಎಂದು ನಾನು ಕೇಳುತ್ತೇನೆ.

ಶ್ರೀ ಹೆಚ್ ಡಿ. ದೇವೇಗೌಡ.—ಅವರು ತಮ್ಮ ಸ್ಥಾನವನ್ನು ಕಾದಿರಿಸಿಕೊಳ್ಳುವುದಕ್ಕಾಗಿ, ಅಲ್ಲಿ ಬಂದು ಕೂತುಕೊಳ್ಳುವುದಕ್ಕಾಗಿ ಹಾಗೆ ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಈ ಆರು ತಿಂಗಳವರೆಗೆ ಇಂಟೀರಿಮ್ ಪ್ರೈಮ್‌ಮಿನಿಸ್ಟರ್ ಆಗಬೇಕು ಅನ್ನುವುದಕ್ಕೆ ರೆಫ್ಯೂಸ್ ಮಾಡಿದರು. I appreciate he rightly refused.

ಶ್ರೀ ಹೆಚ್.ಡಿ. ದೇವೇಗೌಡ.—ಅವರು ಆ ರೀತಿಯಾಗಿ ಶ್ರೀ ಜಗಜೀವನರಾಂರವರಿಗೆ ಹೇಳಿದ್ದು ತಮ್ಮ ಸ್ಥಾನವನ್ನು ಕಾದಿರಿಸಿಕೊಳ್ಳುವುದಕ್ಕಾಗಿ ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅವರು ಒಬ್ಬ ಹರಿಜನರನ್ನು ಪ್ರೈಮ್ ಮಿನಿಸ್ಟರ್ ಆಗಿ ಮಾಡಿದರೆ ಆ ಹರಿಜನರ ಓಟುಗಳನ್ನು ತೆಗೆದುಕೊಳ್ಳುವಂಥಾ ಪಿತೂರಿ ಅಲ್ಲವೋ ಇದು.

ಶ್ರೀ ಬಿ. ಶಿವಣ್ಣ.—೧೯೭೮ರಲ್ಲಿ ಕಾಂಗ್ರೆಸ್ ಪಕ್ಷ ಸ್ಪ್ಲಿಟ್ ಆದದ್ದು ನಿಮ್ಮ ಸಲುವಾಗಿ ಅನ್ನುವ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನನ್ನ ಸಲುವಾಗಿ ಸ್ಪ್ಲಿಟ್ ಆದದ್ದು ಮತ್ತು ಇಂದಿರಾಗಾಂಧಿಯವರನ್ನು ಪ್ರೆಸಿಡೆಂಟ್ ಆಗಿ ಮಾಡಿದುದನ್ನೂ ಕೂಡ ಹೇಳುತ್ತೇನೆ.

ಶ್ರೀಮತಿ ಇಂದಿರಾಗಾಂಧಿಯವರು ಪ್ರೆಸಿಡೆಂಟ್ ಆಗಬೇಕಾದರೆ ನಾನು ಧೈರ್ಯ ತೆಗೆದುಕೊಂಡೆ. ಆವಾಗ ನಾನು ಒಬ್ಬನೇ ಅಲ್ಲ ನನ್ನ ಜೊತೆಯಲ್ಲಿ ಇದ್ದಂಥಾ ಶ್ರೀಮಾನ್ ಗುಂಡೂರಾಯರೂ ಇದ್ದಾರೆ ಹಾಗೆಯೇ ಇನ್ನೂ ಅನೇಕ ಜನ ನನ್ನ ಸ್ನೇಹಿತರೂ ಇದ್ದಾರೆ. I am not going to take that credit to myself. I am prepared to give a share to him as well. We all joined and brought about the split. If you think it is only because of me, you are wrong. ಒಂದು ವೇಳೆ ನನ್ನ ನೀವು ಅಕ್ಯೂಸ್ ಮಾಡುತ್ತಾ ಹೋದರೆ I am prepared to take it, because of me Mrs. Indira Gandhi was able to become the President; Otherwise, she would not have become the President; You would not have heard her so much to-day. Please understand that. ಎಲ್ಲವೂ ಕೂಡ ಇಂದಿರಾ ಗಾಂಧಿಯವರಿಂದಲೇ ಆಗಿದೆ. ನನ್ನಿಂದ ಏನೂ ಆಗಿಲ್ಲಾ ಎಂದು ತಾವು ಹೇಳುವುದಾದರೆ ಅದನ್ನು ನೀವು ತಿಳಿಯದೇ ಹೇಳಿರಬಹುದು ಹಾಗೇನಾದರೂ ತಿಳಿದು ಹೇಳಿದ್ದರೆ ಅದನ್ನು ಮಕ್ಕಳ ಮಾತು ಎಂದು ನಾನು ಹೇಳಬೇಕಾಗಿದೆ. ಇನ್ನು ಇದಕ್ಕಿಂತ ಕಠಿಣವಾಗಿ ನಾನು ಹೇಳಬೇಕಾಗಿಲ್ಲ, ಮೊದಲು ಶ್ರೀ ಜಗಜೀವನರಾಂ ಅವರನ್ನು ಇಂಟೀರಿಮ್ ಪ್ರೈಮ್ ಮಿನಿಸ್ಟರ್ ಮಾಡುತ್ತೇವೆ ಎಂದು ಹೇಳಿದ್ದಕ್ಕೆ ಅವರು ಒಪ್ಪಲಿಲ್ಲ. ಆದರೆ ಇವೆಲ್ಲಾ ರಾಜಕೀಯದಲ್ಲಿ ಟ್ಯಾಕ್ಟೀಕ್ ಮಾಡಬೇಕಾದ್ದೇ. ನಾವು ಮಾಡುತ್ತೇವೆ, ನೀವೂ ಮಾಡುತ್ತೀರಿ. ಅವರು ಶ್ರೀ ಜಗಜೀವನರಾಂ ರವರನ್ನು ಇಂಟೀರಿಮ್ ಪ್ರೈಮ್ ಮಿನಿಸ್ಟರ್ ಮಾಡುತ್ತೇವೆ ಎಂದು ಮೊದಲು ಏತಕ್ಕೆ ಸ್ಟೇಟ್‌ಮೆಂಟ್ ಕೊಡಬೇಕಾಗಿತ್ತು, ಅವರು ಒಪ್ಪದೇ ಇದ್ದರೂ ಕೂಡ ಏತಕ್ಕೆ ಹೇಳಬೇಕಾಗಿತ್ತು? ಇದೆಲ್ಲಾ ಅವರ ಮತಗಳನ್ನು ಪಡೆಯುವುದಕ್ಕೇನೇ ವಿನಾ ಬೇರೇನೂ ಅಲ್ಲ. ಶ್ರೀ ಜಗಜೀವನರಾಂರವರು ಇದಾವುದಕ್ಕೂ ಒಪ್ಪಲಿಲ್ಲಾ. ಅವರು ಶ್ರೀಮತಿ ಇಂದಿರಾ ಗಾಂಧಿಯವರ ಮಾತಿಗೆ ಬೆಲೆ ಕೊಡಲಿಲ್ಲಾ. ಇದು ಇರತಕ್ಕಂಥಾ ವಿಚಾರ.

ಅಧ್ಯಕ್ಷಣೀಯವರೇ, ಹೀಗೆ ಇವರು ಹಳೆಯ ಕಾಲದ ರಾಜಕೀಯ ಧರ್ಮ ಕನ್ಸಪ್‌ಷನ್‌ನ್ನು ಇಲ್ಲಿ ವ್ಯಾಖ್ಯಾನ ಮಾಡಿ ನಮಗೆ ಈ ರೀತಿಯಾಗಿ ನಡೆಯಬೇಕು ಎಂದು ಹೇಳಿದರೆ ಅದು ನನ್ನಿಂದ ಎಂದಿಗೂ ಸಾಧ್ಯವಿಲ್ಲ. ಮಾನ್ಯ ಚಂದ್ರಶೇಖರ್ ಅವರು ಅಲಹಾಬಾದ್‌ನಲ್ಲಿ ನಾನು ಈ ರೀತಿಯಾಗಿ ಹೇಳಿದೆ ಎಂದು ಒಂದು ಮಾತನ್ನು ಹೇಳಿದರು. ವ್ಯಕ್ತಿಪೂಜೆ ಮಾಡುವುದಕ್ಕೆ ನಾನೆಂದೂ ಒಪ್ಪುವುದಿಲ್ಲ. ನೀವು ಹೋದರೆ ಹೋಗಿ ನಾನು ಅದಕ್ಕೆ ಅಡ್ಡಿಪಡಿಸುವುದಿಲ್ಲ ನಾನಂತೂ ವ್ಯಕ್ತಿಪೂಜೆ ಮಾಡುವವನಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಬೇಕಾದಾಗ ಬಳಸಿಕೊಂಡು ಬೇಡವಾದಾಗ ಬಿಡುವುದು ಎಂದರೆ ಏನು ಅರ್ಥ ?

ಶ್ರೀ ಡಿ. ದೇವರಾಜ ಅರಸ್.—ಅದನ್ನು ಮಾಡಿರುವುದು ನೀವು. ದೇಶದ ಪತ್ರಿಕೆಗಳಲ್ಲಿ ಪ್ರತಿಯೊಂದರಲ್ಲಿ ಅವರವರ ಎಡಿಟೋರಿಯಲ್‌ನಲ್ಲಿ ದೇವರಾಜ ಅರಸ್ ಅವರು ಈ ರೀತಿ ಮಾಡಿದ್ದಾರೆ, ಶ್ರೀಮತಿ ಗಾಂಧಿಯವರು ಮಾಡಿದ್ದು ತಪ್ಪು ಎಂದು ಬರೆದಿದ್ದಾರೆ ಇಲ್ಲಿ ಚಂದ್ರಶೇಖರ್ ಅವರು ಒಬ್ಬರು ನಾನು ತಪ್ಪು ಮಾಡಿದ್ದೇನೆಂದು ಹೇಳಿದರೆ ಅದು ಆಗುವುದಿಲ್ಲ. ನಾನು ಅವರನ್ನು ಬೇಕಾದಾಗ ಬಳಸಿಕೊಂಡೂ ಇಲ್ಲ, ನನ್ನಿಂದಲೇ ಅವರಿಗೆ ಸ್ವಲ್ಪ ಸಹಾಯವಾಗಿದೆ ಎಂದು ನಾನು ಹೇಳಬೇಕಾಗಿದೆ. ಕೃಷ್ಣ ಅರ್ಜುನರು ಜೊತೆಯಲ್ಲಿರುವಾಗ ಕೃಷ್ಣ ಒಬ್ಬನಿಂದಲೇ ಆಯಿತು ಎಂದು ಹೇಳುವುದು ಸರಿಯೇ,

ಅಂಜನೇಯನ ಜೊತೆಯಲ್ಲಿ ರಾಮ ಇರಲಿಲ್ಲವೇ, ಹಾಗೆಯೇ ನಾನು ಇಲ್ಲದೇ ಶ್ರೀಮತಿ ಗಾಂಧಿ ಇರುತ್ತಿರಲಿಲ್ಲ ಎನ್ನುವುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಇಡೀ ಇಂಡಿಯಾ ದೇಶದಲ್ಲಿ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಅವರ ಹತ್ತಿರ ಹೋಗಿ ಮಾತನಾಡುವಂಥ ಗಂಡು ಮಗ ಯಾರು ಇರಲಿಲ್ಲ ಆ ಸಮಯದಲ್ಲಿ ನಾನು ಹೋಗಿ ಅವರನ್ನು ಕರೆದುಕೊಂಡು ಬಂದು ಮಾತನಾಡಿದ್ದೇನೆ. ನೀವೇ ಹೇಳಿ, ನಾನು ಅವರನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಂಡಿದ್ದೇನೆಂದು? ಉಪಯೋಗಿಸಿಕೊಂಡಿರುವುದು ಇಬ್ಬರಲ್ಲಿಯೂ ಇದೆ, ಇದರಲ್ಲಿ ನನ್ನದು ಸ್ವಲ್ಪ ಕಡಿಮೆ ಇದೆ. ಅವರದ್ದೇ ಹೆಚ್ಚಾಗಿರುವುದು. ಇದರ ಮೇಲೆ ನಾನು ಹೆಚ್ಚು ತರ್ಕ ಮಾಡುವುದಕ್ಕೆ ಹೋಗುವುದಿಲ್ಲ. ಕಳೆದ ಚುನಾವಣೆಯಲ್ಲಿ ನಮಗೆ ೪೨ ಪರ್ಸೆಂಟ್ ವೋಟು ಬಂದಿತ್ತು, ಇದರಲ್ಲಿ ನನ್ನ ಪ್ರಯತ್ನದಿಂದ ೪–೫ ಪರ್ಸೆಂಟ್ ಇಲ್ಲವೇ? ಬಾಕಿಯದ್ದು ಎಲ್ಲಾ ನೀವೇ ತೆಗೆದುಕೊಳ್ಳಿ. ಈ ನಾಲ್ಕೈದು ಪರ್ಸೆಂಟ್‌ನಿಂದಲೇ ನಾನು ನಿಮ್ಮನ್ನು ಸೋಲಿಸುತ್ತೇನೆ. ಇದನ್ನು ಮಾತ್ರ ನೀವು ಚನ್ನಾಗಿ ತಿಳಿದುಕೊಳ್ಳಬೇಕು. ನಾನು ಏನೂ ಇಲ್ಲದಿದ್ದರೂ ಸಹ ಎಂಟು ಪರ್ಸೆಂಟ್ ವೋಟು ತೆಗೆದುಕೊಳ್ಳುತ್ತೇನೆ. ನಿಮಗೆ ಒಂದು ಪರ್ಸೆಂಟ್ ವೋಟ್ ಸಹ ಬರುವುದಿಲ್ಲ. ಕಳೆದುಕೊಳ್ಳುವವರೇ ನೀವು. ಇದನ್ನು ನೀವು ಚನ್ನಾಗಿ ಅರ್ಥಮಾಡಿಕೊಳ್ಳಬೇಕು. ಇಲ್ಲಿ ಸುಮ್ಮನೆ ಆಟಾಟೋಪದಿಂದ ಮಾತನಾಡುವುದು ಬೇಡ, ನಿಮಗೆ ಏನು ಇದೆ ಎನ್ನುವುದನ್ನು ಚನ್ನಾಗಿ ಅರ್ಥಮಾಡಿಕೊಳ್ಳಿ. ಇದು ಇರುವ ವಿಚಾರ.

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್.—ಒಬ್ಬರು ಪಂಡಿತರು ಇದ್ದರು, ಹೊಳೆ ದಾಟುವಾಗ ಪಾತ, ಪ್ರಾತ, ಎಂದು ಲೆಕ್ಕ ಹಾಕಿಬಿಟ್ಟರು, ಮತ್ತು ಹೊಳೆ ದಾಟಲಿಕ್ಕೆ ಪ್ರಯತ್ನ ಮಾಡಿದರು, ದಾಟುವಾಗ ಮುಳುಗಿ ಹೋದರು.

ಶ್ರೀ ಡಿ. ದೇವರಾಜ ಅರಸ್.—ನೀವು ಬಹಳ ಬುದ್ಧಿವಂತಿಕೆಯಿಂದ ಮಾತನಾಡಿದ್ದರಲ್ಲಿ ಹುರುಳು ಇಲ್ಲ, ತಿರುಳು ಇಲ್ಲ, ನಾನು ಹೇಳಿದ ಮಾತಿಗೂ ನೀವು ಹೇಳಿದ ಗಾದೆಗೂ ಯಾವ ಸಂಬಂಧವೂ ಇಲ್ಲ. ಶ್ರೀಮಾನ್ ಗುಂಡೂರಾಯರು ನಾವು ಹಾಗೆ ಮಾಡಿದ್ದೇವೆ, ಹೀಗೆ ಮಾಡಿದ್ದೇವೆ, ಎಷ್ಟು ತಪ್ಪು ಮಾಡಿದ್ದೇವೆ, ಯಾವ ರೀತಿ ರಾಜಕೀಯ ಮಾಡಿದ್ದೇವೆ ಎಂದು ಇಷ್ಟೆಲ್ಲಾ ಹೇಳಿದರೂ ಏನೂ ಆಗಲಿಲ್ಲ, ಅದೆಲ್ಲಾ ಹೇಗೆ ಆಗಿದೆ ಎಂದರೆ ಹೊಳೆಯಲ್ಲಿ ಹುಣಸೆ ಹಣ್ಣು ತೇಯ್ದ ಹಾಗಾಗಿದೆ. ಶ್ರೀಮಾನ್ ಗುಂಡೂರಾಯರ ಭಾಷಣ ಹೊಳೆಯಲ್ಲಿ ಹುಣಸೆಹಣ್ಣು ತೇಯ್ದಂತೆ, ಎಲ್ಲಾ ಹೊಳೆಯಲ್ಲಿ ಹೋಗಿದೆ, ಗೊಜ್ಜಿಗೆ ಸ್ವಲ್ಪನೂ ಇಲ್ಲ.

ಶ್ರೀ ಬಿ. ಭಾಸ್ಕರ ನಾಯಿಡು.—ಅವರು ಈ ಕಡೆಗೆ ಬರಲು ಪ್ರಯತ್ನ ಮಾಡುತ್ತಿದ್ದಾರೆ,

ಶ್ರೀ ಡಿ. ದೇವರಾಜ ಅರಸ್.—ಇಲ್ಲಿಗೆ ಬರುವುದು ಬೇಡ, ಅವರು ಹಾಗೆ ಅಲ್ಲಿ ಇರುವುದು ಒಳೆಯದು. ಏಕೆಂದರೆ ಅದರ ಗುಟ್ಟು ನನಗೆ ಗೊತ್ತು ಶ್ರೀಮಾನ್ ಚಂದ್ರಶೇಖರ್ ಅವರು ಮತ್ತೆ ಮಾನ್ಯ ಬಂಗಾರಪ್ಪನವರು ಬಹಳ ಸ್ನೇಹಿತರು. ಅವರ ಸ್ನೇಹ ಹೇಗೆ ಅಂದರೆ ಹಾವು ಮುಂಗಸಿಗೆ ಇದ್ದ ಹಾಗೆ. ಶ್ರೀಮಾನ್ ಚಂದ್ರಶೇಖರ್ ಅವರು ನನ್ನಲ್ಲಿಗೆ ಅನೇಕ ಸಲ ಬಂದು ವರ್ಷಗಟ್ಟಲೆ ಪ್ರಲಾಪ ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರು ಬ್ಯಾಕ್‌ವರ್ಡ್‌ಕ್ಲಾಸ್ ಕಾನ್‌ಫರೆನ್ಸ್ ಮಾಡುತ್ತಿದ್ದಾರೆ, ಅದೂ ನನ್ನ ಕಾನ್ಸ್‌ಟಿಟ್ಯೂಯನ್ಸಿಯಲ್ಲಿ. ನನಗೆ ಗೊತ್ತಿಲ್ಲ. ಯಾರನ್ನೋ ಕರೆದುಕೊಂಡು ಬಂದು ಅಧ್ಯಕ್ಷರನ್ನಾಗಿ ಮಾಡಿದ್ದಾರೆ, ಇದನ್ನು ತಡೆಗಟ್ಟಬೇಕು, ಇಲ್ಲದೇ ಹೋದರೆ ನನಗೆ ಬಹಳ ಕಷ್ಟವಾಗುತ್ತದೆ ಎಂದು ಪ್ರಲಾಪ ಮಾಡಿದ್ದಾರೆ.

ಶ್ರೀ ಎ. ವಿ. ಮುತ್ತಿಕಟ್ಟಿ:—ಪಕ್ಷದ ಸಭೆಯಲ್ಲಿ ಇದರ ಬಗ್ಗೆ ಧರಣಿ ಕೂಡ ಮಾಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅಂಥವರು ಈಗ ಶ್ರೀಮಾನ್ ಬಂಗಾರಪ್ಪನವರ ಅಧ್ಯಕ್ಷತೆಯನ್ನು ಒಪ್ಪಿ ಅವರ ಪಕ್ಷದಲ್ಲಿದ್ದಾರೆ. ಚುನಾವಣೆ ಬಂದಾಗ ಏನೇನು ಆಗುತ್ತದೆ ಎನ್ನುವುದನ್ನು ಅವರೇ ನೋಡಿಕೊಳ್ಳಲಿ. ಅವರು ನಮ್ಮ ಪಕ್ಷಕ್ಕೆ ಬರುವುದೇ ಬೇಡ, ಬಂದರೂ ಅವರನ್ನು ನಾವು ಸೇರಿಸುವುದಿಲ್ಲ.

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್.—ನಾನು ಬರುವುದೇ ಇಲ್ಲ, ಎಂದೇ ನಾನು ಇಂದಿರಾಗಾಂಧಿಯವರ ಪಕ್ಷವನ್ನು ಸೇರಿರುವುದು.

ಶ್ರೀ ವೀರಪ್ಪ ಮೊಯಿಲಿ.—ಬಹಳ ಸಂತೋಷ. ಒಬ್ಬ ಸದಸ್ಯರಾದರೂ ನಮ್ಮಲ್ಲಿ ಖಾಯಂ ಆಗಿ ಉಳಿಯುತ್ತಾರಲ್ಲ.

SRI D. DEVARAJ URS.—You would have achieved something wonderful for which I have to congratulate. What is impossible is being possible and you have achieved. ಮತ್ತೆ ವಿರೋಧ ಪಕ್ಷದ ನಾಯಕರು ಕಾಂಗ್ರೆಸ್(ಐ) ಪಕ್ಷದಲ್ಲಿದ್ದು ಚುನಾವಣೆಯಲ್ಲಿ ಗೆದ್ದು ಬಂದಿದ್ದೀರಿ, ಈಗ ಈ ರೀತಿಯಾಗಿ ಬದಲಾವಣೆಯಾಗಿ ಅಧಿಕಾರದಲ್ಲಿ ಉಳಿಯಲು ಅಧಿಕಾರವಿಲ್ಲ ಎನ್ನುವ ಮಾತನ್ನು ಒಂದಲ್ಲ, ಬಹಳವಾಗಿ, ನಾಲ್ಕಾರು ಬಾರಿ ಹೇಳಿದ್ದಾರೆ. ಶ್ರೀಮಾನ್ ಗುಂಡೂರಾಯರಿಗೆ ಜ್ಞಾಪಕ ಇರುವ ವಿಚಾರ ಒಂದನ್ನು ಇಲ್ಲಿ ನಾನು ಹೇಳುತ್ತೇನೆ. ೧೯೬೯ನೇ ಇಸವಿಯಲ್ಲಿ ಕಾಂಗ್ರೆಸ್ ಒಂದೇ ಆಗಿದ್ದಾಗ, ಜುಲೈ ತಿಂಗಳಲ್ಲಿ ಗ್ಲಾಸ್ ಹೌಸ್‌ನಲ್ಲಿ ಎ.ಐ.ಸಿ.ಸಿ. ಸೆಷನ್ ಆಯಿತು. ಸೆಷನ್ ಆಗಿ ಕಾಂಗ್ರೆಸ್ ಎರಡು ಭಾಗವಾಗಿ ಹೋಯಿತು. ಶ್ರೀಮತಿ ಗಾಂಧಿಯವರು ಒಂದು ಭಾಗ ಶ್ರೀಮಾನ್ ನಿಜಲಿಂಗಪ್ಪನವರದು ಒಂದು ಭಾಗ. ಚುನಾವಣೆಯಲ್ಲಿಯೂ ಶ್ರೀಮತಿ ಗಾಂಧಿಯವರು ಗೆದ್ದರು. Remember that was an united Congress. It was under one symbol and single banner of Indian National Congress, that Smt. Indira Gandhi won and she became the Prime Minister. I ask now why did she not resign from her Prime Ministership because the party was one when she was the Prime Minister. If she did not resign, my dear friend' Leader of the Opposition, you have no right to ask meto resign. What right have you?

ಹೀಗೆ ನನಗೆ ನೀತಿ ಹೇಳುವವರು ಹಿಂದಿನ ಚರಿತ್ರೆ ಏನಾಗಿದೆ ಎಂಬುದನ್ನು ದಯವಿಟ್ಟು ಜ್ಞಾಪಕ ಮಾಡಿಕೊಳ್ಳಬೇಕು. ಮತ್ತೆ ಅಲಹಾಬಾದ್ ಹೈಕೋರ್ಟಿನಲ್ಲಿ ಏನು ತೀರ್ಮಾನವಾಯಿತು, ನಂತರ ಏನೇನು ಆಯಿತು ಎಂಬುದನ್ನೆಲ್ಲಾ ಹೇಳಲು ನಾನು ಈಗ ಹೋಗುವುದಿಲ್ಲ. ಒಟ್ಟಿನಲ್ಲಿ ನಾನು ಹೇಳುವುದಿಷ್ಟೆ, ಈಗ ಕರ್ನಾಟಕದಲ್ಲಿ ಏನಾಯಿತೋ, ಅದೇ ರೀತಿ ಆಗಲೂ ನಡೆದಿತ್ತು. ಆಗ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿ ಪದವಿಯನ್ನು ಬಿಟ್ಟುಕೊಡಲಿಲ್ಲ. ತಮ್ಮ ಕಡೆ ಮೆಜಾರಿಟಿ ಇದೆ ಎಂದು ಅಧಿಕಾರವನ್ನು ಬಿಟ್ಟುಕೊಡಲಿಲ್ಲ. ಆ ಸಮಯದಲ್ಲಿ ದೆಹಲಿಯಲ್ಲಿ ನಡೆದ ಎ.ಐ.ಸಿ.ಸಿ. ಮೀಟಿಂಗ್‌ನಲ್ಲಿ ಭಾಗವಹಿಸಲು ನಾನೂ ಸಹ ಹೋಗಿದ್ದೆ. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ನಮ್ಮ ಕಡೆ ಇದ್ದ ಕಾರಣ ನಮ್ಮದೇ ನಿಜವಾದ ಕಾಂಗ್ರೆಸ್ ಪಕ್ಷವೆಂದು ಹೇಳಿದ್ದು ಮತ್ತು ಶ್ರೀಮತಿ ಇಂದಿರಾಗಾಂಧಿಯವರೇ ಪ್ರಧಾನಮಂತ್ರಿಯಾಗಿ ಮುಂದುವರೆಯಬೇಕೆಂದು ಹೇಳಿದ್ದು ನಿಜ. ಈಗ ನಮ್ಮ ರಾಜ್ಯದಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷವೆಂದು ಡಿಕ್ಲೇರ್ ಮಾಡಲು ಕಾರಣವೇನೆಂದರೆ, ಪಿ.ಸಿ.ಸಿ. ಸದಸ್ಯರು ಹಾಗೂ ವಿಧಾನಸಭಾ ಸದಸ್ಯರು ಮೆಜಾರಿಟಿಯಲ್ಲಿ ನಮ್ಮ ಕಡೆ ಇದ್ದರು. ಇದನ್ನೆಲ್ಲಾ ತಾವು ತಿಳಿದುಕೊಳ್ಳದೆ ನನ್ನನ್ನು ಅಧಿಕಾರ ಬಿಡು ಬಿಡು ಎಂದು ಹೇಳಿದರೆ, ಅದಕ್ಕೆ ನಿಮಗೆ ಯಾವ ಆಧಾರವಿದೆ. ಯಾವ ಶಕ್ತಿ ಇದೆ ಎಂಬುದನ್ನು ದಯವಿಟ್ಟು ಹೇಳಿ. ಮತ್ತೆ ನಾವು ನಂಬಿರತಕ್ಕಂಥ ಕಾರ್ಯಕ್ರಮ ಹಾಗೂ ಪ್ರಣಾಳಿಕೆಯನ್ನು ಮೊದಲು ಜನತೆಯ ಮುಂದಿಡಬೇಕೇ ಹೊರತು, ವ್ಯಕ್ತಿ ಪೂಜೆಯನ್ನಲ್ಲ. ಎಲ್ಲಿಯವರೆಗೆ ವ್ಯಕ್ತಿ ಪೂಜೆಯನ್ನು ಮುಂದಾಗಿ ಇಡಲಾಗುತ್ತದೋ ಅಲ್ಲಿಯವರೆಗೆ ಯಾವ ಪಕ್ಷಕ್ಕೂ ಭವಿಷ್ಯವಿಲ್ಲ ಮತ್ತು ಈ ದೇಶಕ್ಕೂ ಆಘಾತ. ಈ ಮಾತನ್ನು ನಾನು ಹೊಸದಾಗಿ ಏನೂ ಹೇಳುತ್ತಿಲ್ಲ. ನನ್ನ ವಿರುದ್ಧ ಪಿತೂರಿ ಮೊದಲೇ ನಡೆದಿತ್ತು. ಆ ಸಮಯದಲ್ಲಿ ಇದೇ ವಿರೋಧಪಕ್ಷದ ನಾಯಕರು ಸೇರಿ ೮ ಜನ ಮಂತ್ರಿಗಳು ಈ ದೆಹಲಿಗೆ ಹೋದರು. ಆದರೆ ಅವರು ಏನನ್ನು ನೆನೆದುಕೊಂಡು ಹೋದರೋ, ಅದರಂತೆ ಆಗಲಿಲ್ಲ. ತಾನೊಂದು ನೆನೆದರೆ ದೈವ ಬೇರೊಂದು ಬಗೆಯುವುದು ಎಂಬಂತೆ, ಇವರು ಹೋದ ಮಾರನೇ ದಿವಸವೊ ಅಥವ ಮರುದಿನವೋ ಶ್ರೀ ಜಗಜ್ಜೀವನ್‌ರಾಮ್ ಅವರು ರಿಜೈನ್ ಮಾಡಿದರು. ಆದಕಾರಣ ಆ ಪ್ರಯತ್ನ ಅಲ್ಲಿಗೇ ನಿಂತುಹೋಯಿತು. ಒಂದು ರೀತಿಯಲ್ಲಿ ಶ್ರೀ ಜಗಜ್ಜೀವನರಾಮ್ ಅವರು ಅನುಸರಿಸಿದ ಮಾರ್ಗವನ್ನು ನಾವು ಸ್ತುತಿ ಮಾಡಬೇಕು. ಶ್ರೀ ಸಂಜಯಗಾಂಧಿ ಅವರನ್ನು ಇಲ್ಲಿಗೆ ಕರೆಸಿದ್ದು ನಾನು, ಅವರಿಗೆ ಇಲ್ಲಿ ಬಹಳವಾಗಿ ಮಾನ್ಯತೆ ಕೊಡಲಾಯಿತೆಂದು ನನ್ನ ಸ್ನೇಹಿತರು ಕೆಲವರು ಹೇಳಿದರು. ಆದರೆ ಅವರನ್ನು ಇಲ್ಲಿಗೆ ಕರೆಸಿದ್ದು ನಾನಲ್ಲ. ಇದನ್ನು ಸ್ಪಷ್ಟಪಡಿಸಿ ಹೇಳಬೇಕೆಂದರೆ, ಮಾನ್ಯ ಗುಂಡೂರಾವ್ ಹಾಗೂ ಅವರ ಸ್ನೇಹಿತರು ಯೂತ್ ಕಾಂಗ್ರೆಸ್ ಪರವಾಗಿ ಅವರನ್ನು ಕರೆಸಬೇಕೆಂದು ಹೇಳಿದಾಗ ನಾನು ಅದಕ್ಕೆ ಒಪ್ಪಿಗೆ ಕೊಟ್ಟಿದ್ದು ನಿಜ. ತಪ್ಪಾಗಿದ್ದರೆ ತಪ್ಪು ಎಂದು ಒಪ್ಪಿಕೊಳ್ಳುತ್ತೇನೆ. ಅವರು ಇಲ್ಲಿಗೆ ಬಂದಾಗ ನಾನೂ ಸಹ ಹೋಗಿದ್ದೆ. ಅದೂ ನಿಜ. ಈಗ

ಅನಿಸುತ್ತಿದೆ, ನಾನು ಹೋದದ್ದು ಅಪರಾಧವಾಗಿರ ಬಹುದೆಂದು; ಅನಂತರ ನಾನು ಅವರನ್ನು ಮತ್ತೆ ಕರೆಸುವುದಕ್ಕೆ ಹೋಗಲಿಲ್ಲ ನನ್ನ ಮೇಲೆ ಬಹಳ ಒತ್ತಾಯ ಬಂತು. ಆದರೆ ನಾನು ಕರೆಯಿಸಲಿಲ್ಲ. ಆ ಸಮಯದಲ್ಲಿ ನನಗೂ ಶ್ರೀ ಕೆ. ಎಚ್. ಪಾಟೀಲ್ ಅವರಿಗೂ ಭಿನ್ನಾಭಿಪ್ರಾಯ ಬಂದಿದ್ದರಿಂದ ಅವರೇ ಪಿ.ಸಿ.ಸಿ. ಪರವಾಗಿ ಗುಲ್ಬರ್ಗ ಹಾಗೂ ಬೀದರ್‌ಗೆ ಕರೆಸಿದರೇ ಹೊರತು ನಾನು ಕರೆಯಿಸಲಿಲ್ಲ. ಅದು ಏನೇ ಆಗಲಿ, ಆ ಸಮಯದಲ್ಲಿ ನಾನೇನಾದರೂ ತಪ್ಪು ಮಾಡಿದ್ದರೆ ಇವೊತ್ತು ಇಲ್ಲ, ಅದು ಹಾಗೆ, ಇದು ಹೀಗೆ ಎಂದು ಹೇಳುವುದಕ್ಕಾಗುವುದಿಲ್ಲ. ಯಾವ ರೀತಿ ತಪ್ಪು ಮಾಡಿದ್ದರೂ, ಅದು ತಪ್ಪೇ; ಅದನ್ನೇ ಸರಿ ಎಂದು ನಾನು ಹೇಳುವುದಿಲ್ಲ. ನಮ್ಮ ದೇಶದ ಜನತೆಗೆ ಮುಖ್ಯವಾಗಿ ಬೇಕಾಗಿರುವುದು ವ್ಯಕ್ತಿ ಪೂಜೆಯಲ್ಲ. ಜನರು ರಾಮನ ಫೋಟೋ, ಕೃಷ್ಣನ ಫೋಟೋ, ಕ್ರೈಸ್ತನಫೋಟೋ, ಬುದ್ಧನ ಫೋಟೋ, ಗಾಂಧಿ ಫೋಟೋ ಹೀಗೆ ತಮಗೆ ಬೇಕಾದ ಫೋಟೋಗಳನ್ನು ಇಟ್ಟುಕೊಂಡು ಪೂಜೆ ಮಾಡುತ್ತಾರೆ. ಆದರೆ ಇಲ್ಲಿಯವರೆಗೆ ನಾವೆಲ್ಲರೂ ಶ್ರೀಮತಿ ಇಂದಿರಾಗಾಂಧಿಯವರ ಫೋಟೋಗೆ ಪೂಜೆ ಮಾಡಿ...

ಶ್ರೀ ಧರ್ಮಸಿಂಗ್.—ಈಗಾಗಲೇ ಕೆಲವರು ಶ್ರೀಮತಿ ಇಂದಿರಾಗಾಂಧಿಯವರ ಫೋಟೋ ಬೇಡ, ತಮ್ಮ ಫೋಟೋ ಬೇಕು ಎಂದು ಕೇಳಿ ತೆಗೆದುಕೊಂಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ವ್ಯಕ್ತಿಪೂಜೆಯಿಂದ ಈ ದೇಶದಲ್ಲಿ ನಾವು ಇರತಕ್ಕಂತಹ ಬಡತನವನ್ನು ನೀಗಿಸುವುದಕ್ಕೆ ಎಂದೆಂದಿಗೂ ಸಾಧ್ಯವಿಲ್ಲ. ಯುಗಯುಗಗಳಿಂದಲೂ ನಾವು ಪೂಜೆ ಮಾಡಿಕೊಂಡು ಬಂದಿದ್ದೇವೆ ಆದರೆ ನಾವು ಯಾವುದಕ್ಕೆ ಮನ್ನಣೆ ಕೊಡಬೇಕು, ಯಾವುದಕ್ಕೆ ಮನ್ನಣೆ ಕೊಡಬಾರದೆಂಬುದನ್ನು ನೋಡಬೇಕು. ನಾವು ನಮ್ಮ ದೇಶದಲ್ಲಿ ಕಾರ್ಯಗಳಿಗೆ, ತತ್ವಗಳಿಗೆ, ನೀತಿಗಳಿಗೆ ಹಾಗೂ ಸಿದ್ಧಾಂತಗಳಿಗೆ ಮನ್ನಣೆ ಕೊಡಬೇಕು. ಒಂದು ಸಿದ್ಧಾಂತವನ್ನು ಯಾರಾದರೂ ಪ್ರತಿಪಾದನೆ ಮಾಡಿ, ಅದರಂತೆ ನಡೆದಿದ್ದರೆ ನಾವು ಅವರನ್ನು ಪೂಜಿಸುತ್ತೇವೆ. ಮನ್ನಿಸುತ್ತೇವೆ. ಆದರೆ ಇಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ೧೯೭೭ನೇ ಇಸವಿಯವರೆಗೂ ಅಧಿಕಾರದಲ್ಲಿದ್ದರು. ಆ ವರ್ಷ ನಡೆದ ಚುನಾವಣೆಯಲ್ಲಿ ಅವರು ಸೋತು, ಜನತಾ ಪಕ್ಷ ಗೆಲ್ಲಬೇಕಾದರೆ ಏನು ಕಾರಣ? ಆ ಸಮಯದಲ್ಲಿ ಜನತೆ ಶ್ರೀಮತಿ ಇಂದಿರಾಗಾಂಧಿಯವರು ಮತ್ತೆ ಅಧಿಕಾರಕ್ಕೆ ಬರುವುದು ಬೇಡ ಎಂದು ಓಟು ಕೊಟ್ಟರೆ ಹೊರತು ಜನತಾ ಪಕ್ಷ ಅಧಿಕಾರಕ್ಕೆ ಬರಬೇಕೆಂದು ಅಲ್ಲ, ಆದಕಾರಣ ಅವೆಲ್ಲಾ ನೆಗೆಟೀವ್ ಓಟುಗಳೇ ಹೊರತು ಪಾಸಿಟೀವ್ ಓಟುಗಳಲ್ಲ. ಆ ಸಮಯದಲ್ಲಿ ಜನತೆ ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಲ್ಲಿ ಮತ ಕೊಟ್ಟರು, ಆದರೆ ಉತ್ತರ ಭಾರತದಲ್ಲಿ ಮತ ಕೊಡಲಿಲ್ಲ, ಇದಕ್ಕೆ ಕಾರಣವೇನು? ಇದಕ್ಕೆ ಒಂದು ಮುಖ್ಯವಾದಂಥ ಕಾರಣವಿದೆ. ಚುನಾವಣೆ ನಡೆದ ನಂತರ ದೆಹಲಿಯಲ್ಲಿ ವರ್ಕಿಂಗ್ ಕಮಿಟಿ ಮೀಟಿಂಗ್ ಸೇರಿತ್ತು. ಆಗ ನಾನೂ ಸಹ ಹೋಗಿದ್ದೆ. ಬೇರೆ ರಾಜ್ಯಗಳ ಮುಖ್ಯಮಂತ್ರಿಗಳೂ ಸಹ ಬಂದಿದ್ದರು. ಅಲ್ಲಿ ಆ ಮುಖ್ಯಮಂತ್ರಿಗಳು ಹೇಳಿದ್ದೇನೆಂದರೆ, ತಮ್ಮ ತಮ್ಮ ರಾಜ್ಯಗಳಲ್ಲಿ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ಕೊಡಲು ಪ್ರಯತ್ನ ಮಾಡಿದ್ದರಿಂದ ಜನರು ಮತ ಕೊಡಲಿಲ್ಲವೆಂದು ಹೇಳಿದರು, ಮತ್ತು ಭೂಸುಧಾರಣಾ ಕಾರ್ಯಕ್ರಮವನ್ನು ಜಾರಿಗೆ ತರಲು ತಮ್ಮಿಂದ ಸಾಧ್ಯವಿಲ್ಲವೆಂದು ಹೇಳಿದರು. ಇದನ್ನು ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ; ಮತ್ತು ನಾನೇನೂ ಇಲ್ಲಿ ಕಥೆ ಹೇಳುತ್ತಿಲ್ಲ; ಮತ್ತು ನಾನು ನನ್ನ ಸ್ವಂತ ಕಿವಿಯಲ್ಲಿ ಕೇಳಿದ್ದನ್ನು ಹೇಳುತ್ತಿದ್ದೇನೆ. ಇದಕ್ಕೆ ಕಾರಣವೇನು? ಆ ಸಮಯದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದರು. ಏಕೆ ಅವರು ಆ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡಲಿಲ್ಲ? ಒಂದು ದೇಶದ ಪ್ರಧಾನಮಂತ್ರಿಯಾದವರಿಗೆ ಬೇಕಾದುದು ಏನೆಂದರೆ ಅವರು ಹೇಳಿದಂತೆ ಕೇಳುವವರು ಬೇಕು, ಅಂತಹವರೇ ಮುಖ್ಯಮಂತ್ರಿಯಾಗಿರಬೇಕು. ಇಲ್ಲದಿದ್ದರೆ ಅವರು ಆ ಜಾಗದಲ್ಲಿ ಇರುವಂತಿಲ್ಲ. ನಾನು ಆ ಸಮಯದಲ್ಲಿ ೩ ತಿಂಗಳ ಕಾಲ ಖಾಯಿಲೆ ಇದ್ದ ಕಾರಣ ದೆಹಲಿಗೆ ಹೋಗಲಿಲ್ಲ. ದೆಹಲಿಗೆ ಏತಕ್ಕೆ ಬರಲಿಲ್ಲವೆಂದು ಕೆಲವರು ಅನಂತರ ನನ್ನನ್ನು ಕೇಳಿದರು. ಕೆಲಸವಿಲ್ಲದ ಪ್ರಯುಕ್ತ ಬರಲಿಲ್ಲವೆಂದು ಹೇಳಿದೆ. ಅದಕ್ಕೆ ಅವರು ತಿಂಗಳಿಗೆ ಒಂದು ಸಲ ಇಲ್ಲಿಗೆ ಬಂದು ಅವರ ಮುಖ ನೋಡಿ ಹೋಗಬೇಕು, ಇಲ್ಲದಿದ್ದರೆ ಅವರು ತಪ್ಪು ತಿಳಿದುಕೊಳ್ಳುತ್ತಾರೆಂದು ಹೇಳಿದರು. ಇದು ಹೊಸ ವಿಚಾರ, ನನಗೆ ಇದು ಗೊತ್ತಿಲ್ಲ. ಕೆಲಸವಿಲ್ಲದೆ ಭೇಟಿ ಮಾಡಬೇಕಾದ ಅಗತ್ಯವೇನಿದೆ ಎಂದು ಕೇಳಿದ್ದಕ್ಕೆ, ಇದು ಇಲ್ಲಿಯ ನಡವಳಿಕೆ ಎಂದು ಅವರು ಹೇಳುತ್ತಿದ್ದರು. ನಮಗೆ ಶ್ರೀಮತಿ ಇಂದಿರಾಗಾಂಧಿಯವರು ಕಾರ್ಯಕ್ರಮ ಕೊಟ್ಟಿದ್ದು ನಿಜ. ಈಗಲೂ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಅವರು ಎಲ್ಲಿ ಫೇಲ್ ಆದರು ಎಂದರೆ, ಇದನ್ನು ನಾನು ಇಲ್ಲಿ ಸ್ಪಷ್ಟಪಡಿಸಬೇಕಾ

ಗಿದೆ. ಅವರು ಕಾರ್ಯಕ್ರಮಗಳನ್ನು ಕೊಟ್ಟಮೇಲೆ. ಅದನ್ನು ಇಂಪ್ಲಿಮೆಂಟ್ ಮಾಡುವ ಜನರು ಬೇಕು ಕಾರ್ಯಕ್ರಮಗಳನ್ನು ಜಾರಿಗೆ ಕೊಡುವಂತಹ ಎಫಿಷಿಯಂಟ್ ಜನರು ಬೇಕು ಇಲ್ಲದಿದ್ದರೆ ಆ ಕಾರ್ಯಗಳು ಎಲ್ಲಿ ಜಾರಿಗೆ ಬರುತ್ತವೆ? ಆದರೆ ಆ ಸಮಯದಲ್ಲಿ ಅವರು ಮಾಡಿದ್ದೇನೆಂದರೆ, ಯಾರಾದರೂ ಅಧಿಕಾರಕ್ಕೆ ಬರಲಿ, ಕಾರ್ಯಕ್ರಮ ಕೊಟ್ಟಿದಾಗಿದೆ, ಅವರು ತಾವು ಹೇಳಿದಂತೆ ನಡೆದುಕೊಳ್ಳಬೇಕು ಇಲ್ಲದಿದ್ದರೆ ಅವರನ್ನು ತೆಗೆದು ಆ ಜಾಗಕ್ಕೆ ಬೇರೆಯವರನ್ನು ತರಲಾಗುತ್ತದೆಂದರೆ, ವರ್ಷಕ್ಕೆ ಒಬ್ಬೊಬ್ಬರನ್ನು ಬದಲಾವಣೆ ಮಾಡುತ್ತಾ ಹೋಗಬೇಕಾಗುತ್ತದೆ. ಉತ್ತರಪ್ರದೇಶದಲ್ಲಿ ಇದೇರೀತಿ ಆಯಿತು. ಶ್ರೀ ಬಹುಗುಣ ಅವರು ಬಹಳ ಚನ್ನಾಗಿ ಕೆಲಸ ಮಾಡುತ್ತಿದ್ದರು. ಈ ಮಾತನ್ನು ದೇಶದ ಎಲ್ಲ ಜನರೂ ಹೇಳುತ್ತಾರೆ. ಅಲ್ಪಸಂಖ್ಯಾತರ ಹಾಗೂ ಬಡವರ ಏಳಿಗೆಗಾಗಿ ಅವರು ಕೆಲಸ ಮಾಡುತ್ತಿದ್ದರು. ಆದರೂ ಅವರನ್ನು ತೆಗದು ಅವರ ಜಾಗದಲ್ಲಿ ಶ್ರೀ ತಿವಾರಿ ಅವರನ್ನು ತಂದರು. ಅದಕ್ಕೆ ಕಾರಣವಿಷ್ಟೆ;

೧೦.೩೦ ಎ. ಎಂ.

ಅಲ್ಲಿ ಅವರು ಪೂಜೆ ಮಾಡಿಸುತ್ತಾರೆ ಎಂದು ಹೇಳಿ ಅವರ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಅನೇಕರು ಚಾಡಿ ಹೇಳಿ ಅವರನ್ನು ಅಧಿಕಾರದಿಂದ ತೆಗೆಸಿದರು. ಈಗ ಅವರ ಜೊತೆಯಲ್ಲಿ ೪-೫ ಗ್ರಹಗಳು ಇವೆ. ಈ ಗ್ರಹಗಳು ಎಲ್ಲಿಯವರೆಗೆ ಅವರ ಜೊತೆಯಲ್ಲಿ ಅವರ ಸುತ್ತಲೂ ಇರುತ್ತವೆ ಅಲ್ಲಿಯವರೆಗೆ ಶ್ರೀಮತಿ ಇಂಧಿರಾಗಾಂಧಿಯವರಿಗೆ ಗ್ರಹಚಾರ ಬಿಡುವುದಿಲ್ಲ. ಹೀಗೆ ಆ ಗ್ರಹಗಳು ಹೇಳಿದರು ಎಂದು ಹೇಳಿ ಶ್ರೀಮಾನ್ ಬಹುಗುಣ ಅವರನ್ನು ಮುಖ್ಯ ಮಂತ್ರಿಗಳ ಸ್ಥಾನದಿಂದ ತೆಗೆದು ಅವರ ಸ್ಥಾನದಲ್ಲಿ ತಿವಾರಿಯವರನ್ನು ತಂದು ಇಟ್ಟರು. ಅವರು ಮೂರು ದಿವಸಕ್ಕೆ ಒಂದು ಸಾರಿ ಬೆಳಿಗ್ಗೆ ಎದ್ದರೆ ದೆಹಲಿಯಲ್ಲಿ ಇರುತ್ತಾರೆ. ಅವರು ಏನು ಕೆಲಸ ಮಾಡುವುದಕ್ಕಾಗುತ್ತದೆ? ಅನೇಕ ರಾಜ್ಯದಲ್ಲಿ ಹೀಗೆ ಮುಖ್ಯ ಮಂತ್ರಿಗಳನ್ನು ಬದಲಾವಣೆ ಮಾಡಿದ್ದಾರೆ. ಯಾರಿಗೆ ಶಕ್ತಿ ಇದೆಯೋ ಅಂಥವರನ್ನು ಹಾಕಿದರೆ ಅವರು ಕೆಲಸ ಮಾಡುತ್ತಾರೆ. ಈಗಲೂ ಕೂಡ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಆ ಒಂದು ಮನೋಭಾವನೆ ಹೋಗಿಲ್ಲ. ಎಲ್ಲಿಯವರೆಗೆ ಆ ಭಾವನೆ ಹೋಗುವುದಿಲ್ಲ ಅಲ್ಲಿಯವರೆಗೆ ಕಾರ್ಯಕ್ರಮಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ, ಕಾರ್ಯಕ್ರಮಗಳನ್ನು ಕೊಡಬಹುದು, ಅವರು ತುಂಬಾ ಬುದ್ಧಿವಂತರು, ಅವರು ಬಡವರ ಚಿಂತನೆಯನ್ನು ಮಾಡಬಹುದು. ಅವರು ಕಾರ್ಯಕ್ರಮಗಳಿಗೆ ಸಂಬಂಧಪಟ್ಟಹಾಗೆ ೨೦ ಕಾರ್ಯಕ್ರಮಗಳ ಜೊತೆಗೆ ಇನ್ನೂ ೧೦ ಕಾರ್ಯಕ್ರಮಗಳನ್ನು ಕೊಡಬಹುದು. ಆದರೆ ಅದನ್ನು ಕಾರ್ಯಗತ ಮಾಡದೆ, ಬರೀ ಕಾಗದದಲ್ಲಿ ಬರೆದು ಬಡತನ ಹೋಯಿತು ಎಂದರೆ ಆಗುವುದಿಲ್ಲ. ನಾವು ಇದರಲ್ಲಿ ಯಾವರೀತಿಯಲ್ಲಿ ಸಕ್ಸೀಡ್ ಆಗಿದ್ದೇವೆ ಎಂಬುದನ್ನು ಶ್ರೀಮಾನ್ ದೇವೇಗೌಡರು ಹೇಳಿದ್ದಾರೆ. ಈ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವುದರಲ್ಲಿ ಕೆಲವು ಲೋಪ ದೋಷಗಳು ಇದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವ ರಾಜ್ಯದಲ್ಲಿಯಾದರೂ ಲೋಪದೋಷಗಳಿಲ್ಲದೆ ಕೆಲಸ ಮಾಡಿದ್ದಾರೆ ಎಂದು ಹೇಳಿದ್ದಾರೆಯೇ ನಾನು ಆ ರೀತಿ ಹೇಳುವುದಕ್ಕೆ ತಯಾರು ಇಲ್ಲ. ಆದರೆ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವುದಕ್ಕೆ ನಾನು ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇನೆ. ನಾವು ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವುದರಲ್ಲಿ ಸ್ವಲ್ಪವಾದರೂ ಜನಗಳು ಮೆಚ್ಚುವ ರೀತಿಯಲ್ಲಿ ಮಾಡದಿದ್ದರೆ ನಮ್ಮನ್ನು ಯಾರೂ ಅಧಿಕಾರಕ್ಕೆ ತರುತ್ತಾ ಇರಲಿಲ್ಲ. ನಾವು ಯಾರೂ ಉಳಿಯುತ್ತಾ ಇರಲಿಲ್ಲ. ಕರ್ನಾಟಕದಲ್ಲಿ ಶ್ರೀಮತಿ ಇಂಧಿರಾಗಾಂಧಿಯವರ ಚಾರಿಷ್ಮದಿಂದ ನಮಗೆ ವೋಟು ಬಂದಿದೆ ಎಂದರೆ ಬೇರೆ ರಾಜ್ಯಗಳಲ್ಲಿ ಅವರ ಪಕ್ಷಕ್ಕೆ ಏತಕ್ಕೆ ವೋಟು ಬರಲಿಲ್ಲ? ಈಗ ಮೊನ್ನೆ ಮಧುರೆಯಲ್ಲಿ ನಡೆದ ಮುನಿಸಿಪಾಲಿಟಿ ಚುನಾವಣೆಯಲ್ಲಿ, ಕಾರ್ಪೊರೇಷನ ಚುನಾವಣೆಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಹೋಗಿದ್ದರು ಅಲ್ಲಿ ಲಕ್ಷಗಟ್ಟಲೆ ಜನ ಸೇರಿದ್ದರು ಆದರೂ ಸಹ ಅಲ್ಲಿ ೬೫ ಸೀಟುಗಳಿಗೆ ಕೇವಲ ೯ ಸೀಟುಗಳು ಮಾತ್ರ ಕಾಂಗೆಸ್ (ಐ) ನವರಿಗೆ ಬಂತು ಎಂದು ನಿನ್ನೆ ಶ್ರೀಮಾನ್ ದೇವೆ ಗೌಡರು ಹೇಳಿದರು. ಆದ್ದರಿಂದ ಬರೀ ಒಬ್ಬ ಮನುಷ್ಯನ ಚಾರಿಷ್ಮದಿಂದಲೇ ವೋಟು ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಧರ್ಮಸಿಂಗ್.—ತಂಜಾವೂರಿನ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಏನಾಯಿತು?

ಶ್ರೀ ಡಿ. ದೇವರಾಜ ಅರಸ್ —ಸ್ವಲ್ಪ ದಯಮಾಡಿ ತಿಳಿದು ಮಾತನಾಡಿ ತಂಜಾವೂರಿನಲ್ಲಿ ಏನಾಯಿತು? ತಂಜಾವೂರಿಗೆ ಶ್ರೀಮತಿ ಇಂದಿರಾಗಾಂಧಿಯವರು ಏತಕ್ಕೆ ಹೋಗಲಿಲ್ಲ? ಅಂಥಾಶಕ್ತಿ ಇರುವವರು ಏತಕ್ಕೆ ಹೋಗಲಿಲ್ಲ?

ಶ್ರೀ ಬಿ. ಶಿವಣ್ಣ.—ಅವರ ಸುತ್ತಲೂ ಗ್ರಹಗಳು ಇವೆಯೆಂದು ತಾವೇ ಹೇಳಿದ್ದೀರಲ್ಲ.

ಶ್ರೀ ಡಿ. ದೇವರಾಜ ಅರಸ್.—ನೀವೊ ಒಂದು ಗ್ರಹ ಬಿಟ್ಟು ಹೋಗಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಶ್ರೀಮತಿ ಇಂದಿರಾ ಗಾಂಧಿಯವರ ಚಾರಿಷ್ಮದಿಂದ ಮಾತ್ರ ನಾವು ಆರಿಸಿ ಬಂದಿಲ್ಲ ನಾವು ಕಾರ್ಯಗತ ಮಾಡಿದ ಕಾರ್ಯ ಕ್ರಮಗಳು ಮಾತ್ರ ಜನತೆಯ ಮನಸ್ಸಿನಲ್ಲಿ ಉಳಿಯುತ್ತವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗ ತಾವು ಹೇಗೆ ಮುಖ್ಯ ಮಂತ್ರಿಗಳಾಗಿದ್ದೀರಿ, ಆಂಧ್ರದಲ್ಲಿ ವೆಂಗಲರಾವ್ ಅವರು ಹೇಗೆ ಮುಖ್ಯ ಮಂತ್ರಿಗಳಾಗಿದ್ದರು? ೧೯೭೭ನೇ ಇಸವಿಯಲ್ಲಿ ಲೋಕಸಭೆ ಚುನಾವಣೆ ನಡೆದಾಗ ಕರ್ನಾಟಕದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಪಕ್ಷಕ್ಕೆ ೨೮ ಸೀಟುಗಳಿಗೆ ೨೬ ಸೀಟುಗಳು ಬಂದುವು. ಆಂಧ್ರದಲ್ಲಿ ೪೨ ಪಾರ್ಲಿಮೆಂಟರಿ ಸ್ಥಾನಗಳಲ್ಲಿ ೪೧ ಸ್ಥಾನಗಳು ಶ್ರೀಮತಿ ಇಂದಿರಾಗಾಂಧಿಯವರ ಪಕ್ಷಕ್ಕೆ ಬಂದುವು. ಆದರೆ ನಾಷನಲ್ ಕಾಂಗ್ರೆಸ್ಸಿನಿಂದ ಸ್ಪರ್ಧೆ ಮಾಡಿದ್ದವರು ಮತ್ತು ಬೇರೆ ಪಕ್ಷದವರು ಸೋಲನ್ನು ಅನುಭವಿಸಿದರು. ಆಗ ನಮ್ಮ ಕರ್ನಾಟಕದಲ್ಲಿ ೨೮ ಸೀಟುಗಳಿಗೆ ೨೬ ಸೀಟುಗಳು ಬರಬೇಕಾದರೆ ಆಗ ಮಾನ್ಯ ಮುಖ್ಯ ಮಂತ್ರಿಗಳು ಶ್ರೀಮತಿ ಇಂದಿರಾಗಾಂಧಿಯವರ ಜೊತೆಯಲ್ಲಿ ಇದ್ದುದರಿಂದ ಅಷ್ಟು ಸೀಟುಗಳು ಬರುವುದಕ್ಕೆ ಸಾಧ್ಯವಾಯಿತು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳ ಅಭಿಪ್ರಾಯ ಏನು?

ಶ್ರೀ ಡಿ. ದೇವರಾಜ ಅರಸ್.—ಅದು ಅವರವರ ಅಭಿಪ್ರಾಯ. ಶ್ರೀಮಾನ್ ದೇವೇಗೌಡರು ನಿನ್ನೆ ದಿವಸ ಮಾತನಾಡುತ್ತಾ ಒಂದು ಮಾತು ಹೇಳಿದರು. ಅದು ಬಹಳ ಚನ್ನಾಗಿತ್ತು. ಅವರು ಏನು ಹೇಳಿದರು ಎಂದರೆ "ನೀವು ಮಾಡಿದ ಕೆಲಸವನ್ನು ಶ್ರೀಮತಿ ಇಂದಿರಾಗಾಂಧಿಯವರಿಗೆ ಬೆಳ್ಳಿ ತಟ್ಟೆಯಲ್ಲಿಟ್ಟು ಅರ್ಪಣೆ ಮಾಡಿದಿರಿ ಎಂದು ಹೇಳಿದರು. ಅದೇ ನೀವು ಮಾಡಿದ ಅಪರಾಧ ಎಂದು ಹೇಳಿದರು". ಆಗ ನಾನು ಹೇಳಿದೆ ಹೌದು ನಾನು ಆ ಒಂದು ದೊಡ್ಡ ಅಪರಾಧವನ್ನು ಮಾಡಿದ್ದೇನೆ, ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂದು ಹೇಳಿದ್ದೇನೆ. ಶ್ರೀಮತಿ ಇಂದಿರಾಗಾಂಧಿಯವರ ಹೆಸರನ್ನು ಹೇಳಿಕೊಂಡು ಹೋಗಿದ್ದರಿಂದ ದಕ್ಷಿಣದಲ್ಲಿ ಬೆಲೆ ಸಿಕ್ಕಿದೆ, ಅವರ ಒಂದು ಹೆಸರಿನಿಂದ ಅನುಕೂಲವಾಗಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆ ಒಂದು ಕಾರಣದಿಂದಲೇ ಅದರ ಮೇಲೆಯೇ ನಾವು ಇಷ್ಟು ದಿವಸ ಇಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಹರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಏನು ಕೊಟ್ಟಿದ್ದೀರಿ ಸುಮ್ಮನೆ ಎಲ್ಲಾ ಬೂಟಾಟಿಕೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದರ ಬಗ್ಗೆ ಕರ್ನಾಟಕದ ಮುಸ್ಲಿಮ್ ಸದಸ್ಯರು ನಿನ್ನೆ ಮಾತನಾಡುವಾಗ ಸರಿಯಾಗಿ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲೆಲ್ಲಿ ಯಾವುದೇ ಸಮಿತಿಯನ್ನು ಮಾಡಲಿ, ಯಾವುದೇ ಒಂದು ಕಾರ್ಪೋರೇಷನ್ ಮಾಡಲಿ, ಯಾವುದೇ ಒಂದು ಬೋರ್ಡ್ ಮಾಡಲಿ ಅಲ್ಲೆಲ್ಲಾ ಒಬ್ಬರು ಹರಿಜನರು ಅಥವಾ ಗಿರಿಜನರನ್ನು ನೇಮಕ ಮಾಡಬೇಕು ಆ ಸದಸ್ಯರು ಇರಲೇ ಬೇಕು ಎಂದು ಮಾಡಿದ್ದೇವೆ. ಲೆದರ್ ಕಾರ್ಪೋರೇಷನ್‌ನಲ್ಲಿ ಒಬ್ಬರನ್ನು ಚೇರ್ಮನ್ ಆಗಿ ಮಾಡಿದ್ದೇವೆ. ಪಬ್ಲಿಕ್ ಸರ್ವೀಸ್ ಕಮಿಷನ್‌ನಲ್ಲಿ ಒಬ್ಬರನ್ನು ಚೇರ್ಮನ್ ಆಗಿ ಮಾಡಿದ್ದೇವೆ. ಹಾಗೆಯೇ ಟೂರಿಜಂ ಕಾರ್ಪೋರೇಷನ್‌ನಲ್ಲಿ ಒಬ್ಬರನ್ನು ಚೇರ್ಮನ್ ಮಾಡಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ನಾನು ಬಿ. ಡಿ. ಎ. ಸಲ್ಲಿ ಸದಸ್ಯನಾಗಿದ್ದೆ. ಈಗ ನನ್ನನ್ನು ಅಲ್ಲಿಂದ ತೆಗೆದು ಶ್ರೀಮಾನ್ ಇಬ್ರಾಹಿಂ ಅವರು ಶ್ರೀಮತಿ ಇಂದಿರಾಗಾಂಧಿಯವರ ಪಟ್ಟ ಶಿಷ್ಯ ಎಂದು ಅವರನ್ನು ಬಿ. ಡಿ. ಎ. ನಲ್ಲಿ ಸದಸ್ಯರಾಗಿ ನೇಮಿಸಿದ್ದಾರೆ. ಯಾವ ಕಾರಣದಿಂದ ನನ್ನನ್ನು ಕಿತ್ತು ಅವರಿಗೆ ಕೊಟ್ಟಿದ್ದೀರಿ?

ಶ್ರೀ ಡಿ. ದೇವರಾಜ ಅರಸ್. — ಅವರು ಮೈನಾರಿಟಿ ಎಂದು ಕೊಟ್ಟಿದ್ದಾರೆ. ಹಾಗೆ ರಿಕ್ರೂಟ್‌ಮೆಂಟ್ ಮಟ್ಟದಲ್ಲಿ ನಾವು ಖಡ್ಡಾಯವಾಗಿ ಒಬ್ಬೊಬ್ಬರು ಹರಿಜನ ಗಿರಿಜನ ಸದಸ್ಯರು ಇರಬೇಕೆಂದು ಮಾಡಿದ್ದೇವೆ. ಇಷ್ಟೆಲ್ಲಾ ಮಾಡಿರುವಾಗ ನಾನು ಅವರಿಗೆ ಮರು ಉತ್ತರವನ್ನು ಹೇಳಲೇಬೇಕಾಗಿದೆ. ಶ್ರೀಮಾನ್ ಗುಂಡೂರಾವ್ ಅವರು ಮಂತ್ರಿಗಳಾಗಿದ್ದಾಗ ಇದನ್ನೆಲ್ಲಾ ಮಾಡಿದ್ದೇವೆ. ಆಗ ಇದನ್ನು ಒಪ್ಪಿಕೊಂಡು ಸುಮ್ಮನಿದ್ದರು. ಈಗ ಅವರು ಹೇಳುತ್ತಿದ್ದಾರೆ, ನಾನು ಬೂಟಾಟಿಕೆ, ಚಾರಿಷ್ಮ ಮಾಡುತ್ತಿದ್ದೇನೆಂದು, ನಾನು ಬ್ಯಾಕ್‌ವರ್ಡ್ ಕ್ಲಾಸ್ಸ್ ಹರಿಜನ ಗಿರಿಜನರಿಗೆ ಇಷ್ಟೆಲ್ಲಾ ಮಾಡುತ್ತಿದ್ದರೂ ನಾನು ಆಟಾಟೋಪ ಮಾಡುತ್ತಿದ್ದೇನೆಂದು ಹೇಳಿದರು. ನಾನೇನೂ

ಆಟಾಟೋಪ ಮಾಡುವುದಕ್ಕೆ ಹೋಗಿಲ್ಲ. ನಾನೇನೂ ಚಾಂಪಿಯನ್ ಎಂದು ನಾನು ಹೇಳಲಿಲ್ಲ. ಇದನ್ನು ತಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಅಂತರಂಗವಾಗಿಯಾಗಲಿ, ಬಹಿರಂಗವಾಗಿಯಾಗಲಿ, ನನ್ನ ಒಂದು ವಿಚಾರವೇನೆಂದರೆ ನಾನು ಮಾಡಿದ್ದನ್ನು ಆಡತಕ್ಕ ಸ್ವಭಾವ ನನಗೆ ಇಲ್ಲ. ಸಮ್ ಟೈಮ್ಸ್ ಯಾರಾದರೂ ನನಗೆ ಹೊಗಳಿರಬಹುದು. ಅದು ಅವರವರ ಇಷ್ಟ. ಅದಕ್ಕೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಆದರೆ ನಾನೇನು ಚಾಂಪಿಯನ್ ಎಂದು ಹೇಳುತ್ತಾ ಇಲ್ಲ. ಬೇರೆ ಜನರು ಹೇಳಿದರೆ, ಅದಕ್ಕೆ ನಾನು ಕಾರಣನಲ್ಲ. ಕರ್ನಾಟಕದಲ್ಲಿ ಎಸ್. ಸಿ. ; ಎಸ್. ಟಿ., ಹಾಗೂ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಮೈನಾರಿಟೀಸ್‌ಗೆ ಬೇರೆ ರಾಜ್ಯಗಳವರಿಗಿಂತ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದಾರೆಂದು ಬೇರೆ ರಾಜ್ಯದವರ್‍ಯಾರಾದರೂ ಹೇಳಿಕೊಂಡು ಹೋದರೆ ಅದಕ್ಕೆ ನಾನು ಹೊಣೆಗಾರನಲ್ಲ. ಶ್ರೀಮಾನ್ ಗುಂಡೂರಾವ್ ಅವರು ಇದರಲ್ಲಿ ಭಾಗಿಯಾಗಿದ್ದರು. ಇವತ್ತು ಅದನ್ನು ಇಲ್ಲಾ ಎಂದು ಹೇಳಿದರೆ ಅದಕ್ಕೆ ಅವರೇ ಜವಾಬ್ದಾರರು. ನಾನೇನೂ ಮಾಡುವುದಕ್ಕಾಗುವುದಿಲ್ಲ. ಆದರೆ ಹರಿಜನ ಗಿರಿಜನರಿಗೆ, ಹಿಂದುಳಿದ ಜನಾಂಗದವರಿಗೆ, ಮೈನಾರಿಟೀಸ್‌ಗೆ ಏನನ್ನೂ ನಾನು ಮಾಡಿಲ್ಲ ಎಂದು ತಾವು ಹೇಳತಕ್ಕದ್ದು ಆಧಾರ ರಹಿತವಾದ ಮಾತಾಗುತ್ತದೆ. ಇವತ್ತು ತಾವು ಹೊರಗಡೆ ಹೋಗಿದ್ದೀರಿ. ಕಾಂಗ್ರೆಸ್–ಐ ನವರೇ ಹೇಳತಕ್ಕ ಮಾತು ಸಂಶ್ಯಾದರೆ ಇದರಲ್ಲಿ ತಿರುಳೂ ಇಲ್ಲ ಹುರುಳೂ ಇಲ್ಲ. ಇಡೀ ಇಂಡಿಯಾ ದೇಶದಲ್ಲೇ ಹಿಂದುಳಿದ ಜನಾಂಗದವರಿಗೆ ಇಷ್ಟು ಪರ್ಸಂಟೇಜ್ ಆಫ್ ರಿಸರ್‌ವೇಷನ್‌ನ್ನು ಬೇರೆ ಯಾವ ರಾಜ್ಯದಲ್ಲಿ ಮಾಡಿದ್ದಾರೆಂದು ಅವರು ಹೇಳಲಿ ಅದು ನನಗೆ ಗೊತ್ತಿದೆ. ಇವನ್ನು ಬೇರೆ ರಾಜ್ಯಗಳವರು ಮಾಡುವುದಕ್ಕೆ ಹೋದರು ಆಗ ಅವರು ಏನು ತೊಂದರೆಗಳನ್ನು ಪಟ್ಟರು ಎಂಬುದು ನನಗೆ ಗೊತ್ತಿದೆ. ಬಿಹಾರದಲ್ಲಿ ಏನು ತೊಂದರೆಯಾಯಿತು ಎಂಬುದು ತಮಗೇ ಗೊತ್ತಿದೆ. ಇಲ್ಲಿ ಎಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಾವು ರಿಸರ್‌ವೇಷನ್ ಮಾಡಿದರೂ ಸಹ ಇವರು ಏನು ಮಾಡಿದ್ದಾರೆಂದು ಹೇಳಿದರೆ ನಾನು ಕೇಳುತ್ತೇನೆ. ಇಷ್ಟೇ ಪ್ರಮಾಣದಲ್ಲಿ, ಅಥವಾ ಇದಕ್ಕಿಂತಲೂ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಇನ್ನೊಂದು ರಾಜ್ಯದಲ್ಲಿ ಮಾಡಿ ತೋರಿಸಿ ಕೊಡಲಿ ಎಂದು. ಇತ್ತೀಚೆಗೆ ಅವರು ಮಂತ್ರಿಗಳಾಗಿದ್ದಾಗ ನಾವೆಲ್ಲರೂ ಸೇರಿ ಮಾಡಿದ್ದೇವೆ. ಎಸ್. ಸಿ. ಹಾಗೂ ಎಸ್. ಟಿ. ಯವರಿಗೆ ೧೮ ಪರ್ಸೆಂಟ್ ರಿಸರ್‌ವೇಷನ್‌ನ್ನು ಪ್ರಮೋಷನಲ್ ವೇಕೆನ್ಸಿಗೂ ಲೋಯರ್ ಕ್ಲಾಸ್ ಒನ್ ಆಫೀಸರ್ಸ್‌ವರೆಗೂ ಇಡಬೇಕೆಂದು ಹೇಳಿ ಆಜ್ಞೆಯನ್ನೂ ಕೂಡ ಹೊರಡಿಸಿದ್ದೇವೆ. ಇಷ್ಟೆಲ್ಲಾ ಮಾಡಿದರೂ ಏನೂ ಮಾಡಿಲ್ಲ ಎಂದು ಹೇಳಿರುವುದು ಸರಿಯಲ್ಲ.

ಹಾಗೆಯೇ ನಗರ ಕಾರ್ಪೊರೇಷನ್‌ನಲ್ಲಿ ಬೇಕಾದಷ್ಟು ಜಾಗವನ್ನು ತಮಗೆ ಬೇಕಾದವರಿಗೆ ಕೊಟ್ಟಿದ್ದಾರೆಂದು ಹೇಳಿದರು. ಅದರ ಬಗ್ಗೆ ಒಂದು ಲಿಸ್ಟ್‌ನ್ನು ಕೊಡುತ್ತೇವೆಂದು ಹೇಳಿದರು. ಅದು ಇದುವರೆವಿಗೂ ನನ್ನ ಕೈಗೆ ಬಂದಿಲ್ಲ. ನಾವು ಕೊಟ್ಟಿರುವುದು ನನಗೆ ಗೊತ್ತಿರುವುದು ಒಂದೇ ಒಂದು. ಈಗ ಆ ಲಿಸ್ಟ್ ನನ್ನ ಕೈ ಬಂದು ಸೇರಿತು. You have just now given the list, I shall look into it. ನನಗೆ ಗೊತ್ತಿರುವ ಹಾಗೆ ಡಾಕ್ಟರ್ ಮೋದಿ ಟ್ರಸ್ಟ್ ಎಂದು ಹೇಳಿ ಇದೆ. ಅದು ತಮಗೂ ಗೊತ್ತಿದೆಯೆಂದು ಕಾಣುತ್ತದೆ. ಡಾಕ್ಟರ್ ಮೋದಿಯವರು ಕಣ್ಣಿನ ಚಿಕಿತ್ಸೆ ಮಾಡುವುದರಲ್ಲಿ ಪ್ರಪಂಚದಲ್ಲಿಯೇ ಪ್ರವೀಣತೆಯನ್ನು ಪಡೆದು ಬಂದಿದ್ದಾರೆ. ಕಣ್ಣಿನ ಚಿಕಿತ್ಸೆ ಮಾಡುವುದಕ್ಕೋಸ್ಕರ ಅವರಿಗೆ ೯೯ ವರ್ಷಕ್ಕೆ ಲೀಸ್‌ಮೇಲೆ ಕೊಟ್ಟಿದ್ದೇವೆ. ಅವರಿಗೆ ವೆಸ್ಟ್ ಆಫ್ ಕಾರ್ಡ್ ರೋಡ್‌ನಲ್ಲಿ ಜಾಗವನ್ನು ಕೊಟ್ಟಿದ್ದೇವೆ ಅವರು ಎಲ್ಲಾ ಜನರಿಗೂ ಕಣ್ಣಿನ ಚಿಕಿತ್ಸೆಯನ್ನು ಮಾಡುತ್ತಿದ್ದಾರೆಂಬ ಕಾರಣದಿಂದ ಆ ಜಾಗವನ್ನು ಅವರಿಗೆ ಕೊಟ್ಟಿದ್ದೇವೆ.

ನಮ್ಮ ಶ್ರೀಮಾನ್ ಬಂಗಾರಪ್ಪನವರು ನಾನು ಬಹಳವಾಗಿ ಹೊರಗಡೆ ಹೋಗುತ್ತಿರುತ್ತೇನೆ, ಇಲ್ಲಿ ಇರುವುದಿಲ್ಲ ಎನ್ನುವ ವಿಚಾರವನ್ನೂ ಕೂಡ ಹೇಳಿದರು. ಮಾನ್ಯ ಅಧ್ಯಕ್ಷಿಣಿಯವರೆ, ನಾನು ಇದುವರೆವಿಗೆ ೬೭ ಅಫಿಶಿಯಲ್ ಟ್ರಿಪ್ಸ್ ಮಾಡಿದ್ದೇನೆ. ೫೩ ನಾನ್ ಅಫಿಶಿಯಲ್ ಟ್ರಿಪ್ಸ್ ಔಟ್ ಸೈಡ್ ದಿ ಸ್ಟೇಟ್ ಮಾಡಿದ್ದೇನೆ. ಇದರಲ್ಲಿ ೬೩ ದಿವಸಗಳ ಕಾಲ ನಾನು ಅಫಿಶಿಯಲ್ ಬಿಸಿನೆಸ್ ಮೇಲೆ ಹೋಗಿರತಕ್ಕದ್ದು. ಇನ್ನು ೫೧ ಟ್ರಿಪ್ಸ್‌ನ್ನು ನಾನು ನಾನ್ ಅಫಿಶಿಯಲ್ ಬಿಸಿನೆಸ್ ಮೇಲೆ ರಾಜ್ಯದ ಹೊರಗಡೆ ಹೋಗಿದ್ದೇನೆ. ಒಟ್ಟು ೫೭೦ ದಿನಗಳಲ್ಲಿ ೧೧೫ ದಿವಸಗಳ ಕಾಲ ರಾಜ್ಯದ ಹೊರಗಡೆ ಹೋಗಿರತಕ್ಕದ್ದು.

ಮತ್ತೆ ಮಿತ್ತಲ್ ಎಂಬ ಪ್ರೆಸ್ ಸೆಕ್ರೆಟರಿಯವರ ಬಗ್ಗೆ ಹೇಳಿದರು. ಆ ಬಗ್ಗೆ ಟೀಕೆಯನ್ನು ಸಹಾ ಮಾಡಿದರೆಂದು ನಾನು ಕೇಳಿದೆ. ಅವರು ಯಾತಕ್ಕೆ ಟೀಕೆ ಮಾಡಿದರೋ ಅಥವಾ ಅವರಿಗೆ ಮಾಹಿತಿ

ಯನ್ನು ಒದಗಿಸಿಕೊಟ್ಟವರು ತಪ್ಪು ಮಾಹಿತಿ ಕೊಟ್ಟರೋ ಏನೋ ಗೊತ್ತಿಲ್ಲ. ಅವರಿಗೆ ಸಾವಿರಾರು ರೂಪಾಯಿಗಳ ಹೆಚ್ಚಿಗೆ ಸಂಬಳವನ್ನು ಕೊಟ್ಟಿದ್ದಾರೆಂಬುದು ಆಧಾರರಹಿತವಾದ ಮಾತು. ಅವರಿಗೆ ಕೊಡುತ್ತಿರುವ ಸಂಬಳ ೨,೭೫೦ ರೂಪಾಯಿಗಳು. ನಾನು ಪ್ರೆಸ್ ಸೆಕ್ರೆಟರಿಯವರನ್ನು ಇಟ್ಟುಕೊಳ್ಳುತ್ತಿರುವುದು ಇವತ್ತೇನೂ ಹೊಸದಲ್ಲ. ಅವರು ಹೊರಗಡೆಯವರನ್ನು ಏಕೆ ತಂದು ಇಟ್ಟುಕೊಂಡಿದ್ದಾರೆ. ನಮ್ಮ ರಾಜ್ಯದವರನ್ನು ಯಾರಾದರನ್ನೂ ಇಟ್ಟುಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ ಎಂದು ಹೇಳಿದ್ದಾರೆ. ಅದು ನನಗೆ ವೈಯುಕ್ತಿಕವಾಗಿ ಸಂಬಂಧಪಟ್ಟಿದ್ದು. ನಾನು ಹೊರಗಡೆ ಇರುವವರನ್ನಾದರೂ ಇಟ್ಟುಕೊಳ್ಳಬಹುದು; ರಾಜ್ಯದ ಒಳಗಡೆ ಇರುವವರನ್ನಾದರೂ ಇಟ್ಟುಕೊಳ್ಳಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಮುಖ್ಯಮಂತ್ರಿಯವರಿಗೆ ಪ್ರೆಸ್ ಸೆಕ್ರೆಟರಿ ಬೇಕು, ಬೇಡ ಎನ್ನತಕ್ಕ ಪ್ರಶ್ನೆಗೆ ನಾನು ಹೋಗುವುದಿಲ್ಲ. ಪ್ರೆಸ್ ಸೆಕ್ರೆಟರಿ ಬೇಕಾದರೆ ಮಾಡಿಕೊಳ್ಳಲಿ. ಆದರೆ ಬೇರೆ ಭಾಗದವರನ್ನು ಕರೆದುಕೊಂಡು ಬಂದು ನೇಮಿಸಿದರೆ ಸರ್ಕಾರದ ಬೊಕ್ಕಸಕ್ಕೆ ಹಣ ಎಷ್ಟು ಖರ್ಚಾಗಬಹುದೆಂಬುದನ್ನು ನೋಡಿ. ನಮ್ಮ ರಾಜ್ಯದಲ್ಲಿ ತಮಗೆ ಪ್ರೆಸ್ ಸೆಕ್ರೆಟರಿಯಾಗಿ ಆಗತಕ್ಕ ಶಕ್ತಿ ಇರತಕ್ಕ, ಅನುಭವ ಇರತಕ್ಕವರು ಯಾರೂ ಇರಲಿಲ್ಲವೇ ಎಂಬ ಪ್ರಶ್ನೆಯನ್ನು ವಿಚಾರ ಮಾಡಿ ನೋಡಿ, ಇಂದು ಏತಕ್ಕೆ ಅವರನ್ನು ದೆಹಲಿಯಿಂದ ಕರೆಸಬೇಕಾಗಿತ್ತು? ಮತ್ತು ಅವರಿಗೆ ಅನೇಕ ಸೌಕರ್ಯಗಳನ್ನು ಕೊಡುವುದಕ್ಕೆ ಸರ್ಕಾರದ ಹಣ ವೆಚ್ಚವಾಗುವುದಾದರೆ ಹೇಗೆ?

ಶ್ರೀ ಡಿ. ದೇವರಾಜ ಅರಸ್.—ಅವರಿಗೇನೂ ಬೇರೆಯವರಿಗಿಂತ ಹೆಚ್ಚು ಕೊಡುತ್ತಿಲ್ಲ. ಹಿಂದೆ ಕೊಡುತ್ತಿದ್ದಂತೆಯೆ ೨,೭೫೦ ರೂಪಾಯಿಗಳನ್ನೇ ಇವರಿಗೂ ಕೊಡುತ್ತಿದೇವೆ. ಇದೇನೂ ಹೊಸದಲ್ಲ.

ಶ್ರೀ ಎಸ್. ಬಂಗಾರಪ್ಪ.—ಸೂಪರ್ ಟೈಂ ಸ್ಕೇಲ್ ಅಧಿಕಾರಿಗಳಿರುವಾಗ, ಪ್ರೆಸ್ ಸೆಕ್ರೆಟರಿಯವರನ್ನು ಹಾಕಿದರೆ ಸೂಪರ್ ಟೈಂ ಸ್ಕೇಲ್ ಅಧಿಕಾರಿಗಳೇಕೆ ಇರಬೇಕು? ದಯವಿಟ್ಟು ಇದು ಬೇಡ ಸ್ವಾಮಿ.

ಶ್ರೀ ಡಿ. ದೇವರಾಜ ಅರಸ್.—ಈಗ ಹೇಳಿ ಆಯಿತಲ್ಲ ಸ್ವಾಮಿ.

ಶ್ರೀ ಎಸ್. ಬಂಗಾರಪ್ಪ.—ಏತಕ್ಕೆ ಹೀಗೆ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಇದು ನಿಮ್ಮ ಇಷ್ಟ ಎನ್ನತಕ್ಕದ್ದಲ್ಲ. ನಮ್ಮ ಇಷ್ಟದ ಪ್ರಕಾರ ಮಾಡಿ. ಕರ್ನಾಟಕದವರನ್ನು ಆರಿಸಿಕೊಳ್ಳಿ. ಕಡಿಮೆ ಸಂಬಳದವರನ್ನು ಆ ಕೆಲಸಕ್ಕೆ ಆರಿಸಿಕೊಳ್ಳಿ.

SRI D. DEVARAJA URS — It is allright from your view but in my view a person of that calibre is required.

SRI S BANGARAPPA.—This is not my view, it is the view of the people of Karnataka.

SRI D. DEVARAJA URS. — No body can recommend in this regard. I have to choose my man.

SRI S. BANGARAPPA. — You select your own person but let the person be drawn from Karnataka on a lesser salary. The Press Secretary is more than a Supertime officer. How can you justify it.

SRI AZEEZ SAIT. — You have stated that it is your right to select a person and at the same time you say that he must select a person from Karnataka

SRI BAPURAO PATIL.—By virtue of your majority, you loot the Government treasury.

MADAM DEPUTY SPEAKER.—I request all the members to keep silence.

SRI S. BANGARAPPA:— The way in which the Hon. Chief Minister replied is very very bad. ಸುಮ್ಮನೆ ನನ್ನ ಇಷ ಬಂದಷ್ಟು ಸಂಬಳ ಕೊಡುತ್ತೇನೆ ಅಂದರೆ ಆಗುವುದಿಲ್ಲ. ಯಾರ ಇಷ್ಟಕ್ಕೆ ಕೊಡುತ್ತಿದ್ದೀರಿ. ನೀವು ಹೇಳುವುದನ್ನು ಜನ ಜಸ್ಟಿಫೈ ಮಾಡಬೇಕಲ್ಲ.

ಶ್ರೀ ಡಿ. ದೇವರಾಜ ಅರಸ್.— ನಿಮಗೇನು ಗೊತ್ತಾಗುತ್ತದೆ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ನನಗೆ ಸ್ವಲ್ಪ ಗೊತ್ತಿದೆ ಅಂತ ತಿಳಿದುಕೊಂಡಿದ್ದೀರಿ, ನನಗೂ ಬಹಳ ಗೊತ್ತಿದೆ, ಸದ್ಯದಲ್ಲೇ ತೋರಿಸೋಣ. ತಾವೇನೋ ನನ್ನ ಬಗ್ಗೆ ಹೇಳಿದ್ರಂತಲ್ಲಾ, ಅದನ್ನು ಆಮೇಲೆ ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷಿಣಿಯವರೇ, ನಾನು ವಿನಂತಿ ಮಾಡಿಕೊಳ್ಳುತ್ತೇನೆ, ನನಗೆ ಮಾತನಾಡುವುದಕ್ಕೆ ಅವಕಾಶಕೊಡಿ.

ಶ್ರೀ ಎಸ್. ಬಂಗಾರಪ್ಪ.— ಅದಕ್ಕೆ ಸಕಾರಣ ಕೊಡಿ. ತಾವೇ ವಿಚಾರಮಾಡಿ. ಯಾರನ್ನಾದರೂ ತಂದು ಹಾಕಿಕೊಳು ತ್ತೇನೆ, ಎಷ್ಟಾದರೂ ಸಂಬಳ ಕೊಡುತ್ತೇನೆ, ಎನ್ನುವುದು ಉದ್ಧಟತನದ ಮಾತು. This is too much, I take strong objection. Hon. Chief Minister cannot say like that, this is not the time.

MADAM DEPUTY SPEAKER:— How many times shall I tell you. you can get it clarified afterwards.

ಶ್ರೀ ಡಿ. ದೇವರಾಜ ಅರಸ್ .— ಇನ್ನು ಸೂಪ ಡ್ಯಾಂ ವಿಚಾರವಾಗಿ ಮಾತನಾಡಿದ್ದಾರೆ ಎಂದು ಗೊತ್ತಾಯಿತು. ಇದರ ಇನ್‌ವೆಸ್ಟಿಗೇಷನ್ ಶುರುವಾದದ್ದು ೧೯೫೪ ನೇ ಇಸವಿಯಿಂದ. ಆ ಸ್ಥಳ ತುಂಬ ಜಿಯಾಲಜಿಕಲ್ ಕಾಂಪ್ಲೆಕ್ಸ್‌ನಿಂದ ಕೂಡಿದೆ. ಸಂಟೈಮ್ಸ್ ಅಲ್ಲಿ ರಾಕ್ ಫಾರ್‌ಮೇಷನ್ ಆಗಿರುವುದು. Rock of Himalayan type is there. ಆ ರೀತಿ ಕೆಲವು ಕಡೆ ಇದೆ. ಇದಕ್ಕೆ ಕಾರ್ಪೊರೇಷನ್‌ನಿಂದ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿದರು. ೧೯೭೩ನೇ ಇಸವಿಗೆ ಮೊದಲೇ ನೇಮಕ ಮಾಡಿದ ಸಮಿತಿ ಇದು. ಇದರಲ್ಲಿ Sriyuths N. G. K. Murthy. M.S. Balasundaram, Mane, Krishnaswamy were there. Members of the Panel were there in the expert Committee, ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾದ ೩ ಜನ ಕನ್‌ಸಲ್ಟಿಂಗ್ ಇಂಜಿನಿಯರ್ಸ್ ಇದ್ದಾರೆ ಇದರ ಜೊತೆಗೆ ಸಿವಿಲ್ ಕಮಿಟಿ ಮೆಂಬರ್ಸ್ ಆಫ್ ದಿ ಕಾರ್ಪೊರೇಷನ್ ಅವರೂ ಇದ್ದಾರೆ ಇವರೆಲ್ಲಾ ಸೇರಿ ೨೫ ಸಿಟಿಂಗ್ಸ್ ಮಾಡಿದರು. ಸಿಟಿಂಗ್ಸ್ ಆದಮೇಲೆ ಸೈಟನ್ನು ಸೆಲೆಕ್ಟ್ ಮಾಡಿ ಇಂಥಾ ಕಡೆ ಶುರು ಮಾಡಬಹುದು ಎಂದು ಸಮಿತಿಯವರು ಸಲಹೆ ಕೊಟ್ಟರು. ಈಗ ಫೌಂಡೇಷನ್ ಕೆಲಸ ನಡೆಯುತ್ತಾ ಇದೆ. ಅದನ್ನು ಬ್ಲಾಕ್ಸ್ ಬ್ಲಾಕ್ಸ್ ಎಂದು ಮಾಡುತ್ತೇವೆ. ಅದರಲ್ಲಿ ಕೆಲವು ಬ್ಲಾಕ್ಸ್ ಮಾಡಿದ್ದೇವೆ. ಇನ್ನೂ ೬ ಬ್ಲಾಕ್ಸ್ ಉಳಿದಿದೆ,-ಮಾಡಬೇಕು. ಈ ಕೆಲಸಕ್ಕೆ ಟೆಂಡರ್ ಕರೆದದ್ದು ೧೯೭೫ನೇ ಇಸವಿಯಲ್ಲಿ. ಈ ಟೆಂಡರ್ಸ್ ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ಹೋಯಿತು. ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪೆನಿ ಅಂದರೆ ಅದು ಗೌವರ್ನಮೆಂಟ್ ಕಂಪೆನಿ. ಅವರಿಗೆ 17 to 74 work awarded. ಅವರು ಡ್ಯಾಂ ಮೇಲೆ ಸುಮಾರು ಐದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. The Corporation has taken advance of 5 crores. The Company has invested for infrastructure to the extent of 16·5 crores. This is the position, ೧೯೮೦ ರಲ್ಲಿ ಫೌಂಡೇಷನ್ ವರ್ಕ್ ಮುಗಿಯಬಹುದು. ಜೂನ್ ೧೯೮೩ ರೊಳಗೆ ಕನ್‌ಸ್ಟ್ರಕ್ಷನ್ ಮುಗಿಯಬಹುದು ಎಂದು ನಮ್ಮ ಅಂದಾಜು ಇದೆ.

SRI S. BANGARAPPA.— What is the original time fixed for completion of the project ?

SRI D. DEVARAJ URS:— June 1980.

ಶ್ರೀ ಮಾಣಿಕ್‌ರಾವ್ ಪಾಟೀಲ್.— ತಮ್ಮ ಡಿಪಾರ್ಟ್‌ಮೆಂಟಿನಲ್ಲಿ ೪೫ ಚೀಫ್ ಇಂಜಿನಿಯರ್ಸ್ ಇದ್ದಾರೆ, ಸಾವಿರಾರು ಜನ ಅಸಿಸ್ಟೆಂಟ್ಸ್ ಇಂಜಿನಿಯರ್ಸ್ ಇದ್ದಾರೆ, ೩ ವರ್ಷ ಏಕೆ ಬೇಕು ಸ್ವಾಮಿ ?

SRI D. DEVARAJ URS:—Due to geological problems, it is delayed. ಇನ್ನು ಚಕ್ರ ಡ್ಯಾಂ ವಿಚಾರ ಮಾತನಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಚಕ್ರ ಪ್ರಾಜೆಕ್ಟ್‌ಗೆ ಹೋಗುವ ಮೊದಲು, ಈ ಸೂಪ ಡ್ಯಾಂ ವಿಷಯದಲ್ಲಿ ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪೆನಿಯವರಿಗೆ ಎಷ್ಟು ಲಾಸ್ ಆಗಿದೆ, ಎಷ್ಟು ಕೋಟಿ ರೂಪಾಯಿ ಸರ್ಕಾರದಿಂದ ಎಕ್ಸೆಸ್ ಕೇಳಿದ್ದಾರೆ ?

SRI D. DEVARAJ URS:—I cannot go into details now. The delay is due to geological problems. I do not have all those details.

ಶ್ರೀ ಎಸ್. ಬಂಗಾರಪ್ಪ.—೧೬ ಕೋಟಿ ರೂಪಾಯಿ ಕೇಳಿದ್ದಾರೆಂದು ಗೊತ್ತಾಗಿದೆ, ಈ ಸದನದಲ್ಲಿ ಹೇಳಿ, ಎಲ್ಲರಿಗೂ ಗೊತ್ತಾಗಲಿ. ಇದರಲ್ಲಿ ಚೀಫ್ ಇಂಜಿನಿಯರ್ಸ್, ಟೆಕ್ನಿಕಲ್ಸ್ ಎಲ್ಲಾ ಸೇರಿ ಭಾರಿ ದೊಡ್ಡ ಸ್ಕ್ಯಾಂಡಲ್ ಇದೆ. ಡಿಸೈನ್ ಅಪ್ರೂವ್ ಆಗಿರಲಿಲ್ಲ. ಅದಕ್ಕೆ ಮೊದಲೇ ಟೆಂಡರ್ ಕರೆದಿದ್ದಾರೆ, ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪೆನಿಗೆ ವಹಿಸಿದ್ದಾರೆ, ಏಕೆ ? ಇದನ್ನೆಲ್ಲಾ ಸ್ವಲ್ಪ ಹೇಳಿ.

ಶ್ರೀ ಡಿ. ದೇವರಾಜ ಅರಸ್.— ನಿಮಗೆ ಮೊದಲು ಗೊತ್ತಿರಲಿಲ್ಲವೇ. ೨ ತಿಂಗಳು ಈಚೆಗೆ ಗೊತ್ತಾಯಿತೆ, ತಾವು ಮಿನಿಸ್ಟರ್ ಆಗಿದ್ದಾಗ ಏಕೆ ಹೇಳಲಿಲ್ಲ ?

ಶ್ರೀ ಎಸ್. ಬಂಗಾರಪ್ಪ.— ಅಲ್ಲಿದ್ದಾಗ ಇಲ್ಲಿ ಬಂದು ಭಾಷಣ ಮಾಡುವುದಕ್ಕೆ ಬರುತ್ತದೆಯೇ, ಯಾರಾದರೂ ಮಿನಿಸ್ಟರ್ ಆಗಿದ್ದಾಗ ಈ ರೀತಿ ಭಾಷಣ ಮಾಡುವುದಕ್ಕೆ ಆಗುತ್ತದೆಯೇ? ಈ ಸಿಂಪಲ್ ಮ್ಯಾಟರ್ ನಿಮಗೆ ಗೊತ್ತಿಲ್ಲವೇ.

ಶ್ರೀ ಡಿ. ದೇವರಾಜ ಅರಸ್.— ಚಕ್ರ ಡ್ಯಾಂ ವಿಚಾರ ಹಿಂದೆಯೂ ಬಂದಿತ್ತು. ಶ್ರೀಮಾನ್ ಬಂಗಾರಪ್ಪನವರು ಮಿನಿಸ್ಟರ್ ಆದಾಗಲೂ ಇದು ಇತ್ತು. ಆದರೆ ಇದು ಈಗ ಅವರಿಗೆ ಮನವರಿಕೆ ಆದ ಹಾಗೆ ಕಾಣುತ್ತದೆ. ಚಕ್ರ ಡ್ಯಾಂಗೆ ಟೆಂಡರನ್ನು ಜೂನ್ ೧೯೭೭ರಲ್ಲಿ ಕರೆದಿದ್ದು. ಅದರ ಎಸ್ಟಿಮೇಟೆಡ್ ಕಾಸ್ಟ್ ೯.೭೮ ಕೋಟಿ ಚಿಲ್ಲರೆ. ಅದರಲ್ಲಿ ಲೋಯೆಸ್ಟ್ ಟೆಂಡರ್ ಶ್ರೀ ಶಂಕರ್ ಕನ್‌ಸ್ಟ್ರಕ್ಷನ್ ಕಂಪೆನಿಯವರದು ಇದ್ದು, ಸೆಟಲ್ ಆದದ್ದು ೧೯೭೭ನೇ ನವೆಂಬರ್‌ನಲ್ಲಿ. Sri Shankara Construction Company's tender was approved in November 1977. One of the conditions of the Company is, advance of Rs. 80 lakhs at 9 per cent interest, and machinery advance of Rs. 108 lakhs against the hypothecation of machinery. ಈ ಕಂಡೀಷನ್ಸ್‌ನೆಲ್ಲಾ ಇವಾಲ್ಯುಯೇಟ್ ಮಾಡಿದಾಗ ಇವರೇ ಲೋಯೆಸ್ಟ್ ಟೆಂಡರರ್ಸ್ ಎಂದು ಗೊತ್ತಾಯಿತು. ಆದ್ದರಿಂದ ನಾವು ಈ ಕಂಡೀಷನ್ಸ್‌ನ್ನು ಅಕ್ಸೆಪ್ಟ್ ಮಾಡಿಕೊಂಡು ಈ ಕೆಲಸವನ್ನು ಅವರಿಗೇ ಅವಾರ್ಡ್ ಮಾಡಿದೆವು.

೧೧-೦೦ ಎ.ಎಂ.

ಆ ಮೇಲೆ ಲೀಡ್ ಚಾರ್ಜ್ ರೂಬೆಲ್ ವಿಚಾರದಲ್ಲಿ ಏನೋ ಅವ್ಯವಹಾರಗಳು ನಡೆದು ಹೋಯಿತು ಹಾಗೆ ಅಂತ ಆಗ ಪತ್ರಿಕೆಗಳಲ್ಲೂ ಸಹ ವರದಿ ಬಂತು. ಅಲ್ಲಿ ಎರಡು ಜಾಗ ಇವೆ. ಒಂದು ಓಬಿ ಗುಡ್ಡ ಮತ್ತು ನೀಲಸಕಲ್ ಅಂತ. ನೀಲಸಕಲ್ ಕ್ವಾರಿ ೧೩ ಮೈಲಿ ದೂರ, ಅಲ್ಲಿಗೆ ಹೋಗಿ ತರಬೇಕಾಗುತ್ತದೆ. ಇದರಿಂದ ಲೀಡ್ ಚಾರ್ಜಸ್ ಜಾಸ್ತಿಯಾಗುತ್ತದೆ, ಇದರ ಅಡ್ವಾನ್‌ಟೇಜಸ್ಸನ್ನು ಪುನಃ ಪಡೆದುಕೊಳ್ಳುತ್ತಿದ್ದಾರೆ ಅಂತ ಆಕ್ಷೇಪಣೆಗಳು ಬಂತು. ಆಗ ನಾವು ಜಿಯಾಲಜಿಸ್ಟ್ ಎಕ್ಸ್‌ಪರ್ಟ್‌ರವರಿಂದ ಪರೀಕ್ಷೆ ಮಾಡಿಸಿದೆವು ಒಟ್ಟು ನಮಗೆ ೧೧ ಲಕ್ಷ ಸಿ.ಎಂ.ಟಿ.ಆರ್. ಕಲ್ಲು ಸಿಕ್ಕಬೇಕಾಗಿತ್ತು. ಆಗ ಅವರು ಏನು ಪರಿಶೀಲನೆ ಮಾಡಿ ಎಕ್ಸ್‌ಪರ್ಟ್ ಕಮಿಟಿಯವರು ಒಪೀನಿಯನ್ ಕೊಟ್ಟರು ಎಂದರೆ ಅಲ್ಲಿ ಕೇವಲ ೮ ಲಕ್ಷ ಸಿ.ಎಂ.ಟಿ.ಆರ್. ಕಲ್ಲು ಸಿಗುತ್ತದೆಂದು ತಿಳಿಸಿದರು. ಆದರೆ ಗೂಬೆ ಗುಟ್ಟಕ್ಕಿಂತ ನೀಲಸಕಲ್ ಎರಡು ಕಿಲೊ ಮೀಟರ್ ಜಾಸ್ತಿ ಇರುವುದರಿಂದ ಅಲ್ಲಿ ಇನ್ನು ೩ ಲಕ್ಷ ಸಿ.ಎಂ.ಟಿ. ರೂಬೆಲ್ ಸಿಕ್ಕುತ್ತದೆಂದು ತಿಳಿದು ಬಂದುದರಿಂದ ಅದನ್ನು ಗೊತ್ತು ಮಾಡಲಾಗಿದೆ ಅಷ್ಟೇ. ಇನ್ನು ೧.೫೪ ರೂ. ಅಂತ ಲೀಡಿಂಗ್ ಚಾರ್ಜಸ್ ಪರ ಕಿಲೋ ಮೀಟರ್ ಅಂತ ಫಿಕ್ಸ್ ಮಾಡಿದೆ. ಮತ್ತೆ ಅಲ್ಲಿ ಸ್ವಲ್ಪ ಕೆಲಸ ನಿಧಾನ ಏತಕ್ಕೆ ಆಯಿತು ಎಂದರೆ ಅದಕ್ಕೆ ಕಾರಣವಿಷ್ಟೆ ಅಲ್ಲಿ ದಟ್ಟವಾದ ಕಾಡು ಇತ್ತು ಅದನ್ನು ಕ್ಲಿಯರ್ ಮಾಡಬೇಕಾ

ದರೆ ಸ್ವಲ್ಪ ನಿಧಾನವಾಯಿತು. ಅದು ೧೯೮೦ಕ್ಕೆ ಆಗಬೇಕಾಗಿತ್ತು, ೧೯೮೧ಕ್ಕೆ ಮುಗಿಯಬಹುದೆಂದು ನಿರೀಕ್ಷಣೆ ಮಾಡುತ್ತಿದ್ದೇವೆ. ಇದುವರೆಗೆ ಸುಮಾರು ೩ ಕೋಟಿ ರೂಪಾಯಿಗಳ ಕೆಲಸ ಟರ್ನ್ ಔಟ್ ಆಗಿದೆ. ಇದು ಚಕ್ರಾ ಪ್ರಾಜೆಕ್ಟ್ ಬಗ್ಗೆ ಆಯಿತು.........

ಶ್ರೀ ಎಸ್. ಬಂಗಾರಪ್ಪ.—ತಾವು ಮುಂದೆ ಬೇರೆ ವಿಷಯಕ್ಕೆ ಹೋಗುವುದಕ್ಕಿಂತ ಮುಂಚಿತವಾಗಿ ನಾನೊಂದು ಪ್ರಶ್ನೆ ತಮ್ಮನ್ನು ಕೇಳಬಯಸುತ್ತೇನೆ. ತಾವು ಹೇಳಿದಿರಿ ಶಂಕರ್ ಕನ್‌ಸ್ಟ್ರಕ್ಷನ್ ಕಂಪನಿದೇ ಲೋಯಸ್ಟ್ ಟೆಂಡರ್ ಅಂತ, ನನಗೆ ತಿಳಿದ ಪ್ರಕಾರ ಅವರದು ೩ನೇ ಲೋಯೆಸ್ಟ್ ಆಗುತ್ತದೆ. ಇದನ್ನು ನೋಡಿದರೆ ತಾವು ಎಲ್ಲಾ ಟೆಂಡರನ್ನೂ ಸರಿಯಾಗಿ ಎವ್ಯಾಲ್ಯುಯೇಟ್ ಮಾಡುವುದಕ್ಕೆ ಹೋಗಿಲ್ಲ, ಇದು ಮೊದಲನೆಯ ತಪ್ಪು. ಎರಡನೆಯ ಪಾಯಿಂಟ್ ಏನು ಓಬಿಗುಡ್ಡ ಮೊದಲು ಅಗ್ರಿಮೆಂಟಿನಲ್ಲಿ ಆಗಿರತಕ್ಕಂಥದ್ದು ನೀಲಸಕಲ್ ಗುಡ್ಡ ಅಲ್ಲ, ಈ ಅಂಶ ನಿಜವೇ ಅಲ್ಲವೇ ? ಮೊದಲು ಓಬಿ ಗುಡ್ಡ ಅಂತ ಹೇಳಿ ಆಮೇಲೆ ನೀಲಸಕಲ್‌ಗೆ ಛೇಂಜ್ ಮಾಡಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಜಾಸ್ತಿ ಖರ್ಚು ಆದಂತೆ ಆಗುವುದಿಲ್ಲವೇ ದಯವಿಟ್ಟು ಇದರ ಬಗ್ಗೆ ಕೂಡ ತಾವು ಹೇಳಬೇಕು.

ಶ್ರೀ ಡಿ. ದೇವರಾಜ್ ಅರಸ್.—ಅಧ್ಯಕ್ಷಣೀಯವರೇ ಅವರಿಗೆ ಇದರ ಬಗ್ಗೆ ಕೂಡ ನಾನು ಕನ್‌ವಿನ್ಸ್ ಮಾಡಿಕೊಡುತ್ತೇನೆ. ಈಗ ನಾನು ಡಿಟೇಲ್ಸ್ ಬಗ್ಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಅವರು ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬೇಕೆಂದು ಇಷ್ಟಪಡುವುದಾದರೆ ನಮ್ಮ ಅಧಿಕಾರಿಗಳಿದ್ದಾರೆ, ಸಂಬಂಧಪಟ್ಟ ಇಂಜಿನಿಯರ್ಸ್ ಇದ್ದಾರೆ, ಅವರು ಬರಲಿ ನಾನು ಅವರಿಗೆ ಏನೇನು ಮಾಹಿತಿ ಬೇಕೋ ಅದನ್ನೆಲ್ಲಾ ಒದಗಿಸಿಕೊಡುತ್ತೇನೆ. ಅವರಿಗೆ ಸ್ಯಾಟಿಸ್‌ಫ್ಯಾಕ್ಷನ್ ಆಗುವ ಹಾಗೆ ಉತ್ತರ ಕೊಡುತ್ತೇನೆ. ಇದನ್ನೆಲ್ಲಾ ಮಾಡಿರುವುದು ಬೋರ್ಡ್. The Board has taken the decision and that decision has been correct, in the sense it is the lowest tender. ಇದು ನಿಮಗೆ ಕನ್‌ವಿನ್ಸ್ ಆಗದೇ ಇರಬಹುದು ; ಆ ರೀತಿ ಕೆಲವು ವಿಚಾರಗಳು ಇರುತ್ತದೆ ಮತ್ತೆ ಇನ್ನು ಎಷ್ಟೋ ವಿಚಾರಗಳನ್ನು ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ ಅವುಗಳಿಗೆಲ್ಲಾ ನಾನು ಹೆಚ್ಚು ಕಾಲ ತೆಗೆದುಕೊಳ್ಳಬೇಕಾದಂಥ ಅಗತ್ಯವಿಲ್ಲ. ಆದರೆ ಕೆಲವರು ಏನು ಮಾಡಿದ್ದಾರೆ ಎಂದರೆ, ಸರ್ಕಾರದ ಮೇಲೆ ಕೆಲವು ದೋಷಾರೋಪಣೆಗಳನ್ನು ಮಾಡುತ್ತಾ ಸರ್ಕಾರ ಏನೂ ಮಾಡೇ ಇಲ್ಲ ಅಂತ ಆರೋಪಣೆ ಮಾಡಿದ್ದಾರೆ. ಆದುದರಿಂದ ಅದರ ಬಗ್ಗೆ ಒಂದೆರಡು ಮಾತನ್ನು ಹೇಳಬಯಸುತ್ತೇನೆ. ಈ ೨೦ ಅಂಶದ ಕಾರ್ಯಕ್ರಮ ಎಂದು ಏನು ಹೇಳುತ್ತಾರೆ, ಈ ಕಾರ್ಯಕ್ರಮಗಳು ಪೂರ್ತಿಯಾಗಿ ಯಾವುದೇ ಒಂದು ರಾಜ್ಯಕ್ಕೆ ಅನ್ವಯಿಸುವಂತಿಲ್ಲ ಕೆಲವು ಕೇಂದ್ರ ಸರ್ಕಾರದವರು ಮಾಡತಕ್ಕಂಥ ಕಾರ್ಯಕ್ರಮಗಳು ಮತ್ತು ಕೆಲವು ಆಯಾ ರಾಜ್ಯಗಳಿಗೆ ಅನುಗುಣವಾಗತಕ್ಕಂಥ ಕಾರ್ಯಕ್ರಮಗಳು. ಒಟ್ಟು ೨೦ ಅಂಶದ ಕಾರ್ಯಕ್ರಮ ಎಂದು ನಾವು ಅಂದುಕೊಂಡು ಬಂದಿದ್ದೇವೆ. ಅವರು ಹೇಳದೇ ಇರತಕ್ಕಂಥ ಕೆಲವೊಂದು ಕಾರ್ಯಕ್ರಮಗಳನ್ನು ನಾವು ಕರ್ನಾಟಕದಲ್ಲಿ ಮಾಡಿಕೊಂಡು ಬಂದಿದ್ದೇವೆ. ಉದಾಹರಣೆಗೆ ಲ್ಯಾಂಡ್ ರಿಫಾರಂಸ್. ಈ ಕಾರ್ಯಕ್ರಮವನ್ನು ಕೇಂದ್ರದವರು ಹೇಳಿದ್ದುದು ನಿಜ ಆದರೆ ಕಾರ್ಯ ನಿರ್ವಹಣೆ ಮಾಡಿದಾಗ ನಾವೇ ಪ್ರಥಮವಾಗಿ ಮಾಡಿದ್ದು. ನಮ್ಮನು , ಪಕ್ಕದ ಆಂಧ್ರ ಪ್ರದೇಶವನ್ನು ಬಿಟ್ಟರೆ ಲ್ಯಾಂಡ್ ರಿಫಾರಂಸ್ ಬೇರೆ ಎಲ್ಲೂ ಇಷ್ಟೊಂದು ಪ್ರಗತಿದಾಯಕವಾಗಿ ಆಗಿಲ್ಲ. ಇದನ್ನು ಮಾನ್ಯ ಪಾಟೀಲ್ಲಯವರು ಮೊನ್ನೆಯವರೆಗೂ ಹೇಳುತ್ತಿದ್ದರು. ಈಗ ಬೇರೆ ಹೇಳುತ್ತಿದ್ದಾರೆ ಅಷ್ಟೇ. ನಿನ್ನೆಯ ದಿವಸ ಅವರು ಕೆಲವು ಫಿಗರ್ಸ್ ತೆಗೆದುಕೊಂಡು ಏನೇನೋ ವಾದವನ್ನು ಮುಂದಿಟ್ಟರು ಕೇವಲ ೬೧ ಸಾವಿರ ಟೆನೆಂಟ್ಸ್‌ಗೆ ಜಮೀನು ಕೊಟ್ಟಿದ್ದಾರೆ ಹಾಗೆ ಎಂದು ಹೇಳಿದರು. ೬೧ ಸಾವಿರ ಟೆನೆಂಟ್ಸ್‌ಗೆ ಜಮೀನು ಕೊಟ್ಟಿರತಕ್ಕದರ ಬಗ್ಗೆ ನಮ್ಮ ಮಂತ್ರಿಗಳವರೂ ಕೂಡ ಹೇಳಿದ್ದಾರೆ, ಅವರಿಗೆ ಪಟ್ಟ ಕೂಡ ಕೊಟ್ಟಿದ್ದೇವೆ. ನಿಜ. ಸರ್ಕಾರ ತಕ್ಷಣದಲ್ಲಿಯೇ ಟೆನೆಂಟ್ಸ್ ಪೈಕಿ ಯಾರು ಸ್ಮಾಲ್ ಹೋಲ್ಡರ್ಸ್ ಇದ್ದಾರೆ. ಮಾರ್ಜಿನಲ್ ಹೋಲ್ಡರ್ಸ್ ಇದ್ದಾರೆ ಅವರಿಗೆಲ್ಲಾ ಪಟ್ಟ ಕೊಡಿಸಿ ಕೊಡಬೇಕೆಂದು ನಾವು ತೀವ್ರವಾಗಿ ಯೋಚನೆ ಮಾಡುತ್ತಿದ್ದೇವೆ. ಲ್ಯಾಂಡ್ ಲಾರ್ಡ್ಸ್ ಏನು ಡಿಕ್ಲೇರ್ ಮಾಡಿದ್ದಾರೆ, ಅವರ ಪೈಕಿ ಕೇವಲ ೭೯ ಸಾವಿರ ಎಕರೆಗೆ ಸಂಬಂಧಪಟ್ಟ ಕೇಸ್‌ಗಳನು ಡಿಸ್ಪೋಜ್ ಮಾಡಿದ್ದೇವೆ. ಮತ್ತೆ ಲ್ಯಾಂಡ್ ಲಾರ್ಡ್ಸ್ ಡಿಕ್ಲೇರ್ ಮಾಡಿರತಕ್ಕಂಥದ್ದು ಅಂತ ಹೇಳಿದರೆ ಅದು ಲ್ಯಾಂಡ್ ಲಾರ್ಡ್ಸ್ ಎಂದು ಹೇಳಿದರೆ ಸರ್‌ಪ್ಲಸ್ ಹೋಲ್ಡರ್ಸ್ ಎಂದಲ್ಲ. Even non-surplus holders should declare there were 73 lakhs of hectares. 5,555 persons have been determined as having surplus land. ಇದರಲ್ಲಿ

ಸುಮಾರು ೭ ಸಾವಿರ ಎಕರೆ ಲ್ಯಾಂಡ್‌ನ್ನು ಲ್ಯಾಂಡ್ ಲೆಸ್, ವೀಕರ್ ಸೆಕ್ಷನ್‌ರವರಿಗೆ ಕೊಟ್ಟಿದ್ದೇವೆ. Out of this nearly 3,900 SC/ST families have been benefitted. ನಾನು ೧೯೭೮-೭೯ರ ಬಗ್ಗೆ ಹೇಳುತ್ತಿದ್ದೇನೆ. Small and marginal farmers have been advanced 650 lakhs. They have advanced a total loan amount of Rs. 1,175 lakhs to about 1.36 lakhs, small and marginal farmers up to June 1979......ಸುಮಾರು ೧೨,೯೪೦ ಮಂದಿ ಸಣ್ಣ ರೈತರಿಗೆ, ಜಮೀನಿಲ್ಲದವರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ೧೪೭ ಲಕ್ಷ ರೂಪಾಯಿ ಮಧ್ಯಮಾವಧಿ ಸಾಲವನ್ನು ನೀಡಲಾಗಿದೆ. ಮತ್ತೆ ವೃದ್ಧಾಪ್ಯ ವೇತನವನ್ನು ಜೂನ್ ೧೯೭೯ರ ವರೆಗೆ ೨ ಲಕ್ಷದ ೩೧ ಸಾವಿರ ಜನರಿಗೆ ಕೊಡುತ್ತಿದ್ದೇವೆ. ಇದು ೨೦ ಅಂಶಗಳ ಕಾರ್ಯಕ್ರಮವಲ್ಲ. ನ್ಯೂಟ್ರಿಷನ್ ಪ್ರೋಗ್ರಾಂ ಕೂಡ ೨೦ ಅಂಶಗಳ ಕಾರ್ಯಕ್ರಮವಲ್ಲ. ಅದೂ ನಮ್ಮದೆ. ೧೫ ಲಕ್ಷದ ೨೭ ಸಾವಿರ ಮಕ್ಕಳಿಗೆ ಮಿಡ್ ಡೇ ಮೀಲ್ಸನ್ನು ಹಂಚುತ್ತಿದ್ದೇವೆ. ೧೯೭೭-೭೮ರಲ್ಲಿ ೧೩ ಲಕ್ಷ ಚಿಲ್ಲರೆ ಇತ್ತು, ಈಗ ಅದನ್ನು ಹೆಚ್ಚಿಸಿದ್ದೇವೆ. ಹಾಗೆಯೇ ಮನೆ ನಿವೇಶನಗಳನ್ನು ಹಂಚಲು ಕೇಂದ್ರದವರು ಹೇಳಿದ್ದು ಅಲ್ಲ: ನಾವೇ ೯ ಲಕ್ಷದ ೮೧ ಸಾವಿರ ಸೈಟುಗಳನ್ನು ಹಂಚಿದ್ದೇವೆ. ಜನತಾ ಹೌಸಿಂಗ್ ಸ್ಕೀಂ ಕೂಡ ನಮ್ಮದೇ, ಕೇಂದ್ರದ್ದು ಅಲ್ಲ. ಅದರ ಪ್ರಕಾರ ಈಗ ಲಕ್ಷದ ೫ ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಈ ವರ್ಷ ಜೊತೆಗೆ ಹುಡ್ಕೋ ಸ್ಕೀಂ ಸಿಕ್ಕಿದ್ದರಿಂದ ಅದರ ಲಾಭ ಪಡೆದು ಇನ್ನೂ ೫೦ ಸಾವಿರ ಮನೆಗಳನ್ನು ಹೆಚ್ಚಾಗಿ ಕೊಡಬೇಕೆಂದು ಪ್ರಯತ್ನ ಮಾಡಿದ್ದೇವೆ. ಬಾಂಡೆಡ್ ಲೇಬರರ್ಸ್ ಪೈಕಿ nearly 50 percent have been rehabilitated and seven thousand people have been given bank assistance. ೧೯೭೯ರ ಮಾರ್ಚ್‌ವರೆಗೆ ೮ ಕೋಟಿ ೮೧ ಲಕ್ಷ ರೂಪಾಯಿಗಳನ್ನು ಎಸ್.ಎಫ್.ಡಿ.ಗೆ, ಎಸ್.ಎಂ.ಎಫ್.ಗೆ ಹಾಗೂ ವೀಕರ್ ಸೆಕ್ಷನ್‌ಗಳಿಗೆ ಕೊಡಲಾಗಿದೆ. ನಮ್ಮ ದೇಶದಲ್ಲಿ Small and Marginal Farmers and Agricultural Labourers identify ಆಗಿರುವವರು ೧೯೭೮ರ ಮಾರ್ಚ್‌ವರೆಗೆ ೧೨ ಲಕ್ಷದ ೨೮ ಸಾವಿರ ಮಂದಿ. ಅದರಲ್ಲಿ ೩ ಲಕ್ಷ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಪರ್ಸನ್ಸ್ ಇದ್ದಾರೆ. ಮತ್ತೆ ಸುಮಾರು ಒಂದು ಲಕ್ಷದ ೧೩ ಸಾವಿರ ಮಕ್ಕಳು ಎಸ್.ಸಿ.-ಎಸ್.ಟಿ.ಗೆ ಸೇರಿದವರು ಹಾಗೂ ೬೦ ಸಾವಿರ ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಮೈನಾರಿಟಿ ಕಮ್ಯೂನಿಟಿಗೆ ಸೇರಿದ ಮಕ್ಕಳು ಇದ್ದಾರೆ. ಇವರಿಗೆ ಪ್ರೀ ಮೆಟ್ರಿಕ್ ಸ್ಕಾಲರ್‌ಷಿಪ್ ಕೊಡುತ್ತಿದ್ದೇವೆ. ನಂತರ ೩೮೫ ಎಸ್.ಸಿ., ಎಸ್.ಟಿ. ಹಾಸ್ಟೆಲ್ಸ್ ಮೆಯಿಂಟೇನ್ ಮಾಡಿ ರನ್ ಮಾಡುತ್ತಿದ್ದೇವೆ. ಇನ್ನು ಸ್ಟೈಪೆಂಡರಿ ಎಂಪ್ಲಾಯ್‌ಮೆಂಟ್ ಸ್ಕೀಂ ಎಂಬುದು ಕೇಂದ್ರದ್ದಲ್ಲ, ನಮ್ಮದು. ಅದರಲ್ಲಿ ಸಾಧ್ಯವಾದಷ್ಟು ನಿರುದ್ಯೋಗಿಗಳಿಗೆ ಸಹಾಯ ಮಾಡುವ ದೃಷ್ಟಿಯಿಂದ ಅದನ್ನು ನಾವು ಜಾರಿಗೆ ತಂದಿದ್ದೇವೆ. ೧೨ ಸಾವಿರ ನಿರುದ್ಯೋಗಿ ಪದವೀಧರರು ಏನು ಇದ್ದಾರೆ ಅವರಿಗೆ ಈ ಯೋಜನೆಯಲ್ಲಿ ಸ್ಟೈಪೆಂಡ್ ಕೊಡುತ್ತಿದ್ದೇವೆ ಮತ್ತು ಅವರಿಂದ ಕೆಲಸ ತೆಗೆದುಕೊಳ್ಳುತ್ತಿದ್ದೇವೆ. ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಂ ಕೂಡ ನಮ್ಮದೇ. ಅದನ್ನು ೧ನೇ ಮಾರ್ಚ್ ೧೯೭೯ ರಿಂದ ಪ್ರಾರಂಭ ಮಾಡಿದ್ದೇವೆ. ಈ ವರ್ಷ ಸುಮಾರು ಒಂದು ಲಕ್ಷದ ೫೦ ಸಾವಿರ ಜನರಿಗೆ ಉದ್ಯೋಗ ಕೊಟ್ಟಿದ್ದೇವೆ. ಇದನ್ನು ನಾವು ವರ್ಷೇ ವರ್ಷೇ ವಿಸ್ತರಣೆ ಮಾಡಿ ರಾಜ್ಯದ ತುಂಬ ಉದ್ಯೋಗಗಳನ್ನು ಕೊಡಬೇಕೆಂಬುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಅದರ ಜೊತೆಗೆ ಭಾಗ್ಯಜ್ಯೋತಿ ಯೋಜನೆ ಎಂದು ಈ ವರ್ಷ ೪೦ ಸಾವಿರ ಮನೆಗಳಿಗೆ ದೀಪ ಕೊಡಬೇಕೆಂದು ಮಾಡಿದ್ದೇವೆ. ಅದರಲ್ಲಿ ೫೦ ರೂಪಾಯಿ ಸಬ್ಸಿಡಿ ಮತ್ತು ೨೦೦ ರೂಪಾಯಿ ಸಾಲ ಕೊಡುವುದು ಎಂದು ಮಾಡಿದ್ದೇವೆ. ಡಿಫರೆನ್‌ಷಿಯಲ್ ರೇಟ್ ಆಫ್ ಇಂಟರೆಸ್ಟ್ ಸ್ಕೀಂನಲ್ಲಿ ಈ ಸಾರಿ ಇದುವರೆಗೆ ಕೊಟ್ಟಿರ ತಕ್ಕದ್ದು ಒಂಭತ್ತೂವರೆ ಕೋಟಿ ರೂಪಾಯಿಗಳು. ಡೆಟ್ ಲಿಕ್ವಿಡೇಷನ್ ಆಕ್ಟ್‌ಗೆ ನಾವು ತಿದ್ದುಪಡಿಯನ್ನು ತಂದು ೨೫ ನೂರರಿಂದ ೪೮ ನೂರು ರೂಪಾಯಿಗಳವರೆಗೆ ಮಿತಿ ಇಟ್ಟಿರುವುದು ಬಹಳ ಜನಕ್ಕೆ ಅನುಕೂಲವಾಗುತ್ತದೆ. ಆದರೆ ಆ ಆಕ್ಟ್ ಇನ್ನೂ ಜಾರಿಗೆ ಬಂದಿಲ್ಲ, ಕೇಂದ್ರದಲ್ಲಿ ನಿಂತಿದೆ. ಅದರ ಮುಂದೆ ಒತ್ತಿ ಕಳುಹಿಸಿಕೊಡಬೇಕಾಗಿದೆ. ಸಾಧ್ಯವಾದಷ್ಟು ಬೇಗ ತರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮತ್ತೊಂದು ಸುಮಾರು ೪೦ ಕೋಟಿ ರೂಪಾಯಿನ ದೊಡ್ಡ ಯೋಜನೆಯೊಂದನ್ನು ಹಾಕಿ ವಿಶ್ವ ಬ್ಯಾಂಕಿಗೆ ಕಳುಹಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಏಕೆಂದರೆ, ಬಾಂಡೆಡ್ ಲೇಬರ್ಸ್ ಯಾರಿದ್ದಾರೆ ಅವರಿಗೆ ರೀಹ್ಯಾಬಿಲಿಟೇಟ್ ಮಾಡುವುದಕ್ಕೋಸ್ಕರ; ಲ್ಯಾಂಡನ್ನು ಡೆವಲಪ್ ಮಾಡಿ ಖಾಯಂ ಆಗಿ ಅವರನ್ನು ಅಲ್ಲಿಯೇ ಉಳಿಸುವ ಸಲುವಾಗಿ ೪೦ ಕೋಟಿ ರೂಪಾಯಿ ಯೋಜನೆಗೆ ವಿಶ್ವ ಬ್ಯಾಂಕನ್ನು ಅಪ್ರೋಚ್ ಮಾಡುತ್ತೇವೆ; ಬಹುಶಃ ಸಕ್ಸಸ್‌ಫುಲ್ ಆಗಿ ದುಡ್ಡು ಸಿಗುತ್ತದೆಂಬ ನಂಬಿಕೆ

ಇದೆ, ಇನ್ನು ಪ್ರೊಮೋಷನಲ್ ವೇಕೆನ್ಸೀಸ್‌ಗೆ ರಿಸರ್ವೇಷನ್ ಇಟ್ಟಿದ್ದೇವೆಂಬುದನ್ನು ಮೊದಲೇ ಹೇಳಿದ್ದೇನೆ. ಇತ್ತೀಚೆಗೆ ತಾಲ್ಲೂಕು ಲೆವೆಲ್‌ನಲ್ಲಿ ಎಕನಾಮಿಕ್ ಡೆವಲಪ್‌ಮೆಂಟಿಗೋಸ್ಕರ ಇಂಪ್ಲಿಮೆಂಟೇಷನ್ ಜರೂರಾಗಿ ಆಗಬೇಕು, ಅಧಿಕಾರಿಗಳು ಅಜಾಗರೂಕತೆಯಿಂದ ಇರಬಾರದೆಂಬ ದೃಷ್ಟಿಯಿಂದ ತಾಲ್ಲೂಕ್ ಮಟ್ಟದಲ್ಲಿ ಕಮಿಟಿಗಳನ್ನು ಮಾಡಿ ಅಲ್ಲಿನ ತಹಸೀಲ್ದಾರರುಗಳನ್ನು ಆ ಸಮಿತಿಗಳ ಕಾರ್ಯದರ್ಶಿಗಳನ್ನಾಗಿ ಮಾಡಿ ನಾನ್ ಅಫಿಷಿಯಲ್ಸ್ ಅನ್ನು ಛೇರ್ಮನ್ನರನ್ನಾಗಿ ಮಾಡಿ ಆ ಕಮಿಟಿಗಳು ಕೂಡ ಫಂಕ್ಷನ್ ಮಾಡುವುದಕ್ಕೆ ಸಾಧ್ಯವಾಗುತ್ತಿದೆ. ಇದು ಕೆಲಸ ಚನ್ನಾಗಿ ನಡೆಯಬೇಕೆಂಬ ದೃಷ್ಟಿಯಿಂದ ಮಾಡಿರುವುದು.

ಕೊನೆಯದಾಗಿ, ಮಾನ್ಯ ದೇವೇಗೌಡರು ಅವರ ಒಂದು ದೀರ್ಘ ಭಾಷಣದಲ್ಲಿ ಕೆಲವು ಆಡಳಿತ ಲೋಪ ದೋಷಗಳನ್ನು ಹೇಳಿದ್ದಾರೆ. ಒಂದು ಮಾತನ್ನು ನಾವೆಲ್ಲ ಜ್ಞಾಪಕಗಲ್ಲಿಟ್ಟುಕೊಳ್ಳಬೇಕಾದುದು ಏನೆಂದರೆ, ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳು ಏನಿವೆ ಅಂಥ ಕಾರ್ಯಕ್ರಮಗಳು ಹಿಂದೆ ಎಂದೂ ನಮ್ಮ ದೇಶದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ನಡೆದಿರಲಿಲ್ಲ. ಈಗ ನಮ್ಮ ಯತ್ನ ಏನು ಎಂದರೆ ಪ್ರತಿಯೊಂದು ಸಂಸಾರವೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಯಾವುದಾದರೂ ಒಂದು ರೀತಿಯಾದಂತಹ ಸಾಲ, ಸಹಕಾರ, ಆರ್ಥಿಕ ಸಹಾಯ ಪಡೆಯಬೇಕೆಂಬುದು. ಈ ಉದ್ದೇಶದಿಂದ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದು ಕೇವಲ ಯಾವುದೋ ಒಂದು ಪಂಗಡದ ಅಥವಾ ಜಾತಿಯ ಪ್ರಶ್ನೆ ಅಲ್ಲ. ಬಡವರು ಯಾರಿದ್ದಾರೆ ಅವರು ಯಾವ ಜಾತಿಯವರೇ ಆಗಿರಲಿ ಅಂಥ ಬಹುತೇಕ ಸಂಸಾರಗಳಿಗೆ, ಜನಗಳಿಗೆ ಯಾವ ಕಾರ್ಯಕ್ರಮಗಳ ಮುಖೇನವಾಗಲಿ ಒಂದಲ್ಲ ಒಂದು ರೀತಿಯ ಸಹಾಯ ಆಗತಕ್ಕ ವಿಚಾರ ನಮ್ಮ ಮುಂದೆ ಇದೆ. ನಮ್ಮ ರಾಜ್ಯದಲ್ಲಿ ೩ ಚಿಲ್ಲರೆ ಕೋಟಿ ಪ್ರಜೆಗಳು ಇದ್ದಾರೆ ಅಂದರೆ ಸುಮಾರು ೭೦ ಲಕ್ಷ ಸಂಸಾರಗಳು ಆಗಬಹುದು ಆ ೭೦ ಲಕ್ಷದಲ್ಲಿ ನಾವು ಇನ್ನೂ ಅರ್ಧ ಬಿಟ್ಟಿದ್ದೇವೆ ಅಂದರೂ ೩೫ ಲಕ್ಷ ಸಂಸಾರಗಳಿಗೆ ಯಾವುದಾದರೂ ಒಂದು ಯೋಜನೆಯಿಂದ ಒಂದಲ್ಲ ಒಂದು ರೀತಿಯ ಸಹಾಯ ಮಾಡಬೇಕೆಂಬ ಉದ್ದೇಶ ಇದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ರಮಗಳು ನಡೆಯುವಾಗ ಅನೇಕ ಲೋಪದೋಷಗಳು ಕಂಡುಬರುತ್ತವೆ. ಲೋಪದೋಷಗಳನ್ನು ಸಾಧ್ಯವಾದಷ್ಟು ಮುಚ್ಚಬೇಕೆಂಬ ಉದ್ದೇಶದಿಂದಲೇ ನಾವು ಖಾಸಗೀ ಜನರನ್ನು ಹೆಚ್ಚು ಹೆಚ್ಚಾಗಿ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಸಮಿತಿಗಳನ್ನು ಮಾಡುತ್ತೇವೆ.

ಈ ಸಮಿತಿಗಳನ್ನು ಮಾಡುವಾಗ ಕೆಲವು ಕಡೆ ೩ ಸಾವಿರ ರೂಪಾಯಿಗಳ ಲಂಚ ತೆಗೆದುಕೊಳ್ಳುತ್ತಿದ್ದಾರೆ. ನನಗೆ ಗೊತ್ತಿದೆ, ಈ ರೀತಿ ನಾನ್ ಅಫಿಷಿಯಲ್ ಮೆಂಬರ್ಸ್ ಮಾಡುತ್ತಿದ್ದಾರೆ ಇದನ್ನು ನೀವು ನೋಡುತ್ತಾ ಇಲ್ಲ ಎಂದು ಅವರು ಹೇಳಿದರು. ನಾನು ಒಂದು ವಿಚಾರವನ್ನು ಬಹಳ ವಿನಯದಿಂದ ಹೇಳುತ್ತಿದ್ದೇನೆ, ನನಗೆ ಎಲ್ಲೆಲ್ಲಿ ಇಂತಹ ಖಚಿತವಾದ ವರ್ತಮಾನ ಗೊತ್ತಾಗಿದೆ ಅಲ್ಲೆಲ್ಲಾ ನಾಲ್ಕಾರು ಕಡೆ ಅವರನ್ನು ಬದಲಾಯಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅವರನ್ನು ಬದಲಾಯಿಸಿದ್ದೇವೆ ಕೂಡ. ಇಂತಹ ವಿಚಾರಗಳನ್ನು ತಾವು ಹೇಳಿದರೆ ನಮಗೆ ಗೊತ್ತಾಗುತ್ತದೆ. ಇಲ್ಲಿ ತಾವು ಹೇಳುವುದಕ್ಕೆ ತಮಗೆ ಅಧಿಕಾರವಿದೆ. ಇಂತಹ ಕಡೆ ಇಂತಹವರಿಂದ ಲೋಪದೋಷಗಳು ಆಗುತ್ತಿವೆ ಎನ್ನುವುದು ನಿಮ್ಮ ಗಮನಕ್ಕೆ ಖಚಿತವಾಗಿ ಬಂದರೆ ಅದನ್ನು ನಮಗೆ ತಿಳಿಸಿದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ. ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೆಲಸ ನಡೆಯುವಾಗ ಲೋಪದೋಷಗಳು ಇದ್ದೇ ಇರುತ್ತವೆ. ನಾವು ಖಾಸಗೀ ಜನರನ್ನು ಬಿಟ್ಟು ನಮ್ಮ ಅಧಿಕಾರಿಗಳನ್ನೇ ಕಳಿಸಿ, ಅವರು ನಿಷ್ಠೆಯಿಂದ ಕೆಲಸ ಮಾಡಿದರೂ ಆಗಲೂ ಕೂಡ ಒಂದು ರೀತಿಯ ಆಪಾದನೆ ಮಾಡುತ್ತಾರೆ. 'ಅಧಿಕಾರಿಗಳು ಎಲ್ಲಾ ಕಡೆ ಮೋಸ ಮಾಡುತ್ತಿದ್ದಾರೆ, ಕೆಲಸ ಮಾಡುತ್ತಿಲ್ಲ, ಎಂದು ಅವರ ಮೇಲೆ ಆಪಾದನೆ ಮಾಡುತ್ತಾರೆ. ಖಾಸಗೀ ಜನರಿಗೆ ಕೊಟ್ಟರೆ ಇನ್ನೊಂದು ತರಹದ ಆಪಾದನೆಗಳು ಬರುತ್ತವೆ. ಇನ್ನು ಯಾರಿಗೆ ಕೊಡೋಣ ಅವರ ಮೇಲೆ ಏನೇನು ಆಪಾದನೆಗಳು ಇದ್ದರೂ ಕೂಡ ಖಾಸಗೀ ಜನರಿಂದ ಹೆಚ್ಚು ಹೆಚ್ಚು ಕೆಲಸ ಮಾಡಿಸಲಿಕ್ಕೆ ಅವರ ಸಹಕಾರ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಬೇಕು ಎನ್ನತಕ್ಕಂಥಾದರಲ್ಲಿ ನಾನು ತುಂಬಾ ವಿಶ್ವಾಸವುಳ್ಳವನು. ಖಾಸಗೀ ಜನಗಳು ಒಂದಲ್ಲ ಒಂದು ರೀತಿಯಲ್ಲಿ ಜನರ ಮುಂದೆ ಹೋಗಬೇಕು, ಅವರೆಲ್ಲರೂ ಚುನಾವಣೆಗೆ ನಿಲ್ಲದಿದ್ದರೂ ಕೂಡ ಜನರಿಗೆ ಗೊತ್ತಾದರೆ ಅವರ ಬಗ್ಗೆ ಹಿಯ್ಯಾಳಿಕೆ ಇದ್ದೇ ಇರುತ್ತದೆ ಎನ್ನುವುದು ನಮಗೆ ಗೊತ್ತಿದೆ. ಆ ಜನರೂ ನಮಗೆ ಬೇಕು. ಈಗ ನಾವು ನೂರಾರು ಕಮಿಟಿಗಳನ್ನು ಮಾಡಿದ್ದೇವೆ. ನೂರಾರು ಕಮಿಟಿಗಳಲ್ಲಿ ಸಾವಿರಾರು ಜನರು ಕೆಲಸ ಮಾಡುತ್ತಿದ್ದಾರೆ. ಆ ಸಾವಿರಾರು ಜನಗಳ ಪೈಕಿ ನೂರಾರು ಜನ ತಪ್ಪು ಮಾಡಿರಬಹುದು. ಅವರು ಲಂಚವನ್ನು ತೆಗೆದುಕೊಂಡಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಅದು ನನಗಾವರೂ ಗೊತ್ತಾಗುವುದು ಹೇಗೆ?

ನನಗೆ ಅದು ಗೊತ್ತಾಗಬೇಕಾದರೆ ತಾವು ನನಗೆ ಬರೆದರೆ ಅದು ಗೊತ್ತಾಗುತ್ತದೆ. ನಮ್ಮ ಮಾನ್ಯ ಗುಂಡೂರಾಯರು 'ಇಂತಹ ಕಡೆ ಕೆಲವರಿಗೆ ಜಾಗ ಕೊಟ್ಟಿದ್ದಾರೆ ನೋಡಿ' ಎಂದು ಹೇಳಿದರು. ಆ ರೀತಿ ಮಾಹಿತಿ ಕೊಟ್ಟರೆ ನನ್ನ ಗಮನಕ್ಕೆ ಬರುತ್ತದೆ. ನೀವು ಕೊಡದೇ ಹೋದರೆ ನನ್ನ ಗಮನಕ್ಕೆ ಅದು ಬರುವುದಕ್ಕೆ ಸಾಧ್ಯವೇ ಇಲ್ಲ. ಹೀಗೆ ಲೋಪದೋಷಗಳನ್ನು ತಿದ್ದುವುದಕ್ಕೆ ನೀವು ಮಾಹಿತಿ ಕೊಟ್ಟಾಗ ನಾವು ಅದನ್ನು ತಿದ್ದದೇ ಹೋದರೆ ಆಗ ಅದು ನಮ್ಮ ತಪ್ಪು ಆಗುತ್ತದೆ. ಆಗ ತಾವು ಟೀಕೆ ಮಾಡತಕ್ಕಂಥದ್ದು ಸರಿ. ನೀವು ತಿಳಿಸದೇ ಹೋದರೆ ಅಷ್ಟು ದೊಡ್ಡ ಪ್ರಮಾಣದಲ್ಲಿ ಕೆಲಸ ಆಗುತ್ತಿರುವಾಗ ನಮಗೆ ಅದು ಗೊತ್ತಾಗುವುದಾದರೂ ಹೇಗೆ? ಅದ್ದರಿಂದ ನೀವು ತಿಳಿಸಿ, ನಾವು ಅದನ್ನು ಸರಿಪಡಿಸುವುದಕ್ಕೆ ಏನು ಕೆಲಸ ಮಾಡಬೇಕೋ ಅದನ್ನು ಮಾಡೋಣ.

ಇನ್ನು ಲಾ ಅಂಡ್ ಆರ್ಡರ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಪೊಜಿಷನ್ ಕೆಟ್ಟುಹೋಗಿದೆ, ಅದು ರಾಜ್ಯದಲ್ಲಿ ಉಳಿದಿಲ್ಲ ಎನ್ನುವ ರೀತಿಯಲ್ಲಿ ಕೆಲವರು ಭಾಷಣ ಮಾಡಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಈ ಲಾ ಅಂಡ್ ಆರ್ಡರ್ ಪೊಜಿಷನ್ ಬಗ್ಗೆ ಮಾನ್ಯ ಸದಸ್ಯರು ಚರ್ಚೆ ಮಾಡಬೇಕೆಂದು ಹೇಳಿ ಒಂದು ದಿವಸವೆಲ್ಲಾ ಚರ್ಚೆ ಮಾಡಿದರೂ ಕೂಡ ಲಾ ಅಂಡ್ ಆರ್ಡರ್ ಪೊಜಿಷನ್ ಎಲ್ಲಿ ಕೆಟ್ಟುಹೋಗಿದೆ ಎನ್ನುವ ಬಗ್ಗೆ ಯಾರೂ ಮಾತನಾಡಲಿಲ್ಲ. ಅದು ಎಲ್ಲಿ ಕೆಟ್ಟುಹೋಗಿದೆ ಎಂಬುದನ್ನು ಹೇಳದೆ ಪೋಲೀಸರನ್ನು ವಿಪ್ಪಿಂಗ್ ಬಾಯ್ಸ್ ಎಂದು ತಿಳಿದುಕೊಂಡು ಅವರಿಗೆ ಮಾತಿನ ಚಾಟಿ ಯಿಂದ ಹೊಡೆಯುತ್ತಾ ಇದ್ದರೆ ಅದರಲ್ಲಿ ಏನೂ ಅರ್ಥವಿಲ್ಲಾ ಅದರಿಂದ ಖಂಡಿತ ಯಾವ ಸಾಧನೆಯೂ ಆಗುವುದಿಲ್ಲ. ನಮ್ಮ ರಾಜ್ಯದ ಪರಿಸ್ಥಿತಿಯನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಬಹಳ ದೊಡ್ಡ ಪ್ರಮಾಣದಲ್ಲಿ ಪರಿಸ್ಥಿತಿ ಉತ್ತಮವಾಗಿದೆ. ಇಲ್ಲಿ ಏನೂ ಇಲ್ಲ, ಒಂದೊಂದು ಕಡೆ ಅಂತಿಂತಹ ಇನ್ ಸ್ಟೆನ್ಸಸ್ ನಡೆಯುತ್ತದೆ. ಹಾಗೆ ನಡೆದದ್ದನ್ನೇ ಇನ್‌ಸ್ಟಾನ್ಸ್ ಆಗಿ ತೆಗೆದುಕೊಂಡು ರಾಜ್ಯದಲ್ಲೆಲ್ಲಾ ಲಾ ಅಂಡ್ ಆರ್ಡರ್ ಪೊಜಿಷನ್ ಕೆಟ್ಟುಹೋಗಿದೆ ಎಂದು ಹೇಳತಕ್ಕಂಥದ್ದು ಉಚಿತವಲ್ಲ. ಆದ್ದರಿಂದ ನಾನು ಅದರ ಬಗ್ಗೆ ಹೆಚ್ಚು ಕಾಲವನ್ನು ತೆಗೆದುಕೊಂಡು ಹೇಳಬೇಕಾದ ಅಗತ್ಯವೂ ಇಲ್ಲ. ಅದನ್ನು ಅಲ್ಲಿಗೇ ಬಿಡುತ್ತೇನೆ.

ಇನ್ನು ನೋ ಕಾನ್ಫಿಡೆನ್ಸ್ ಮೋಷನ್ ಅನ್ನು ಇಲ್ಲಿ ತಂದಂಥ ವಿಷಯದ ಬಗ್ಗೆ ಹೇಳಬೇಕು ಎಂದರೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಗುಂಡೂರಾವ್‌ರವರು ಅದನ್ನು ಇಲ್ಲಿ ತಂದಿದ್ದಾರೆ. ಅವರೇ ಹೇಳಿದ ಹಾಗೆ ನಮಗೆ ಇರತಕ್ಕಂಥ ಲೋಪದೋಷಗಳನ್ನು ಸರಿ ಮಾಡಿ ಎಂದು ಹೇಳುವುದಕ್ಕಾಗಿ ಅದನ್ನು ಇಲ್ಲಿ ತಂದರು ಎಂದು ನಾನು ಭಾವಿಸುತ್ತೇನೆ. ಅದು ಕೆಟ್ಟುಹೋಗಿದೆ, ಇದು ಕೆಟ್ಟುಹೋಗಿದೆ, ಅದನ್ನೆಲ್ಲಾ ಸರಿ ಮಾಡಬೇಕು ಎಂದು ಅವರು ಹೇಳಿದರು. ಆದರೆ ಈ ಸರ್ಕಾರವನ್ನು ಉರುಳಿಸುತ್ತೇವೆ ಎಂದು ಇದನ್ನು ತಂದದ್ದಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ ಅದಕ್ಕಿಂತ ನಾನು ಹೆಚ್ಚಿಗೆ ಹೇಳಬೇಕಾದ ವಿಚಾರ ಇಲ್ಲ. ಅವರು ಹೇಳಿದ್ದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಅವರು ಇಲ್ಲಿ ತಂದಿರತಕ್ಕಂಥ ನೋ ಕಾನ್‌ಫಿಡೆನ್ಸ್ ಮೋಷನ್ ಅನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಉತ್ತರವನ್ನು ಹೇಳುವುದಕ್ಕೆ ಪ್ರಾರಂಭ ಮಾಡಿದಾಗ ನಾನು ಇರಲಿಲ್ಲ......

ಶ್ರೀ ಜಿ ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಅವರು ಅರಣ್ಯ ಇಲಾಖೆಯ ಬಗ್ಗೆ ಒಂದು ವಿಚಾರ ವನ್ನು ಹೇಳಿದ್ದರು. ಅದಕ್ಕೆ ನಾನು ಈಗಲೇ ಉತ್ತರವನ್ನು ಹೇಳಿಬಿಡುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ತಾವು ಈಗ ಅದನ್ನು ಹೇಳುವುದು ಬೇಡ. ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಗೆ ತಡವಾಗಿ ಬಂದೆ. ನಾನು ಬರುವುದಕ್ಕೆ ಮೊದಲು ಮಾನ್ಯ ಮುಖ್ಯಮಂತ್ರಿಯವರು ನನ್ನ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಿದರು ಎಂದು ಗೊತ್ತಾಯಿತು. ಈ ಶಾಸನ ಸಭೆ ಯಲ್ಲಿ ನಾನು ಜೊತೆಗಿಯಾಗಿ ಕುಳಿತುಕೊಂಡಿದ್ದೇನೆಂತಲೂ ನಾನು ಅನಂತರ ಕಾಂಗ್ರೆಸ್ಸಿಗೆ ಸೇರಿದೆನೆಂತಲೂ ಅನಂತರ ಅವರು ನನ್ನನ್ನು ಸ್ಟೇಟ್ ಮಿನಿಸ್ಟರ್ ಮಾಡಿದರೆಂತಲೂ, ಅನಂತರ ಅವರು ನನ್ನನ್ನು

---

† Indicates that remarks or speeches have not been revised by the member concerned.

ಪಿ.ಡಬ್ಲ್ಯು.ಡಿ ಮಿನಿಸ್ಟರ್ ಆಗಿ ಮಾಡಿದರೆಂತಲೂ, ಪಿ.ಡಬ್ಲ್ಯು ಡಿ ಇಲಾಖೆಯೇ ಬೇಕು ಎಂದು ನಾನು ಅವರಿಗೆ ಕೇಳಿದೆನೆಂತಲೂ—ಈ ರೀತಿಯ ಮಾತುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಎಂಬುದಾಗಿ ನಾನು ಇಲ್ಲಿಗೆ ಬಂದಮೇಲೆ ವಿಷಯ ತಿಳಿದುಕೊಂಡೆ. ಈ ಬಗ್ಗೆ ರಿಕಾರ್ಡ್ ಏನೇನಿದೆ ಎಲ್ಲ ವನ್ನೂ ಸಂಪೂರ್ಣವಾಗಿ ನನಗೆ ಓದುವುದಕ್ಕೆ ಆಗಲಿಲ್ಲ. ಆ ವಿಷಯ ನಮ್ಮ ಸ್ನೇಹಿತರಿಂದ ಗೊತ್ತಾಯಿತು. ಮಾನ್ಯ ಮುಖ್ಯಮಂತ್ರಿಯವರು ಹೊರಗಡೆ ಸಹ ನನ್ನ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ ಅದಕ್ಕೆ ತಕ್ಕಹಾಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ ಎಂಬ ನಂಬಿಕೆ ಇದೆ. ಅವರು ಇನ್ನೂ ಮುಂದುವರಿದು ಹೋಗಿ ಅವರ ಪಕ್ಷದ ಯುವಕ ಕಾಂಗ್ರೆಸ್ ಸಭೆಯಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಬಹಳ ಹಗುರವಾಗಿ ತೂಕ ತಪ್ಪಿರತಕ್ಕಂಥ ಮಾತುಗಳನ್ನು ಆಡಿದ್ದಾರೆ. ಅದಕ್ಕೂ ನಾನು ಉತ್ತರ ಕೊಟ್ಟಿದ್ದೇನೆ. ಈ ಸಭೆ ಯಲ್ಲಿ ಅವರು ಹೇಳಿರತಕ್ಕಂಥ ಮಾತುಗಳಿಗೆ ನಾನು ಯಾವುದೇ ಉತ್ತರವನ್ನು ಕೊಡುವುದಕ್ಕೆ ಹೋಗುವು ದಿಲ್ಲ ಆದರೆ ತಾವು ಏನು ಹೇಳಿದ್ದೀರಿ ಆ ವಿಷಯಕ್ಕೆ ಮಾತ್ರ ಸೀಮಿತಗೊಳ್ಳತಕ್ಕಂಥ ವಿಷಯವನ್ನು ನಾನು ಹೇಳುತ್ತಿದ್ದೇನೆ ನಾನು ಈ ಸದನಕ್ಕೆ ಏಕಾಂಗಿಯಾಗಿ ಚುನಾವಣೆಯಲ್ಲಿ ಗೆದ್ದು ಬರಲಿಲ್ಲ. ತಾವೂ ಕೂಡ ಅದನ್ನು ಹೇಳಲಿಲ್ಲ ಎಂದು ಹೇಳಬಹುದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಇಪತ್ತು ಒಬ್ಬರು ಇದ್ದವರು ೧೦ ಜನ ಆಗುತ್ತಾರೆ ೧೦ ಜನರು ಇದ್ದವರು ಒಬ್ಬರೇ ಆಗಿಬಿಡುತ್ತಾರೆ. ಕೆಲವೊಮ್ಮೆ ಜೀರೋ ಕೂಡ ಆಗುತ್ತದೆ ಆದ್ದರಿಂದ 'ನಾನು ಎಲ್ಲೋ ಏಕಾಂಗಿಯಾಗಿ ಇದ್ದೆ. ಆಮೇಲೆ ಅವರಿಂದ ಮಂತ್ರಿಯಾದೆ ಎನ್ನುವ ರೀತಿಯಲ್ಲಿ ಅವರು ಮಾತನಾಡಿದ್ದಾರೆ. ಏನೋ ಅವರ ಜೇಬಿನಿಂದ ತೆಗೆದುಕೊಂಡು ಬಂದು ಕೊಟ್ಟರು ಎನ್ನುವ ಹಾಗೆ ಮಾತನಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಅವರು ಈ ಸದನದಲ್ಲಿ ನನ್ನ ವೈಯುಕ್ತಿಕವಾದ ವಿಷಯದ ಭಗ್ಗೆ ಮಾತನಾಡಿದ್ದಾರೆ. ಅವರು ತಿಳಿದುಕೊಳ್ಳಬೇಕು. ನಾನು ಈ ಸದನದ ಸದಸ್ಯನಾಗಿ ೩ನೇ ಸಾರಿ ಆರಿಸಿ ಬರುತ್ತಿದ್ದೇನೆ. ಆದ್ದರಿಂದ ಅವರು ಅಷ್ಟು ಹಗುರವಾಗಿ ನನ್ನ ಬಗ್ಗೆ ಮಾತನಾಡಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿ ಯವರು ಹೊರಗಡೆ ಕೊಟ್ಟಿರತಕ್ಕಂಥ ಹೇಳಿಕೆಯನ್ನು ವಿಚಾರ ಮಾಡಿ ನೋಡಿದರೆ ಅವರಿಗೆ ಯಾವ ರೀತಿಯ ಪ್ರಶ್ನೆಯನ್ನು ಕೇಳಬೇಕು ಎಂದರೆ, ೧೯೭೮ನೇ ಇಸವಿಯ ಚುನಾವಣೆಯಲ್ಲಿ ಯಾರು ಹೆಚ್ಚು ಮತವನ್ನು ಪಡೆದರು ಎಂಬುದನ್ನು ತೂಕ ಮಾಡೋಣ, ನಿಮಗೆ ಎಷ್ಟು, ೧೦ ಸಾವಿರ ಚಿಲ್ಲರೆ ಮತಗಳು ಅಲ್ಲವೇ ಬಂದಿದ್ದು?.. ಅದು ೧೧ ಸಾವಿರದ ಮೇಲೆ ಹೋಗುವುದಿಲ್ಲ.

(ಶ್ರೀ ಹೆಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಕೆ. ಬಿ, ಶಿವಯ್ಯ.—ಅವರು ಯುನಾನಿಮಸ್ ಆಗಿ ಒಂದೇ ಸಾರಿ ಬಂದರು,

ವೈಸ್-ಚೇರ್‌ಮನ್.—ಮಾನ್ಯ ಬಂಗಾರಪ್ಪನವರೇ, ಮಾನ್ಯ ಮುಖ್ಯಮಂತ್ರಿಯವರು ಮಾಡಿರ ತಕ್ಕಂಥ ಭಾಷಣದಲ್ಲಿ ಮತ್ತು ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಸಂಶಯಾಸ್ಪದವಾದ ವಿಚಾರಗಳೇ ನಾದರೂ ಇದ್ದರೆ, ಅದರ ಬಗ್ಗೆ ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿ ಹೇಳಬೇಕೇ ಹೊರತು ನಿಮ್ಮ ಹೆಗ್ಗಳಿಕೆಯ ಮಾತುಗಳನ್ನು ಇಲ್ಲಿ ಹೇಳುತ್ತಾ ಹೊರಟರೆ ಅದು ಭಾಷಣವಾಗುತ್ತದೆ. ದಯವಿಟ್ಟು ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿ ಹೇಳಿ,

11-30 ಎ.ಎಂ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ, ನನ್ನ ವಿಷಯ ತಮಗೆ ಗೊತ್ತಿದೆ. ನನಗೆ ಹೆಗ್ಗಳಿಕೆ ಇಲ್ಲ. ನಾನು ಹೆಗ್ಗಳಿಕೆಯಿಂದ ಹೋಗಿದ್ದರೆ ಲೋಕೋಪಯೋಗಿ ಸಚಿವ ಸ್ಥಾನವನ್ನು ಬಿಟ್ಟು ಬರುತ್ತಿರಲಿಲ್ಲ.

ಶ್ರೀ ಕೆ. ಲಕ್ಷ್ಮಣ್.—ಬಿಡಲಿಲ್ಲ; ವಜಾ ಮಾಡಿದರು.

ಶ್ರೀ ಎಸ್. ಬಂಗಾರಪ್ಪ.—ವಜಾ ಏತಕ್ಕೆ ಮಾಡಲಾಯಿತೆನ್ನುವುದು ಬೇರೆ ವಿಚಾರ. ಅದು ಮಾನ್ಯ ಲಕ್ಷ್ಮಣ್ ಅವರಿಗೆ ಅರ್ಥವಾಗಲಾರದು. ಮುಂದಿನ ಮಂತ್ರಿಗಳ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ ಇಲ್ಲವೋ ಎನ್ನುವುದನ್ನು ಸ್ವಲ್ಪ ಖಾತರಿಪಡಿಸಿಕೊಳ್ಳಿ !

ಶ್ರೀ ಕೆ. ಲಕ್ಷ್ಮಣ್.—ಶ್ರೀ ಟಿ.ವಿ. ವೆಂಕಟಸ್ವಾಮಿ ಮತ್ತು ನೀವು ಮಂತ್ರಿಗಿರಿ ಬೇಕೆಂದು ಸಾಲು ನಿಂತಿರಲಿಲ್ಲವೇ? ನಾನು ಮಂತ್ರಿಯಾಗಬೇಕೆಂದು ಬಯಸಿದ್ದರೆ ಮೂರು ವರ್ಷದ ಹಿಂದೆಯೇ ಆಗುತ್ತಿದ್ದೆ!

ಶ್ರೀ ಮಾಣಿಕರಾವ್ ಪಾಟೀಲ್.—ಬಾಲಬ್ರೂಯಿಯಲ್ಲಿ ಮಂತ್ರಿಗಿರಿಗಾಗಿ ನೀವು ಸಾಲು ನಿಂತಿದ್ದನ್ನು ನಾನು ಕಂಡಿದ್ದೇನೆ !

ಚೇರ್ಮನ್.—ನಾವಿಂದು ಅಧಿವೇಶನದ ಕೊನೆಯ ದಿವಸದಲ್ಲಿದ್ದೇವೆ. ಅನಾವಶ್ಯಕ ಮಾತುಗಳಿಂದ ವಿರಸ ಸನ್ನಿವೇಶ ಉದ್ಭವವಾಗುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಬಹಳ ಸಂತೋಷ. ಆದರೆ, ಮಾನ್ಯ ಮುಖ್ಯ ಮಂತ್ರಿಗಳು ಅನಾವಶ್ಯಕವಾಗಿ ಮಾತನಾಡುತ್ತಿದ್ದಾಗ, ತಾವು ಏತಕ್ಕೆ ಅವರಿಗೆ ಅವಕಾಶ ಕೊಟ್ಟಿರಿ ? ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದು ದಾಖಲೆಯಾಗಿರುವುದರಿಂದ ಈ ಮಾತನ್ನು ನಾನು ಹೇಳಬೇಕಾಗಿದೆ. ಒಂದು ವೇಳೆ ಯಾರಾದರೂ ತಮ್ಮ ವಿರುದ್ಧ ಮಾತನಾಡಿದ್ದರೆ ಅಥವಾ ಒಬ್ಬ ಸದಸ್ಯರು ಮತ್ತೊಬ್ಬ ಸದಸ್ಯರ ವಿರುದ್ಧ ಮಾತನಾಡಿದ್ದರೆ ಅದಕ್ಕೆ ಉತ್ತರ ಕೊಡಬೇಕೇ ಬೇಡವೆ ?

ಚೇರ್ಮನ್.—ಅವರೇನೂ ನಿಮ್ಮ ಮೇಲೆ ವೈಯಕ್ತಿಕ ಅಪಾದನೆ ಮಾಡಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನನ್ನ ಹೆಸರನ್ನು ಸಭೆಗೆ ಎಳೆದಿದ್ದಾರೆ.

ಶ್ರೀ ಮಾಣಿಕರಾವ್ ಪಾಟೀಲ್.—ಒಂದು ಪಕ್ಷದ ಅಧ್ಯಕ್ಷರ ಬಗ್ಗೆ ಲಘುವಾಗಿ ಮಾತನಾಡಬಹುದೆ?

ಚೇರ್ಮನ್.—ರಾಜಕೀಯ ಫಲಿತಾಂಶಗಳನ್ನು ವಿವರಿಸುತ್ತಾ ಯಾವ ಯಾವ ಹಂತದಲ್ಲಿ ಏನೇನಾಯಿತು; ಯಾರ್ಯಾರು ಹೇಗೆ ಹೇಗೆ ನಡೆದುಕೊಂಡರು ಎನ್ನುವ ಸಂಬಂಧದಲ್ಲಿ ಅದೆಲ್ಲಾ ಹೇಳಿರುವುದೆ ಹೊರತು ವೈಯಕ್ತಿಕವಾಗಿ ನಿಮ್ಮನ್ನೇ ಪರಿಗಣಿಸಿ ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದೇ ಸಂಬಂಧದಲ್ಲಿ ನಾನೂ ಸಹ ಮಾತನಾಡುತ್ತಿರುವುದು. ನಮಗೂ ಆ ಶಕ್ತಿ ಇದೆ. ನಾನು ಇಲ್ಲಿ "ಏಕಾಂಗಿಯಾಗಿ ಕುಳಿತುಕೊಂಡಿದ್ದೆ" ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಹೇಳುತ್ತೇನೆ ೧೯೬೭–೧೯೭೨ರ ಚುನಾವಣೆಯಲ್ಲಿ ಸಮಾಜವಾದ ಪಕ್ಷದ ವತಿಯಿಂದ ಗೆದ್ದು ಬಂದು ನಾನು ಇಲ್ಲಿ ಕುಳಿತಿದ್ದೆ. ೧೯೭೨ರ ಚುನಾವಣೆಯಲ್ಲಿ ಮಾತ್ರ ನಾನು ಕಾಂಗ್ರೆಸ್ ಪಕ್ಷದಿಂದ ಗೆದ್ದು ಬಂದು ಇಲ್ಲಿ ಕೂತಿದ್ದೇನೆ. ನನ್ನ ಏಕಾಂಗಿತನವನ್ನು ಪ್ರಸ್ತಾಪ ಮಾಡುವಾಗ ತಾವು ೧೯೭೮ನೇ ಇಸವಿಯ ಚುನಾವಣೆಗೆ ಮುಂಚಿನ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದೀರೆಂದು ನಾನು ಭಾವಿಸುತ್ತೇನೆ. ಅಂದು ನಾನಿಲ್ಲಿ ಏಕಾಂಗಿಯಾಗಿ ಕುಳಿತುಕೊಂಡು ಏನೂ ಉಪಯೋಗವಿಲ್ಲದವನಾಗಿದ್ದಲ್ಲಿ, ನೀವು ಏತಕ್ಕೆ ನನ್ನನ್ನು ಮಂತ್ರಿಯನ್ನಾಗಿ ಮಾಡಿದಿರಿ? ಹೋಗಲಿ, ರಾಜ್ಯ ಸಚಿವನಾಗಿಯೂ ನಾನು ಏನೂ ಉಪಯೋಗವಿಲ್ಲದವನೆಂದು ತಾವು ಭಾವಿಸಿದ್ದರೆ ಮತ್ತೆ ಏತಕ್ಕೆ ನನ್ನನ್ನು ಸಚಿವ ಸಂಪುಟ ದರ್ಜೆಗೆ ಏರಿಸಿದಿರಿ? ತಾವು ಯಾರೊಬ್ಬರನ್ನೂ, ಒತ್ತಡ ತಂದ ಮಾತ್ರಕ್ಕೆ ಸಚಿವರನ್ನಾಗಿ ಮಾಡಬೇಕೆಂಬ ಹಕ್ಕೂ ಇಲ್ಲ, ಅಧಿಕಾರವೂ ಇಲ್ಲ. ಆದುದರಿಂದ, ರಾಜ್ಯ ಸಚಿವನಾಗಿ ಆರು ತಿಂಗಳಲ್ಲಿ ನಾನು ಮಾಡಿರತಕ್ಕ ಕೆಲಸ ತಮಗೆ ಸುಮಾರಾಗಿ ಮನವರಿಕೆಯಾಗಿರಬೇಕು ಅಥವಾ ಒಪ್ಪಿಗೆಯಾಗಿರಬೇಕು. ಅದಕ್ಕಾಗಿಯೇ ತಾವು ನನ್ನನ್ನು ಸಚಿವ ಸಂಪುಟ ದರ್ಜೆಗೆ ಏರಿಸಿದಿರೆಂದು ನನ್ನ ಭಾವನೆ. ನಾನು ಎಂದಾದರೂ ಲೋಕೋಪಯೋಗಿ ಇಲಾಖೆಯನ್ನೇ ನನಗೆ ಕೊಡಿ ಎಂದು ತಮ್ಮಲ್ಲಿ ಕೇಳಿದ್ದರೆ, ತಮ್ಮ ಹೃದಯ ಮುಟ್ಟಿ ಈ ಸದನಕ್ಕೆ ಅದನ್ನು ತಿಳಿಸಿ. ಅಸತ್ಯವಾಗಿರತಕ್ಕ ವಿಷಯಗಳನ್ನು ಪ್ರಸ್ತಾಪ ಮಾಡುವ ಮಟ್ಟಕ್ಕೆ ನೀವು ಏತಕ್ಕೆ ಕೈ ಹಾಕುತ್ತಿದ್ದಿರೋ ಅದು ನನಗೆ ಗೊತ್ತಾಗುತ್ತಿಲ್ಲ. ಈ ಸಭೆಯ ಮಾನ್ಯ ಸದಸ್ಯರೊಬ್ಬರ ಮೇಲೆ, ಅದರಲ್ಲೂ ನಿಮ್ಮೊಡನೆ ಸಚಿವ ಸಂಪುಟದಲ್ಲಿದ್ದವರ ಮೇಲೆ ಅಲ್ಪವಾದ ಮಾತುಗಳನ್ನು ಹೇಳುವುದು ಸರಿಯಲ್ಲ. ಈ ಸಭೆಯ ಘನತೆ ಗಾಂಭೀರ್ಯಗಳನ್ನು ಮತ್ತು ಸದಸ್ಯರ ಅಂತಸ್ತುಗಳನ್ನು ಕಾಯಬೇಕೆಂದು ಹೇಳುವವರಲ್ಲಿ ಮುಂದೆ ಇರಬೇಕಾದ ನೀವು, ಈ ರೀತಿಯ ಅಸತ್ಯ ಸಂಗತಿಗಳನ್ನು ಸದನದ ಮುಂದೆ ಪ್ರಸ್ತಾಪ ಮಾಡುವುದು ಸರಿಯಲ್ಲ. ಅಲ್ಲದೆ, ನೀವು ಹೇಳಿದರೆ ನಾನೂ ಸಹ ನಿಮ್ಮ ಬಗ್ಗೆ ಹೇಳಬೇಕಾಗುತ್ತದೆ. ನೀವು "ಪನ್ನುಮಟು ಪೈಪ್ ಪಾಲಿಟಿಕ್ಸ್"ಗೆ ಹೇಗೆ ಬಂದಿರಿ ಎನ್ನುವುದನ್ನೆಲ್ಲ ನಾನು ಬಿಚ್ಚಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೀಗೆಲ್ಲಾ ಮಾತನಾಡಬಹುದೆ?

ಶ್ರೀ ಎಸ್. ಬಂಗಾರಪ್ಪ.—ನೀವು ಏತಕ್ಕೆ ನನ್ನ ವಿಷಯ ಇಲ್ಲಿ ಎತ್ತಿದ್ದು?

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮಾನ್ಯ ಬಂಗಾರಪ್ಪನವರೇನು ಚುನಾವಣೆಯಲ್ಲಿ ಆರಿಸಿ ಬಂದಿಲ್ಲವೇನು ?

ಶ್ರೀ ಎಸ್. ಬಂಗಾರಪ್ಪ.—ಇಲ್ಲೆಲ್ಲ ಅದನ್ನು ಹೇಳಬಾರದೆಂದು ಅಲ್ಲಿಗೆ ನಿಲ್ಲಿಸಿದ್ದೇನೆ. ಆದರೆ, ನೀವು ಅವಕಾಶ ಮಾಡಿಕೊಟ್ಟರೆ ನಾನು ನೀವು ಹೇಗೆ ''ಪನಮಾ ಟು ಪೈಪ್ ಪಾಲಿಟಿಕ್ಸ್''ಗೆ ಬಂದಿರಿ ಎನ್ನುವುದನ್ನೆಲ್ಲ ಬಿಚ್ಚುತ್ತೇನೆ.

† ಶ್ರೀ ಆರ್. ಗುಂಡೂರಾವ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಅನೇಕ ವಿಚಾರಗಳನ್ನು ರಾಜಕೀಯವಾಗಿ ಪ್ರಸ್ತಾಪ ಮಾಡಿದ್ದಾರೆ. ಅವುಗಳಲ್ಲಿ ಕೆಲವಕ್ಕೆ ನಾನು ಉತ್ತರ ಕೊಡ ಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಬೆಳಿಗ್ಗೆ ಒಂಭತ್ತು ಗಂಟೆಯಿಂದ ಹನ್ನೊಂದು ಗಂಟೆಯ ವರೆಗೆ ಪೂರ್ತ ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಮಾತನಾಡಿದರು. ಕೇವಲ ಅರ್ಧ ಗಂಟೆಗಳ ಕಾಲ ಮಾತ್ರ ಸರ್ಕಾರಿ ಇಲಾಖೆಗಳ ಲೋಪದೋಷಗಳ ಬಗ್ಗೆ ಮತ್ತು ಅವುಗಳ ದುರ್ವ್ಯವಹಾರಗಳ ಬಗ್ಗೆ ಮಾತನಾಡಿದರು. ವೈಯಕ್ತಿಕವಾಗಿ ನನಗೂ ಮತ್ತು ಅವರಿಗೂ ಯಾವುದೇ ಭಿನ್ನಾಭಿಪ್ರಾಯವಿಲ್ಲ ವೆಂದು ಅವರು ಮೊದಲೇ ಒಪ್ಪಿಕೊಂಡಿದ್ದಾರೆ. ಆದುದರಿಂದ, ಅವರು ನನ್ನ ಬಗ್ಗೆ ಲಘುವಾಗಿ ಮಾತನಾ ಡುವುದಿಲ್ಲವೆಂತಲೂ ಹೇಳಿದ್ದಾರೆ; ಬಹಳ ಸಂತೋಷ. ನಾನೂ ಕೂಡ ವೈಯಕ್ತಿಕವಾಗಿ ಇಲ್ಲಿ ಏನನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ರಾಜಕೀಯವಾಗಿ ನಾನು ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಲೇಬೇಕಾಗಿದೆ. ನನಗೆ ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ನಂಬಿಕೆ ಇತ್ತು—ಅವರು ಯಾವಾಗಲೂ ಸತ್ಯವನ್ನೇ ಹೇಳುತ್ತಾರೆ ಎಂದರು. ಅವರು ಮಾತನಾಡುತ್ತಾ, ''ನಾನು ಸಮಯಕ್ಕೆ ತಕ್ಕಂತೆ ಬದಲಾವಣೆ ಮಾಡುವವನಲ್ಲ. ಅದನ್ನು ಬೇಕಾದರೆ ನೀವೇ ಇಟ್ಟುಕೊಳ್ಳಿ, ನಿಮ್ಮ ಆಲೋಚನಾ ಮತಿ ಅಷ್ಟರಲ್ಲೇ ಇದೆ, ನೀವು ಓದಿರುವುದಕ್ಕಿಂತ ಹೆಚ್ಚು ಓದಿ ನಾವು ತಿಳಿಬುಕೊಂಡಿದ್ದೇವೆ, ನಾನು ಆ ರೀತಿ ಹೋಗುವುದಕ್ಕಾಗುವುದಿಲ್ಲ, ನೀವು ತೋರಿಸುವ ಹಾಗೆ ನಾನು ಸ್ವಾಮಿ ನಿಷ್ಠೆ ತೋರಿಸುವುದಕ್ಕಾಗು ವುದಿಲ್ಲ ಎನ್ನುವುದನ್ನೇ ಸುಮಾರು ಇಪ್ಪತ್ತು ನಿಮಿಷಗಳ ಕಾಲ ಹೇಳಿದರು. ಅವರು ಹೇಳುತ್ತಿದ್ದುದನ್ನು ನಾನು ಒಂದು ಶಬ್ದ ಬಿಡದೆ ಕೇಳಿದ್ದೇನೆ. ಅವರು ಮಾತನಾಡುತ್ತಿರುವಾಗ ಮಧ್ಯೆ ನಾನು ಯಾವ ವಿಚಾರವನ್ನೂ ಎತ್ತಲಿಲ್ಲ. ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಬಿಟ್ಟಿದ್ದೆನು. ೧೯೬೯ನೇ ಇಸವಿಯಲ್ಲಿ ಅವರನ್ನು ಪ್ರದೇಶ ಕಾಂಗ್ರೆಸ್‌ನ ಕನ್ವೀನರ್ ಆಗಿ ಮಾಡಲು ಕಾರಣವೇನೆಂದು ತಿಳಿಸಿದರು. ಅವರು ಅದನ್ನು ಹೀಗೆ ಹೇಳುತ್ತಾರೆಂದು ನಾನು ತಿಳಿದಿರಲಿಲ್ಲ. ಆ ವಿಚಾರ ನನಗೆ ಚನ್ನಾಗಿ ಗೊತ್ತಿದೆ. ಈ ಪದವಿಯನ್ನು ಪಡೆದುಕೊಳ್ಳಲು ಅಂದು ದೆಹಲಿಯಲ್ಲಿ ಎಷ್ಟು ಜನ ಪ್ರಯತ್ನ ಪಡುತ್ತಿ ದ್ದರೆನ್ನುವುದೂ ನನಗೆ ಗೊತ್ತಿದೆ. ಅದಕ್ಕಾಗಿ ಯುವಜನ ಕಾಂಗ್ರೆಸ್ಸಿನವರು ಸತ್ಯಾಗ್ರಹ ಮಾಡಿದ್ದರು. ಅದರಲ್ಲಿ ಎಂ.ವಿ. ಕೃಷ್ಣಪ್ಪನವರೂ, ಕೊಲ್ಲೂರು ಮಲ್ಲಪ್ಪನವರು ಮುಂತಾಗಿ ಅನೇಕ ಲೋಕಸಭಾ ಸದಸ್ಯರು ಇದ್ದರು. ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಯಬೇಕು. ನಿಮ್ಮದೇ ಆದ ತತ್ವದ ಮೇಲೆ ನಂಬಿಕೆ ಇದ್ದರೆ ''ಇರಿ'', ಸಂತೋಷ ಎಂದು ಅವರು ನಮಗೆ ಹೇಳಿದರು.

ಶ್ರೀಮಾನ್ ದೇವರಾಜ ಅರಸ್‌ರವರು ಈ ಮಾತನ್ನು ಹೇಳಬಾರದಾಗಿತ್ತು. ಇದು ಕರ್ನಾಟಕದ ಜನತೆಗೆ, ರಾಷ್ಟ್ರದ ಜನತೆಗೆ ಗೊತ್ತು. ಶಾಸನ ಸಭೆಯಲ್ಲಿ ನಮಗೆ ಏನು ಬೇಕಾದರೂ ಹೇಳುವುದಕ್ಕೆ ಹಕ್ಕಿದೆ; ಎಂದು ಹೇಳುವುದು ಸರಿಯಲ್ಲ. ಶ್ರೀಮಾನ್ ದೇವರಾಜ ಅರಸ್ ಅವರನ್ನು ೧೯೭೧ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಕನ್ವೀನರ್ ಆಗಿ ಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರ ವಿರುದ ಭಾವುಟ ಹಿಡಿದುಕೊಂಡು ಹೋಗತಕ್ಕಂಥ ಗಂಡು ಕರ್ನಾಟಕದಲ್ಲಿ ಇಲ್ಲಿಲ್ಲ ಅಂತ ಹೇಳಿದ್ದಾರೆ. ಆಗಿನ ಕಾಲದಲ್ಲಿಯೂ ಶ್ರೀಮತಿ ಗಾಂಧಿಯವರ ಚಸ್ಮಾ ಇದ್ದುದರಿಂದಲೇ ನಿಮ್ಮನ್ನು ಶ್ರೀಮತಿ ಇಂದಿರಾ ಗಾಂಧಿಯವರು ಕನ್ವೀನರ್ ಮಾಡಿದ್ದರು. ಇದನ್ನು ನೀವು ಮರೆಯಬಾರದು. ೧೯೭೧ರಲ್ಲಿ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಇದೇ ರೀತಿ ೧೩೦ ಜನ ಇಟ್ಟುಕೊಂಡು ಕೂತಿದ್ದರು. ಮುಖ್ಯ ಮಂತ್ರಿಗಳಾಗಿ ಅಧಿಕಾರದಲ್ಲಿದ್ದುಕೊಂಡು ಬಲ ತೋರಿಸುವುದು ದೊಡ್ಡದೇನಲ್ಲ. ಮುಖ್ಯಮಂತ್ರಿಗಳಾಗಿ ವೀರೇಂದ್ರ ಪಾಟೀಲರು ಇದ್ದಾಗ, ಮೂರು ಬೈ ಎಲೆಕ್ಷನ್‌ಗಳು ನಡೆದು ಶ್ರೀಮತಿ ಇಂದಿರಾ ಗಾಂಧಿಯವರ ಪಕ್ಷವೇ ಗೆದ್ದಿತು. ಅಂದು ವೀರೇಂದ್ರಪಾಟೀಲರು ಭಾಷಣ ಮಾಡುತ್ತಾ ಹೇಳಿದರು; ನನ್ನ ಸರ್ಕಾರ ಬಂಡೆಯಂತಹ ಸರ್ಕಾರ; ನನ್ನ ಸರ್ಕಾರವನ್ನು ಉರುಳಿಸಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲವೆಂದು. ಅಂದು ನೀವು ಈ ಕಡೆ ಕೂತಿದ್ದಾಗ ಮೂರು ಬೈ ಎಲೆಕ್ಷನ್‌ಲ್ಲೂ ಕಾಂಗ್ರೆಸ್ (ಆರ್) ಗೆದ್ದ ಮೇಲೆ ಮೇಜು

ತಟ್ಟಿ ಸ್ವಾಗತ ಮಾಡಿದ್ದೀರಿ. ಈಗ ನೀವು ಸರ್ಕಾರದ ಕಾರ್ಯಕ್ರಮದ ಮೇಲೆ ನಾವು ಬಂದಿದ್ದೇವೆಂದು ಹೇಳುತ್ತಿದ್ದೀರಿ. ಬರುವ ಚುನಾವಣೆಯಲ್ಲಿ ಗೆದ್ದು ಬನ್ನಿ. ಜನ ಯಾರ ಕಡೆ ಇದ್ದಾರೆಂಬುದು ತಿಳಿಯುತ್ತೆ. ನಾನು ಯಾರನ್ನು ನಮ್ಮ ಕಡೆ ಬನ್ನಿ ಅಂತ ಕರೆದಿಲ್ಲ; ಕರೆಯುವುದಕ್ಕೆ ಹೋಗಿಲ್ಲ. ತಮಿಳು ನಾಡಿನಲ್ಲಿ ಮುಖ್ಯಮಂತ್ರಿಗಳಾಗಿ ಕರುಣಾನಿಧಿಯವರು ಇದ್ದಾಗ ಅಲ್ಲಿ ಭಿನ್ನಾಭಿಪ್ರಾಯ ಬಂತು. ಪಕ್ಷವನ್ನು ಬಿಟ್ಟು ಕೇವಲ ೧೫ ಶಾಸಕರು ಹೊರಗಡೆ ಹೋದರು. ಅಲ್ಲಿ ೬ ಬೈ ಎಲೆಕ್ಷನ್ ಆದವು. ಕರುಣಾನಿಧಿಯವರ ಡಿ.ಎಂ.ಕೆ. ಪಕ್ಷ ಅಧಿಕಾರದಲ್ಲಿದ್ದರೂ ದಿಂಡಿಗಲ್‌ನಲ್ಲಿ ಡಿಪಾಸಿಟ್ ಕಳೆದುಕೊಳ್ಳಬೇಕಾಯಿತು. ಆದರೂ ಸಹ ಕರುಣಾನಿಧಿಯವರ ಪಕ್ಷವನ್ನು ಬಿಟ್ಟು ಯಾವ ಸದಸ್ಯರು ಹೊರಗಡೆ ಹೋಗಲಿಲ್ಲ; ಕಾರಣ ಅವರಲ್ಲಿ ಅಧಿಕಾರ ಇತ್ತು. ಅಧಿಕಾರದಲ್ಲಿರುವವರನ್ನು ಎದುರಿಸಿ ಹೊರಗೆ ಹೋಗಬೇಕಾದರೆ ಸಾಕಷ್ಟು ಧೈರ್ಯ, ಕೆಚ್ಚೆದೆ ಬೇಕು; ಅದು ಶ್ರೀಮಾನ್ ದೇವರಾಜ ಅರಸು ಅವರಿಗಿದೆ. ಮಂತ್ರಿಗಳಾದವರು ಮಂತ್ರಿಮಂಡಲವನ್ನು ಬಿಟ್ಟು ಸ್ವಾರ್ಥವನ್ನು ಬಿಟ್ಟು ಹೋಗಬೇಕಾದರೆ ಧೈರ್ಯ ಸ್ಥೈರ್ಯ ಬೇಕು. ಆ ಕೆಲಸವನ್ನು ಶ್ರೀಮಾನ್ ದೇವರಾಜ ಅರಸ್‌ರವರು ಅಂದು ಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರ ವಿರುದ್ಧ ಕರ್ನಾಟಕದಲ್ಲಿ ಬಾವುಟ ಹಿಡಿಯಲಿಕ್ಕೆ ಯಾರಿಗೂ ಧೈರ್ಯ ಇರಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. "ನಾನು" ಅಂತ ಯಾರಿಗೆ ಮನಸ್ಸಿನಲ್ಲಿ ಬರುತ್ತೆ; ಅದೇ ಕೊನೆಯ ಅಂತ್ಯಕ್ಕೆ ಕಾರಣವಾಗುತ್ತದೆ. "ನಾನು" ಅಂತ ಯಾರೂ ಹೇಳಬಾರದು.

ಶ್ರೀ ಬಿ. ಭಾಸ್ಕರಶೆಟ್ಟಿ.—ಕಾಂಗ್ರೆಸ್ (ಐ) ಅಂತ ಹೇಳಬಹುದೇ?

ಶ್ರೀಮತಿ ರೇಣುಕಾ ರಾಜೇಂದ್ರನ್.—ನೀವೂ ಇದ್ದರಲ್ಲ ಸ್ವಾಮಿ ಅದರಲ್ಲಿ.

ಶ್ರೀ ಸುಬ್ಬಯ್ಯ ಶೆಟ್ಟಿ.—(ಐ) ಬದಲಾಗಿ (ಯು) ಅಂತ ಹೇಳಿಕೊಳ್ಳಬಹುದು.

ಶ್ರೀ ಆರ್. ಗುಂಡೂರಾವ್.—ಇದರ ಬಗ್ಗೆ ಮಾನ್ಯ ಬಸವಲಿಂಗಪ್ಪನವರನ್ನೇ ಕೇಳಿ. ಆದ್ದರಿಂದ ಅಧ್ಯಕ್ಷರೇ, ಯಾರೂ ಕೂಡ ಈ ಮಾತನ್ನು ಹೇಳಬಾರದು. ಅಂದು ದೆಹಲಿಯಲ್ಲಿ ಅನೇಕ ಜನ ಯುವಕರು ಹೋಗಿ ಸಮಾಜವಾದದ ತತ್ವದಲ್ಲಿ ನಂಬಿಕೆ ಇರತಕ್ಕವರನ್ನು ಕನ್ವೀನರ್ ಆಗಿ ಮಾಡಬೇಕೆಂದು ಹೇಳಿದ ಮೇರೆಗೆ ಶ್ರೀಮಾನ್ ದೇವರಾಜ ಅರಸ್ ಅವರನ್ನು ಮಾಡಿದರು. ಇವತ್ತು ಇದೇ ಶ್ರೀಮಾನ್ ದೇವರಾಜ ಅರಸ್ ಅವರು ಸಾರ್ವಜನಿಕ ಭಾಷಣಗಳಲ್ಲಿ; ಶಾಸನ ಸಭೆಯ ಒಳಗಡೆ ಮಾಡಿರತಕ್ಕ ಭಾಷಣಗಳಲ್ಲಿ ಶ್ರೀಮತಿ ಇಂದಿರಾ ಗಾಂಧಿ ಒಬ್ಬರೇ ಈ ದೇಶದ ಏಕೈಕ ನಾಯಕಿ ಎಂದು ಹೇಳಿದ್ದಾರೆ. ಹೀಗೆ ಹೇಳಿ, ಇವತ್ತು ಇವರು ವ್ಯಕ್ತಿಪೂಜೆ ಅಂತ ಹೇಳುತ್ತಿದ್ದಾರಲ್ಲ ಅದು ಯಾವುದು? ಅವರ ದೃಷ್ಟಿಯಲ್ಲಿ ಅನುಕೂಲವಾಗುವವರೆಗೂ ವ್ಯಕ್ತಿಪೂಜೆ ಬೇಕು: ಅನುಕೂಲ ಬೇಡವಾದ ಮೇಲೆ ವ್ಯಕ್ತಿಪೂಜೆ ಬೇಡವೇ? ಮಾನ್ಯ ಅಧ್ಯಕ್ಷರೇ ಮುಖ್ಯಮಂತ್ರಿಗಳು ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾರೆ: ಇವತ್ತು ಈ ದೇಶದಲ್ಲಿ ಕಾರ್ಯಕ್ರಮಗಳನ್ನು ಜಾರಿಗೆ ಕೊಟ್ಟಂಥವರು ಯಾರು? ಈ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕೆಂತ ಹೇಳಿದವರು ಶ್ರೀಮತಿ ಇಂದಿರಾ ಗಾಂಧಿಯವರಲ್ಲವೇ? ಅನುಷ್ಠಾನಕ್ಕೆ ತರುವುದರಲ್ಲಿ ಒಂದೊಂದು ಹಂತ ಇದೆ. ಮಾನ್ಯ ಮುಖ್ಯಮಂತ್ರಿಗಳು ಈ ದಿಸೆಯಲ್ಲಿ ನಮ್ಮ ರಾಜ್ಯವನ್ನು ಉತ್ತರ ಭಾರತಕ್ಕೆ ಹೋಲಿಕೆ ಮಾಡಿದರು. ಉತ್ತರ ಭಾರತದಲ್ಲಿ ಕಾಂಗ್ರೆಸ್ (ಐ) ಪಕ್ಷ ಚುನಾವಣೆಯಲ್ಲಿ ಸೋತು ಹೋಗಿದ್ದಕ್ಕೆ ಕಾರ್ಯಕ್ರಮಗಳು ಕಾರಣವಲ್ಲ. ೨೦ ಅಂಶಗಳ ಕಾರ್ಯಕ್ರಮಗಳನ್ನು ಜಾರಿ ಮಾಡಲಿಲ್ಲವೆಂದು ಜನ ಮತ ಕೊಡಲಿಲ್ಲವೇ? ಅದಕ್ಕೆ ಬೇರೆ ಬೇರೆ ಕಾರಣಗಳು ಇದ್ದವು. ಅದು ನಮಗೂ ಗೊತ್ತಿದೆ. ಚುನಾವಣಾ ಸಂದರ್ಭದಲ್ಲಿ ಇಂದಿರಾ ಗಾಂಧಿಯವರ ಬಗ್ಗೆ ಆಡಿದಂಥ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಶಾಸನ ಸಭೆಯಲ್ಲಿ ಕೂಡ ತಾವು ಮಾನ್ಯ [illegible]ಯವರಿಗೆ ಉತ್ತರ ಕೊಡುತ್ತಾ ೨೭-೧-೧೯೭೭ರಲ್ಲಿ ಇಂದಿರಾ ಗಾಂಧಿಯವರ ಬಗ್ಗೆ ಹೇಳಿದ್ದೀರಿ.

ಇಲ್ಲವಾ ಅದನ್ನು ಹೊಗಳಿರುವುದೇ. ಅವರೇ ಹೇಳಿದ ಹಾಗೆ, ಅವರು ಪ್ರೆಸಿಡೆಂಟ್, ಇವರು ಮುಖ್ಯಮಂತ್ರಿಗಳು ಹೇಳಲೇಬೇಕು. ಇನ್ನು ಕಾರ್ಯಕ್ರಮದ ಬಗ್ಗೆ ಹೇಳುತ್ತಾರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಜನರು ನಮ್ಮ ಕೆಲಸದಲ್ಲಿ ವಿಶ್ವಾಸ ಇಡುತ್ತಾರೆ. ಆದರೆ ಈ ಕಾರ್ಯಕ್ರಮದ ಸೂತ್ರಧಾರಿಗಳು ಯಾರು ಅನ್ನುವುದನ್ನು ಜನರು ನೋಡುತ್ತಾರೆ. ಆಂಧ್ರದಲ್ಲಿ ವೆಂಗಳರಾವ್ ಅವರು, ದೇವರಾಜ ಅರಸ್ ಅವರ ಕಾಲದಲ್ಲಿಯೇ ಮುಖ್ಯಮಂತ್ರಿಗಳಾದರು ಅವರ ಐದು ವರ್ಷ ನಿಧಾನ ಆಯಿತು. ಮಾನ್ಯ ಚೆನ್ನಾರೆಡ್ಡಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರು ೭ ವರ್ಷಗಳ ಕಾಲ

ಆಂಧ್ರದಲ್ಲಿ ಇರಲಿಲ್ಲ. ಉತ್ತರ ಪ್ರದೇಶದಲ್ಲಿ ರಾಜ್ಯಪಾಲರಾಗಿದ್ದರು. ಮಾನ್ಯ ವೆಂಗಲ್‌ರಾವ್ ಅವರು ಪಕ್ಷ ಬಿಟ್ಟು ಹೋದರು. ಶ್ರೀಮತಿ ಇಂದಿರಾ ಗಾಂಧಿಯವರ ತತ್ವದ ಮೇಲೆ ಅವರ ಪಕ್ಷದ ಮೇಲೆ ನಂಬಿಕೆ ಇಲ್ಲ ಅಂತ ಪಕ್ಷವನ್ನು ಅವರು ಬಿಟ್ಟು ಹೋದರು. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ನಾವು ಎಲ್ಲರೂ ಒಪ್ಪಿಕೊಳ್ಳೋಣ ಇವರು ಹೇಳಿದ ಹಾಗೆ, ನಾನು ೨೦ ಅಂಶಗಳ ಕಾರ್ಯಕ್ರಮ ಮಾಡಿದ್ದೇನೆಂದು ಓಟು ಕೇಳಲಿಕ್ಕೆ ಹೋದರು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಆಂಧ್ರಕ್ಕಿಂತಲೂ ೧೦ ಪರ್‌ಸೆಂಟ್ ಕೆಲಸ ಜಾಸ್ತಿ ಮಾಡಿರಬಹುದು. ಆದರೆ ಅವರು ಯಾವುದೇ ತರಹದ ಕರಪ್ಷನ್ ಚಾರ್ಜ್‌ಗೆ, ಕಮಿಷನ್‌ಗೆ ಒಳಗಾಗದೇ ಇದ್ದಂತಹವರು ಅವರೂ ಚುನಾವಣೆಗೆ ನಿಂತರು. ಅವರೂ ದೇವರಾಜ್ ಅರಸ್ ಜೊತೆಯಲ್ಲಿ ಇದ್ದರು. ಅದೇ ರೀತಿ ಮಾನ್ಯ ರೆಡ್ಡಿಯವರು ಚುನಾವಣೆಗೆ ನಿಂತು ನಾನು ಎಲ್ಲಾ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದೇನೆ ಅಂತ ಹೇಳಲಿಕ್ಕೆ ಹೋಗಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರ ಪಕ್ಷವಾದಂತಹ ಕಾಂಗ್ರೆಸ್ (ಐ) ಪಕ್ಷ ಆಂಧ್ರ ಪ್ರದೇಶದಲ್ಲಿ ಕಾರ್ಯಕ್ರಮ ಜಾರಿಗೊಳಿಸಿದೆ, ನಾನು ಐದಾರು ವರ್ಷಗಳ ಕಾಲ ಇರಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ವಿಶ್ವಾಸ, ನಂಬಿಕೆ ಇರುವುದು ಕಂಡುಬಂದರೆ ಮತ ಕೊಡಿ ಅಂತ ಹೇಳಿದ್ದಾರೆ. ಅಲ್ಲಿ ಕರ್ನಾಟಕಕ್ಕಿಂತಲೂ ಹತ್ತು, ಇಪ್ಪತ್ತು ಪರ್‌ಸೆಂಟ್ ಕಡಿಮೆ ನಮ್ಮ ಪಕ್ಷದ ಕಾರ್ಯಕ್ರಮಗಳನ್ನು ಜಾರಿಗೊಳಿಸಿರಬಹುದು. ಆದರೆ ಅಲ್ಲಿ ಏನಾಗಿದೆ ೨೮೦ ಸ್ಥಾನಗಳಲ್ಲಿ ಕೇವಲ ೩೫–೩೬ ಸ್ಥಾನಗಳು ಅವರಿಗೆ ಬಂದಿದೆ. ಅಂದರೆ ನಾಲ್ಕನೇ ಒಂದು ಭಾಗ ಆಗಬಹುದು. ನಾನು ಅವಿಶ್ವಾಸ ನಿರ್ಣಯ ಮಂಡಿಸಬೇಕಾದರೆ ಏನು ಹೇಳಿದ್ದೇನೆ ಇವೊತ್ತು ಯಾವ ಒಂದು ಪಕ್ಷ ಚುನಾವಣೆಯಲ್ಲಿ ಎಂಟು ಪರ್‌ಸೆಂಟ್ ಗೆದ್ದಿದೆ ಆ ಪಕ್ಷವನ್ನು ತಾವು ಅಲಂಕಾರ ಮಾಡಿದ್ದೀರಿ. ಆದ್ದರಿಂದ ಇಲ್ಲಿ ತಮ್ಮ ಸರ್ಕಾರ ಇರಲಿಕ್ಕೆ ಹಕ್ಕಿಲ್ಲ ಅಂತ ಹೇಳಿದ್ದೇನೆ. ಇನ್ನು ೧೯೬೯ರ ಉದಾಹರಣೆ ಕೊಟ್ಟಿರಿ, ಆಗ ನಾವೆಲ್ಲಾ ಒಟ್ಟಿಗೆ ಇದ್ದೆವು. ೧೯೬೯ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಪಕ್ಷ ಬಿಟ್ಟು ಬೇರೆ ಪಕ್ಷಕ್ಕೆ ಹೋದರೂ ಬಹುಮತ ಇತ್ತು. ಅವರು ಸೋತ ಪಕ್ಷ ಅಲಂಕಾರ ಮಾಡಿ ಪ್ರಧಾನಿಯಾಗಿಲಿಲ್ಲ. ಕಾಂಗ್ರೆಸ್ ಅವರ ಪಕ್ಷ ಅಂತ ಕಟ್ಟಿಕೊಂಡು ಹೋದಮೇಲೆ ಅವರು ಇನ್ನೊಂದು ಪಕ್ಷಕ್ಕೆ ಹೋಗಲಿಲ್ಲ. ಅದೇ ರೀತಿ ಇವೊತ್ತು ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಕಾಂಗ್ರೆಸ್ಸಿನಲ್ಲಿಯೋ ಇದ್ದಿದ್ದರೆ, ಅವರು ಹೇಳಿದ ಹಾಗೆ ರಾಜಕೀಯವಾಗಿ ಯೋಚನೆ ಮಾಡುತ್ತಾ ಇದ್ದೆವು. ಆದರೆ ಇವೊತ್ತು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಎಂಟು ಪರ್ಸೆಂಟ್ ತೆಗೆದುಕೊಂಡಂತ ಪಕ್ಷಕ್ಕೆ ಹೋಗಿದ್ದಾರೆ. ಹಾಗೆ ಜನತಾ ಪಕ್ಷ ಉದಾಹರಣೆ ಕೊಟ್ಟು ೩೮ ಪರ್ಸೆಂಟ್ ಬಂದಿದೆ ಎಂದು ಹೇಳಿದರು. ಅದು ಬೇರೆ ಪ್ರಶ್ನೆ ಇವೊತ್ತು ಹೊಸ ಪಕ್ಷ ಉದಯವಾಗಿದೆ. ಅದಕ್ಕೆ ಲೋಕದಳ ಅಂತ ಹೆಸರು ಇಟ್ಟಿದ್ದಾರೆ, ಇನ್ನು ಮುಖ್ಯ ಮಂತ್ರಿಗಳು ಹೋದಮೇಲೆ ಇವರು ಸೇರಬೇಕೋ, ಬಿಡಬೇಕೋ ಅಂತ ತೀರ್ಮಾನ ಮಾಡುತ್ತಾರೆ. ಕಡೆಗೆ ಲೋಕಸಭೆ ಚುನಾವಣೆ ನಡೆಸಿದರೆ ಎಲ್ಲಾ ತೀರ್ಮಾನ ಆಗುತ್ತದೆ, ನಾವು ಅನೇಕ ಸಾರಿ ಹೇಳಿದ್ದೇವೆ, ನಾವು ಚುನಾವಣೆಗೆ ಹೋಗಬೇಕಾಗಿಲ್ಲ ನಮಗೆ ಬಹುಮತ ಇದೆ ಅಂತ.

ಶ್ರೀ ಡಿ. ದೇವರಾಜ ಅರಸ್.––ನಿಮಗೆ ಬಹುಮತ ಇದ್ದರೆ ನೀವೇ ನಡೆಸಿ ಅಂತ ಹೇಳಿದ್ದೇನೆ.

ಶ್ರೀ ಆರ್. ಗುಂಡೂರಾವ್.––ಹಿಂದೆ ವೀರೇಂದ್ರ ಪಾಟೀಲರ ಸರ್ಕಾರ ಇದ್ದಾಗ ಲೋಕಸಭೆಯಲ್ಲಿ ೨೭ಕ್ಕೆ ೨೭ ಸ್ಥಾನಗಳು ಬಂದಾಗ ಆವೊತ್ತು ಇದೇ ಪ್ರಶ್ನೆ ಬಂತು. ಲೋಕಸಭೆ ಚುನಾವಣೆ ಕಳೆದ ೨೪ ಗಂಟೆಯೊಳಗೆ ಸುಮಾರು ೯೫ ಜನ ಶಾಸಕರು ನಮ್ಮ ಪಕ್ಷಕ್ಕೆ ಬರುವುದಕ್ಕೆ ತಯಾರಾದರು. ಅದು ಮಾನ್ಯ ಮುಖ್ಯ ಮಂತ್ರಿಗಳಿಗೂ ಗೊತ್ತು, ನನಗೂ ಗೊತ್ತು. ಕಾಂಗ್ರೆಸ್ (ಐ) ಪಕ್ಷಕ್ಕೆ ನಾಯಕರಾಗಿದ್ದಂತಹ ಸಿದ್ಧವೀರಪ್ಪನವರು ಮಂತ್ರಿ ಮಂಡಲದಿಂದ ಅಂದು ಟ್ರಜರಿ ಬೆಂಚಿನ ಸದಸ್ಯರು ಬಂದ ತಕ್ಷಣ ಮಂತ್ರಿಮಂಡಲ ಮಾಡಬೇಕು ಅಂತ ಒಂದು ದೊಡ್ಡ ಯಾತ್ರೆ ಡೆಲ್ಲಿಗೆ ಹೋಯಿತು. ಅದಕ್ಕೆ ನಾವು ಕಾರಣ, ೭೫ ಪರ್ಸೆಂಟ್ ಅವರು, ೨೫ ಪರ್ಸೆಂಟ್ ನಾವು ಅಂತ ಇಟ್ಟುಕೊಳ್ಳೋಣ. ನ್ಯಾಷನಲ್ ಮತ್ತು ಇಂಟರ್‌ನ್ಯಾಷನಲ್ ಪ್ರೆಸ್ ಅಪ್ರಿಸಿಯೇಷನ್‌ಗೆ ಆಮೇಲೆ ಬರುತ್ತೇನೆ. ಈಗ under no circumstance I don't want to form my own party of defectors and horse trading Government ಮಾಡಲಿಕ್ಕೆ ತಯಾರಿಲ್ಲ ಅಂತ ಹೇಳಿಕೆ ಕೊಟ್ಟಿದ್ದರು. ಮಂತ್ರಿಮಂಡಲ ಮಾಡಬೇಕೋ ಬಿಡಬೇಕೋ ಅಂತ ಚರ್ಚೆ ನಡೆಯಿತು. ಮಂತ್ರಿಮಂಡಲ ಮಾಡಬಾರದು ಅಂತ ನಿಲುವು ತೆಗೆದುಕೊಂಡಾಗ, ಮಂತ್ರಿಮಂಡಲ ಮಾಡಬೇಕು ಅಂತ ಒಂದು ಸೆಕ್ಷನ್ ಜನ ಹೇಳಿದರು.

12 ಮಧ್ಯಾಹ್ನ

ಶ್ರೀ ಮಂಳ್ಳೂರ್ ಆನಂದರಾವ್.— ಈಗ ಮುಖ್ಯಮಂತ್ರಿಗಳು ಎರಡೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ. ಮಾನ್ಯ ವಿರೋಧ ಪಕ್ಷದವರು, ಅದು ಹೇಗಾಯಿತು, ಇದು ಹೇಗಾಯಿತು. ಇಡೀ ದೇಶದಲ್ಲಿ ಆ ಮಂತ್ರಿಮಂಡಲ ಏನಾಯಿತು ಈ ಮಂತ್ರಿಮಂಡಲ ಏನಾಯಿತು ಎಂದು ಚರ್ಚೆ ಮಾಡು ತ್ತಿದ್ದಾರೆ. ಇದು ಸರಿಯಲ್ಲ. ಇವತ್ತು ಸಭೆಯ ಕಾರ್ಯಕ್ರಮಗಳನ್ನು ಬೇಗ ಮುಗಿಸಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.— ಇಂದಿರಾಗಾಂಧಿಯವರಿಂದ ಇಷ್ಟು–ಅಷ್ಟು ಪರ್ಸೆಂಟೇಜ್ ಓಟು ಬಂತು ಎಂದು ಹೇಳಿ ನಮಗೆ ಇಲ್ಲಿ ಇಕ್ಕಟ್ಟು ತಂದಿದ್ದೀರಿ. ನೀವು ಯಾರಿಗೆ ಇಲ್ಲಿ ೨೫ ಪರ್ಸೆಂಟ್ ಇದೆ ಎಂದು ಹೇಳುತ್ತಿದ್ದೀರಿ? ನೀವು ವರದಿ ಮಾಡುವಾಗ ಜೀರೋ ಪರ್ಸೆಂಟೇಜ್ ಮೇಲೆ ಮಾತನಾಡಿ.

ಶ್ರೀ ಆರ್. ಗುಂಡೂರಾವ್.— ಇಂದಿರಾಗಾಂಧಿಯವರ ಬಗ್ಗೆ ಇವರ ನಿಷ್ಠೆ ಎಷ್ಟು ಎಂಬುದು ಈಗ ಗೊತ್ತಾಯಿತು. ಸ್ವಾಮಿ ನಿಷ್ಠೆ ಬೇಕು ಎಂದಾಗ ಒಂದು ಅರ್ಥ; ಅದು ಬೇಡ ಎಂದಾಗ ಇನ್ನೊಂದು ಅರ್ಥ ಕಲ್ಪಿಸುವುದು ಸರಿಯಾದುದಲ್ಲ. ನಾನು ಇಲ್ಲಿ ಏನು ಹೇಳಬೇಕೋ ಅದನ್ನು ನಾನು ಸ್ಪಷ್ಟವಾಗಿ ಉದಾ ಹರಣೆ ಕೊಟ್ಟು ಹೇಳಿದ್ದೇನೆ. ಆದುದರಿಂದಲೇ ಆಗ ಕೊನೆಗೆ ನಾವು ಸರ್ಕಾರ ರಚನೆ ಮಾಡುವುದು ಬೇಡ ಎಂದು ತೀರ್ಮಾನ ಮಾಡಿ ಚುನಾವಣೆಗೆ ಹೋಗುವ ಒಂದು ತೀರ್ಮಾನ ಮಾಡಿ ಚುನಾವಣೆಗೆ ಹೋದೆವು. ಆಮೇಲೆ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವ, ಆ ಪಕ್ಷ ಮತ್ತು ಅವರ ಒಂದು ಪ್ರಣಾಳಿಕೆ. ಈ ಮೂರಕ್ಕೆ ಮೆಚ್ಚಿ ಆ ಒಂದು ಪ್ರಣಾಳಿಕೆಯ ಮೇಲೆ ಆರಿಸಿ ಬಂದ ಜನರು ನಾವು, ಇನ್ನು ಬೇರೆ ಯಾರ ಪ್ರಣಾಳಿಕೆಯ ಮೇಲೆ ಆರಿಸಿ ಬಂದವರಲ್ಲ ನಾವು ಆದುದರಿಂದಲೇ ತಾವು ಈಗ ಈ ಪಕ್ಷದಿಂದ ಈ ಸರ್ಕಾರ ವನ್ನು ನಡೆಸುವುದಕ್ಕೆ ಹಕ್ಕಿಲ್ಲವೆಂದು ನಾನು ಹೇಳಿದುದು. ಈ ಕಾರಣದಿಂದ ಇವತ್ತು ಸರ್ಕಾರವನ್ನು ಅವರು ಬಿಡಬೇಕು ಎಂದು ಹೇಳಿದೆನೇ ಹೊರತು, ಬೇರೇನೂ ಅಲ್ಲ. ಈಗ ನಾನು ಕೇಳುವುದು ಒಂದೇ ಒಂದು ಪ್ರಶ್ನೆ ಏನೆಂದರೆ, ಜನತೆ ನಿಮ್ಮ ಈ ಪಕ್ಷದ ವತಿಯಿಂದ ಸರ್ಕಾರ ನಡೆಸಲು ಈಗ ಬೆಂಬಲ ಕೊಟ್ಟಿಲ್ಲ. ಇವರು ಆ ಪಕ್ಷ ಸೇರಿರುವುದು ತಪ್ಪು. ಆದ್ದರಿಂದ ಈ ಸರ್ಕಾರ ನಡೆಸಲು ನಿಮಗೆ ಹಕ್ಕಿ ದೆಯೇ ? ಅವರು ಸುಮಾರು ೯ ಗಂಟೆಯಿಂದ ೧೧ ಗಂಟೆಯವರೆವಿಗೂ ಮಾತನಾಡಿದರು. ಆಮೇಲೆ ಹೇಳಿದರು ಚಿಕ್ಕಮಗಳೂರು ಎಲೆಕ್ಷನ್‌ನಲ್ಲಿ ಶ್ರೀಮತಿ ಗಾಂಧಿಯವರು ನಿಲ್ಲುವುದು ಬೇಡವೆಂದು ಬಹಳ ಜನ ಹೇಳುತ್ತಿದ್ದರು ಎಂದು. ಆದರೆ ಕೊನೆಗೆ ಅವರು ನಿಲ್ಲುವುದಕ್ಕೆ ಕಾರಣರು ಯಾರು ಎಂಬುದು ಅವರಿಗೆ ಇನ್ನೂ ಗೊತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರು ಅಲ್ಲಿ ನಿಲ್ಲುವುದಕ್ಕೆ ಶ್ರೀ ದೇವರಾಜ ಅರಸ್ ಅವರು ಜಾಸ್ತಿ ಕಾರಣರಾದರೂ ಆ ಬಗ್ಗೆ ನಾನೂ ಸಾಕಷ್ಟು ಪ್ರಯತ್ನ ಪಟ್ಟಿದ್ದೇನೆ. ಆಮೇಲೆ ಇವರು ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಪ್ರಚಾರ ಮಾಡುವಾಗ ಇಟ್ಟ ಪ್ರಣಾಳಿಕೆಯಲ್ಲಿ ಇವರ ಹಾಗೂ ಇಂದಿರಾಗಾಂಧಿಯವರ ಫೋಟೋ ಇದೆ. ಅದನ್ನು ಬೇಕಾದರೆ ನಿಮಗೆ ತೋರಿಸುತ್ತೇನೆ. ಆ ಪ್ರಣಾ ಳಿಕೆಯಲ್ಲಿ ಏನು ಹೊರಡಿಸಿದ್ದಾರೆಂದರೆ ‘ನಾವು ಜನತಾ ಪಕ್ಷದ ನಾಯಕರಿಗಿಂತ ಸುಭದ್ರ ನಾಯಕತ್ವವನ್ನು ಕೊಟ್ಟಿದ್ದೇವೆ. ಇವತ್ತು ಆ ಪಕ್ಷದಲ್ಲಿ ಅಸ್ಥಿರತೆಯ ಪರಿಸ್ಥಿತಿ ಉಂಟಾಗಿದೆ. ಇಂದು ದೇಶದಲ್ಲಿ ರಾಜ ಕೀಯ ವಾತಾವರಣ ಕುಂಟುತ್ತಾ ನಡೆದಿದೆ. ಈ ೧೮ ತಿಂಗಳಲ್ಲಿ ಕೇಂದ್ರದ ಆಳ್ವಿಕೆಯಲ್ಲಿ ಅಸ್ಥಿರತೆಯ ವಾತ ವರಣ ಉಂಟಾಗಿದೆ. ಚುನಾವಣೆಯಲ್ಲಿ ದೊಡ್ಡ ದೊಡ್ಡ ಘೋಷಣೆಗಳನ್ನು ಮಾಡಿ ಇದುವರೆವಿಗೂ ಯಾವ ಕಾರ್ಯಕ್ರಮವನ್ನು ಅದು ಮಾಡಿಲ್ಲ. ಹಿಂದುಳಿದವರ ಹಾಗೂ ಬಡಜನರ ಕಲ್ಯಾಣ ಮುಂತಾದ ಅನೇಕ ಕಾರ್ಯಕ್ರಮಗಳನ್ನು ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ನಡೆಸಲಾಯಿತೇ ಹೊರತು ಇನ್ನಾರು ಮಾಡಿಲ್ಲ. ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರವೊಂದೇ ನಿಜವಾದ ಬಲಯುತ ವಾದ ಸರ್ಕಾರ. ಶ್ರೀಮತಿ ಇಂದಿರಾಗಾಂಧಿಯವರ ಕಾಂಗ್ರೆಸ್ ಒಂದೇ, ಸಮಾಜದಲ್ಲಿ ಶೋಷಿತ ವರ್ಗ ದವರ, ಬಡ ಜನರ ಕಲ್ಯಾಣಕ್ಕಾಗಿ ಶಾಶ್ವತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ’ ಎಂದಿದ್ದಾರೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಶ್ರೀ ಸಂಜಯಗಾಂಧಿಯವರ ಮುಖಂಡತ್ವದ ಪಕ್ಷ ಎಂದು ಹೇಳ ಲಿಲ್ಲ ತಾನೇ ?

ಶ್ರೀ ಆರ್. ಗುಂಡೂರಾವ್.— ಶ್ರೀ ಸಂಜಯಗಾಂಧಿಯವರು ಗುಲ್ಬರ್ಗ ಮತ್ತು ಭಾಲ್ಕಿಗೆ ಹೋಗ ಬೇಕಾದರೆ, ಅವರು ಹೈದರಾಬಾದಿಗೆ ಬಂದಾಗ ಅವರಿಗೆ ಸ್ವಾಗತ ಮಾಡುವ ನಿಷ್ಠೆ ಮುಖ್ಯಮಂತ್ರಿಗಳಿಗೆ ಬೇಕಾಗಿರಲಿಲ್ಲ. ಅವರು ಬೆಂಗಳೂರಿಗೆ ಬಂದಿದ್ದರೆ ಸ್ವಾಗತ ಮಾಡಬಹುದಾಗಿತ್ತು.

ಶ್ರೀ ಡಿ. ದೇವರಾಜ ಅರಸ್.— ನನ್ನ ಹೆಸರನ್ನು ಇಲ್ಲಿ ಹೇಳಬೇಡಿ. ಆಮೇಲೆ ನಾನು ನೀವು ಏನು ಮಾಡಿದಿರಿ ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಗೋವಿಂದಗೌಡ.— ನಾವು ಶಾಸಕರು ನಮ್ಮ ಸ್ವಂತ ಆತ್ಮಶಕ್ತಿಯಿಂದ ಗೆದ್ದು ಬಂದಿದ್ದೇವೆ, ನಾವು ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಿ ಬಂದಿರತಕ್ಕವರು. ಶ್ರೀಮತಿ ಇಂದಿರಾ ಗಾಂಧಿಯವರ ನಾಮ ಬಲದಿಂದೇನೂ ಬಂದಿಲ್ಲ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.— ನಾವು ಶ್ರೀಮತಿ ಇಂದಿರಾಗಾಂಧಿಯವರ ಫೋಟೋವನ್ನು ಎದುರಿಸಿ ಗೆದ್ದು ಬಂದಿದ್ದೇವೆ. ಸ್ವಂತ ಬಲದಿಂದ ಗೆದ್ದು ಬಂದಿದ್ದೇವೆ.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೇ ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಅವರು ಏನೇನು ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಹೇಳಿದರು ಅದೆಲ್ಲವನ್ನೂ ಕೇಳಿರುತ್ತೇನೆ. ಮತ್ತು ನನ್ನ ಸ್ವಾಮಿ ಭಕ್ತಿಯ ಬಗ್ಗೆಯೂ ವಿವರಣೆಗಳನ್ನು ಕೊಟ್ಟು ಹೇಳಿದರು. ಬಹಳ ಸಂತೋಷ. ಅವರು ವಯಸ್ಸಿನಲ್ಲಿ ದೊಡ್ಡವರಾಗಿದ್ದಾರೆ. ಅವರು ಸಾಕಷ್ಟು ಹೇಳಿದರು, ಅದು ಪ್ರಶ್ನೆಯಲ್ಲ. ನಾನು ಹೇಳುವುದೇನೆಂದರೆ ಬರೀ ಮಾತನಾಡಿದರೆ ಸಾಲದು ಅದನ್ನು ಕಾರ್ಯರೂಪಕ್ಕೆ ತರಬೇಕು. ೧೯೭೨–೭೩ ರಿಂದ ಹಿಡಿದು ೧೯೭೭ರ ತನಕ ಬಹುಶಃ ಪಾರ್ಲಿಮೆಂಟ್ ಚುನಾವಣೆಗಳು ನಡೆಯುವವರೆಗೂ ಶ್ರೀಮತಿ ಗಾಂಧಿಯವರ ಸರ್ವಾಧಿಕಾರತ್ವದ ಬಗ್ಗೆ ಯಾಗಲಿ. ಸಂಜಯಗಾಂಧಿಯವರ ಬಗ್ಗೆ ಯಾಗಲೀ ಒಂದೇ ಒಂದು ಚಕಾರವನ್ನು ಯಾವ ರಾಜ್ಯದ ಮುಖ್ಯಮಂತ್ರಿಗಳು ಎತ್ತಿರಲಿಲ್ಲ. ಅದೇ ರೀತಿಯಲ್ಲಿ ನಮ್ಮ ಮುಖ್ಯ ಮಂತ್ರಿಗಳೂ ಕೂಡ ಎತ್ತಲಿಲ್ಲವೆಂದು ಹೇಳುತ್ತೇನೆ. ನಿಜ, ಎಮರ್ಜೆನ್ಸಿ ಇದೆ ಎಂದು ಕೆಲವರು ಹೇಳುತ್ತಾರೆ. ಎಮರ್ಜೆನ್ಸಿಯನ್ನು ಆಧಾರವಾಗಿಟ್ಟುಕೊಂಡು ಸಾಕಷ್ಟು ಜನ ಆಡಳಿತವನ್ನು ನಡೆಸುತ್ತಿದ್ದರು. ಆಗ ಯಾರಿಗೂ ಈ ರೀತಿ ಅನ್ಯಾಯವಾಗುತ್ತಿದೆ ಎನ್ನುವುದು ಕಂಡು ಬರಲಿಲ್ಲ, ಅನ್ಯಾಯ ಎಂದು ಕಂಡು ಬಂದ ಮೇಲೆ ಏತಕ್ಕೆ ಅಧಿಕಾರದಿಂದ ಹೊರಗೆ ಬರಬಾರದಾಗಿತ್ತು. ಆಗ ಯಾರೂ ಅಧಿಕಾರವನ್ನು ಕಳೆದುಕೊಳ್ಳಲು ಸಿದ್ಧರಾಗಿರಲಿಲ್ಲ. ಗೌಹಾಟಿಯಲ್ಲಿ ಎ.ಐ.ಸಿ.ಸಿ. ಸೆಷನ್ ನಡೆದಾಗ Indira is India and India is Indira.' ಎಂದೆಲ್ಲಾ ಹೊಗಳಿದರು. ಶ್ರೀಮಾನ್ ದೇವರಾಜ ಅರಸ್‌ರವರೂ ಇದರಲ್ಲಿ ಇದ್ದಾರೆ. ಅವರೂ ಕೂಡ ಎಮರ್ಜೆನ್ಸಿ ತರುವುದು ಸರಿ ಎಂದು ಹೇಳಿ ಕೈಯನ್ನು ಎತ್ತಿದ್ದಾರೆ.

ಶ್ರೀ ಅಜೀಜ್ ಸೇಟ್.— ಇಲ್ಲ, ಇಲ್ಲ.

ಶ್ರೀ ಆರ್. ಗುಂಡೂರಾವ್.— ಏತಕ್ಕೆ ಇಲ್ಲ, ಇಲ್ಲವೆಂದು ಹೇಳುತ್ತೀರಿ, ಅವರು ಹೇಳಿರುವುದನ್ನು ತೆಗೆದು ನೋಡಿ, ಆದ್ದರಿಂದ ತಮಗೆ ಹೇಳುತ್ತಾ ಇದ್ದೇನೆ, ಸ್ವಾಮಿ ಭಕ್ತಿ ಎಂದರೆ ಅನುಕೂಲಕ್ಕೆ ತಕ್ಕಂತೆ ಅಲ್ಲ. ಇದನ್ನೇ ನಾನು ತಮ್ಮ ಗಮನಕ್ಕೆ ತರುತ್ತಿರುವುದು. ಸ್ವಾಮಿ ಭಕ್ತಿಯ ಬಗ್ಗೆ ಹೇಳಬೇಕಾದರೆ ಸಾಕಷ್ಟು ಧೈರ್ಯ ಬೇಕು, ಸ್ವಾಮಿ ಭಕ್ತಿಯ ಬಗ್ಗೆ ಈವತ್ತು ಎಲ್ಲರೂ ಹೇಳಿದರು. ಏನು ಬೇಕಾದರೂ ಹೇಳಿಕೊಳ್ಳಲಿ ಬೇಡವೆಂದು ಹೇಳುವುದಿಲ್ಲ. ಜನತಾ ಪಕ್ಷದವರು ಸಂಜಯಗಾಂಧಿಯವರ ಮೇಲೆ, ಇಂದಿರಾಗಾಂಧಿಯವರ ಮೇಲೆ ಟೀಕೆ ಮಾಡಲಿ ಬೇಡವೆಂದು ಹೇಳುವುದಿಲ್ಲ. ಆದರೆ ನಾವು ನೀವು ಟೀಕೆ ಮಾಡತಕ್ಕಂಥಾದ್ದು ನ್ಯಾಯವಲ್ಲ.

ಶ್ರೀ ಎಚ್. ಡಿ. ದೇವೇಗೌಡ.— ಸ್ವಾಮಿ, ನಮ್ಮನ್ನು ಏತಕ್ಕೆ ಹೊಗಳುತ್ತೀರಿ, ಹೊಗಳುವವರನ್ನು ನಮ್ಮ ಪಕ್ಷದಿಂದ ನಿಮ್ಮ ಕಡೆಗೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಆರ್. ಗುಂಡೂರಾವ್.— ಆದರೆ ಈವತ್ತು ಶ್ರೀಮಾನ್ ಸುಬ್ಬಯ್ಯ ಶೆಟ್ಟರು ಯಾವಾಗ ನೋಡಿದರೂ ಸಂಜಯಗಾಂಧಿಯ ಬಗ್ಗೆ ಮಾತನಾಡುತ್ತಿರುತ್ತಾರೆ, ಮಾನ್ಯ ಸುಬ್ಬಯ್ಯ ಶೆಟ್ಟರೂ ಯಾವಾಗಿನಿಂದ ಈ ರೀತಿ ಮಾತನಾಡುವುದಕ್ಕೆ ಶುರು ಮಾಡಿದರೆಂದರೆ ೧೯೭೮ರ ಚುನಾವಣೆಯಾದ ಮೇಲೆ ೧೯೭೮ರ ಚುನಾವಣೆಯು ನಡೆಯುವುದಕ್ಕೆ ಮುಂಚೆ ಬಹುಶಃ ಯಾವ ಒಂದು ಪತ್ರಿಕೆಯಲ್ಲಿಯೂ ಸಂಜಯಗಾಂಧಿಯವರ ಬಗ್ಗೆ ಮಾನ್ಯ ಸುಬ್ಬಯ್ಯಶೆಟ್ಟರು ಮಾತನಾಡಿದ್ದು ನಮಗೆ ನೆನಪಿಲ್ಲ,

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಮಾನ್ಯ ಗುಂಡೂರಾಯರು ನನ್ನ ಬಗ್ಗೆ ಮಾತನಾಡಿದ್ದಕ್ಕೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಇದೇ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಎಜ್ಯುಕೇಷನ್ ಸೊಸೈಟಿಯ ಮೀಟಿಂಗ್ ನಡೆಸುತ್ತಿದ್ದಾಗ, ಸಂಜಯಗಾಂಧಿಯವರ ಮೀಟಿಂಗ್‌ನ್ನು ನಡೆಸಬೇಕು, ನಿಮ್ಮ ಮೀಟಿಂಗ್‌ನ್ನು

ಕ್ಯಾನ್ಸಲ್ ಮಾಡಿ ಎಂದು ಒತ್ತಡವನ್ನು ತಂದಾಗ, ನಮ್ಮ ಮೀಟಿಂಗ್‌ನ್ನು ಕ್ಯಾನ್ಸಲ್ ಮಾಡಲು ಒಪ್ಪಲಿಲ್ಲ. ಆಗ ಸಂಜಯಗಾಂಧಿಯವರು ಹೊರಗೆ ನಿಂತಿದ್ದಾಗ್ಗೆ, ಒಳಗೇನೇ ನಮ್ಮ ಮೇಲೆ ಚಾಡಿಯನ್ನೂ ಡ ಹೇಳಿದ್ದಾರೆ.

ಶ್ರೀ ಮೈಕಲ್ ಬಿ. ಫರ್ನಾಂಡೀಸ್.— ಶ್ರೀಮತಿ ಇಂದಿರಾಗಾಂಧಿಯವರು ಸೋಷಲಿಸ್ಟ್ ಆದರೆ ಸಂಜಯಗಾಂಧಿಯವರು ಸೋಷಲಿಸ್ಟ್ ಆಗಲಿಲ್ಲವೆ ?

(ಬಹಳ ಮಂದಿ ಸದಸ್ಯರು ಎರಡೂ ಕಡೆ ಎದ್ದು ನಿಂತು ಗೊಂದಲವನ್ನುಂಟು ಮಾಡಿದರು)

ಶ್ರೀ ಆರ್. ಗುಂಡೂರಾವ್. ಒಂದು ಸಂದರ್ಭದಲ್ಲಿ ಇದೇ ವಿಧಾನ ಸಭೆಯಲ್ಲಿ ಶ್ರೀಮಾನ್ ಬೊಮ್ಮಾಯಿಯವರು ಮತ್ತು ಶ್ರೀಮಾನ್ ದೇವೇಗೌಡರು ಒಂದು ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಏನು ಹೇಳಿದ್ದಾರೆಂದರೆ, ಸಂಜಯಗಾಂಧಿಯವರು ಈ ದೇಶದ ಯುವಜನ ನಾಯಕರಾಗಿದ್ದಾರೆ. ದೇಶದ ಒಬ್ಬ ನಾಯಕರು ಬರುತ್ತಾರೆಂದರೆ ನಾವು ಯಾವ ರೀತಿ ಪೋಲೀಸ್ ಬಂದೋಬಸ್ತು ಕೊಟ್ಟು ಬಹು ಜನರು ಸ್ವಾಗತ ಮಾಡುತ್ತಾರೆಯೋ ಅದೇ ರೀತಿ ಇವರಿಗೂ ಮಾಡುವುದು ನಮ್ಮ ಕರ್ತವ್ಯವೆಂದು ಹೇಳಿರುತ್ತಾರೆ. ಶ್ರೀ ಸಂಜಯಗಾಂಧಿಯವರು ಯುವಜನ ಕಾಂಗ್ರೆಸ್ ನಾಯಕರಾಗಿದ್ದಾರೆ — ಎನ್ನುವ ಮಾತನ್ನು ಶ್ರೀಮಾನ್ ಬೊಮ್ಮಾಯಿಯವರಿಗೂ ಮತ್ತು ಶ್ರೀಮಾನ್ ದೇವೇಗೌಡರಿಗೂ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ. ನಾವು ಯಾವುದೋ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದು, ಆ ಒಂದು ತೀರ್ಮಾನದ ಪಾತ್ರದಾರರಾಗಿಯೂ ಇದ್ದುಕೊಂಡು, ಯಾವುದೋ ಒಂದು ಕಾರಣಕ್ಕಾಗಿ ಈ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ಡಿ. ದೇವರಾಜ ಅರಸ್.— ಯಾವುದೂ ಕಾರಣವಿಲ್ಲ. ನನ್ನನ್ನು ತೆಗೆಯುವುದಕ್ಕೆ ಕಾರಣ ವೇನು ಎಂದು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.— ತಾವು ಅಧ್ಯಕ್ಷ ಸ್ಥಾನವನ್ನು ಬಿಟ್ಟಿರಿ. ಹೋದಿರಿ. ಕೆಲವರು ಹೋಗಿ ಪಿತೂರಿ ಮಾಡಿದರು, ಪಿತೂರಿ ಮಾಡಿದರು ಎಂದು ತಾವು ಹೇಳಿದ ಮಾತನ್ನೇ ಹೇಳುತ್ತೇನೆ. ಬಹುಶಃ ತಾವು ಇದನ್ನು ಒಪ್ಪುತ್ತೀರೆಂದು ನಾನು ತಿಳಿದುಕೊಳ್ಳುತ್ತೇನೆ. ಯಾವ ಸಂದರ್ಭದಲ್ಲಿ ಯಾರ ಮೇಲೂ ಚಾಡಿ ಹೇಳುವ ಸ್ವಭಾವ ನನ್ನದಲ್ಲ. ತಮಗೆ ಗೊತ್ತು ತಮ್ಮ ಜೊತೆಯಲ್ಲಿ ನಾನು ಹತ್ತು ವರ್ಷಗಳ ಕಾಲದಿಂದಲೂ ಕೆಲಸ ಮಾಡಿದ್ದೇನೆ. ವರ್ಕಿಂಗ್ ಕಮಿಟಿಯಲ್ಲಿ ಕುಳಿತುಕೊಂಡು ಎಲ್ಲೆಲ್ಲಿ ಅಡ್ ಹಾಕ್ ಕಮಿಟಿ ಮಾಡಬೇಕೋ ಅಲ್ಲೆಲ್ಲಾ ಅದನ್ನು ಮಾಡಬೇಕು ಎಂದು ತೀರ್ಮಾನ ಮಾಡಿದರೆಂದು ಹೇಳಿದರು. ಅದೇ ರೀತಿ ಬೊಂಬಾಯಿನಲ್ಲಿ ಮಾಡಿದರು.

ಶ್ರೀ ಡಿ. ದೇವರಾಜ ಅರಸ್.— ಅವರು ಒಪ್ಪಿಕೊಂಡಿದ್ದರಿಂದ ತೀರ್ಮಾನ ಮಾಡಿದರು.

ಶ್ರೀ ಆರ್. ಗುಂಡುರಾವ್.— ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿ ಕೊಳ್ಳುತ್ತೇನೆ, ತಮಗೆ ಅನುಕೂಲವಾಗಲಿಲ್ಲ ಎಂಬ ಕಾರಣಕ್ಕೋಸ್ಕರ ಬೇರೆಯವರ ಮೇಲೆ ಅಪಾದನೆಗಳನ್ನು ಮಾಡುವುದಕ್ಕೆ ಹೋಗಬೇಡಿ. ಅದನ್ನು ಜನತೆ ಒಪ್ಪುವುದಿಲ್ಲ. ಬೇಕಾದರೆ ಬೇರೆ ವಿಷಯಗಳನ್ನು ಹೇಳಿ. ಈ ತರಹ ಕಾರ್ಯಕ್ರಮ ಮಾಡಿಕೊಂಡಿದ್ದರಿಂದ ನಾನು ಅವರ ಪಕ್ಷವನ್ನು ಬಿಟ್ಟೆ ಎಂದು ಹೇಳಲಿ. ಆದರೆ ಸುಮ್ಮನೆ ಅಪಾದನೆಗಳನ್ನು ಮಾಡಿಕೊಂಡು ಹೋಗುವ ಕೆಲಸವನ್ನು ಮಾಡಬೇಡಿ. ಆ ಕೆಲಸವನ್ನು ಮಾಡುವುದು ತಪ್ಪು ಎಂಬುದಾಗಿ ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ, ಬಹಳ ಚಾರ್ಜಸ್ ಮಾಡುತ್ತಾರೆಂದು ತಿಳಿದುಕೊಂಡಿದ್ದೆ, ಅದನ್ನು ಯಾವುದನ್ನೂ ಮಾಡಲಿಲ್ಲ ಎಂದು ಹೇಳಿದರು. ನಿಜ. ೩೦–೪೦ ಚಾರ್ಜಸ್ ಮಾಡಬಹುದಾಗಿತ್ತು. ಕೆಲವಾರು ಸದಸ್ಯರು ಕೆಲವಾರು ವಿಷಯಗಳನ್ನೂ ಹೇಳಿದ್ದಾರೆ. ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಕೆಲವು ಅನ್ಯಾಯಗಳು ನಡೆದಿವೆ ಎಂದು ಹೇಳಿದ್ದೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿಲ್ಲ. ಮತ್ತೆ ಮಾನ್ಯ ಮುಖ್ಯಮಂತ್ರಿಗಳು 'ನನ್ನ ಕತ್ತನ್ನು ಕೊಯ್ದರೂ ಕೂಡ ನಾನು ಆ ತರಹ ಬರುವವನಲ್ಲ' ಎಂದು ಹೇಳಿದರು. ನಾನು ಕೂಡ ಸ್ಪಷ್ಟಪಡಿಸುತ್ತಿದ್ದೇನೆ. ನಾನೂ ತಮ್ಮ ಹಾಗೆಯೇ, ತಮ್ಮ ಜೊತೆಯಲ್ಲಿಯೇ ಕೆಲಸ ಮಾಡಿ ಕೆಲವು ನೀತಿ ನಿಯಮಗಳನ್ನು ಹಾಕಿ ಕೊಂಡಿದ್ದೇನೆ. ಯಾವ ಪಕ್ಷದಿಂದ ನಾವು ಈ ಸ್ಥಾನಕ್ಕೆ ಆರಿಸಿ ಬಂದಿದ್ದೇವೋ, ಯಾರ ನಾಯಕತ್ವದಲ್ಲಿ ರಾಜಕೀಯದಲ್ಲಿ ಇಷ್ಟೊಂದು ಪ್ರಭಲವಾಗಿ ಆಗುವುದಕ್ಕೆ

ಸಾಧ್ಯವಾಯಿತೋ ಅಂಥ ಪಕ್ಷದ ನಾಯಕತ್ವವನ್ನು ನಮ್ಮ ಇಚ್ಛೆ ನಡೆಯಲಿಲ್ಲವೆಂದು ತ್ಯಜಿಸುವದಕ್ಕೆ ಹೋಗುವುದಿಲ್ಲ. ಚುನಾವಣೆ ಬಂದಾಗ ಹೊಗಳಿ, ಚುನಾವಣೆ ಇಲ್ಲದೇ ಇರುವಾಗ ಆ ಪಕ್ಷವನ್ನು ತೆಗಳುವ ಸ್ವಭಾವಕ್ಕೆ ನಾನು ಸೇರಿದವನಲ್ಲ. ನೀವು ಎಷ್ಟು ಕಠಿಣವಾಗಿ ಹೇಳುತ್ತೀರೋ ಅಷ್ಟೇ ಕಠಿಣವಾಗಿ ನಾನು ಹೇಳಬಲ್ಲೆ. ನಾವು ಯಾವ ನಾಯಕತ್ವವನ್ನು ಮೆಚ್ಚಿದ್ದೇವೋ. ಯಾವ ನಾಯಕತ್ವಕ್ಕೆ ಜನ ಮೆಚ್ಚಿ ಮತ ಕೊಟ್ಟು ನಮ್ಮನ್ನು ಆರಿಸಿ ಕಳುಹಿಸಿದರೋ ಆ ಪಕ್ಷವನ್ನು, ಆ ನಾಯಕತ್ವವನ್ನು ನಾವು ಬಿಡುವುದಕ್ಕೆ ತಯಾರಾಗಿಲ್ಲ. ನಮಗೆ ಸ್ಥಾನಗಳು ಬರಬಹುದು, ಹೋಗಬಹುದು, ಅದು ಮುಖ್ಯವಲ್ಲ. ಯಾವ ಪಕ್ಷದ ಹೆಸರಿನಲ್ಲಿ ನಾವು ಮತವನ್ನು ಕೇಳಿ ಆರಿಸಿ ಬಂದಿದ್ದೇವೋ ಮತ್ತು ಯಾವ ಒಂದು ನಂಬಿಕೆ ಮತ್ತು ವಿಶ್ವಾಸದಿಂದ ಜನತೆ ನಮ್ಮನ್ನು ಆರಿಸಿ ಕಳುಹಿಸಿದ್ದಾರೋ ಆ ಜನತೆಗೆ ದ್ರೋಹ ಮಾಡುವುದಕ್ಕೆ ನನ್ನ ಪ್ರಾಣವೇ ಹೋದರೂ ಕೂಡ ಇಷ್ಟಪಡುವುದಿಲ್ಲ. ನಾನು ಆ ಒಂದು ನಾಯಕತ್ವವನ್ನು ಮತ್ತು ಪಕ್ಷವನ್ನು ಬಿಟ್ಟು ಬರುವವನಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ, ನೀವು ಕರ್ನಾಟಕದ ಜನತೆ ಇಟ್ಟಂಥ ವಿಶ್ವಾಸಕ್ಕೆ ದ್ರೋಹ ಮಾಡಿದ್ದೀರಿ. ಜನತೆ ಯಾರನ್ನು ತಿರಸ್ಕಾರ ಮಾಡಿ ಕಳುಹಿಸಿದ್ದಾರೋ ಅವರನ್ನು ಹೋಗಿ ತಬ್ಬಿಕೊಂಡಿದ್ದೀರಿ. ತಾವು ಮಾಡಿರುವ ಈ ಘೋರವಾದ ಅಪರಾಧವನ್ನು ಕರ್ನಾಟಕದ ಜನತೆ ಮರೆಯುವುದಿಲ್ಲ. ತಾವು ನ್ಯಾಷನಲ್ ಕಾಂಗ್ರೆಸ್ಸಿನ ಅಧ್ಯಕ್ಷ ಪದವಿಯನ್ನು ಹೊತ್ತುಕೊಂಡು ಕರ್ನಾಟಕದಲ್ಲಿ ಸರ್ಕಾರವನ್ನು ರಚಿಸುವುದಕ್ಕೆ ಹಕ್ಕಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಏನು ಈ ಅವಿಶ್ವಾಸ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ ಅದನ್ನು ನಾವು ಒಪ್ಪುವುದಿಲ್ಲ ನಾವು ವಾಪಸ್ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಆದ್ದರಿಂದ ತಾವು ಈ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಪುನಃ ಗೆದ್ದು ಬಂದು ಇದೇ ಪಕ್ಷದಲ್ಲಿ ಸರ್ಕಾರವನ್ನು ರಚಿಸಿದರೆ ಮಾತ್ರ ಅದು ನ್ಯಾಯಬದ್ಧವಾದ ಸರ್ಕಾರವಾಗುತ್ತದೆಯೇ ವಿನಹ ಇಲ್ಲದಿದ್ದರೆ ಅದು ನಿಜವಾಗಿ ನ್ಯಾಯ ಬದ್ಧವಾದ ಸರ್ಕಾರವಾಗುವುದಿಲ್ಲ. ಇದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು ಎಂದು ಜನತೆಯ ದೃಷ್ಟಿಯಿಂದ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಒಂದೇ ಒಂದು ಮಾತನ್ನು ನಾನು ತಮಗೆ ಹೇಳುತ್ತೇನೆ. ನಿಮ್ಮ ಪಕ್ಷಕ್ಕೆ ನಾನು ಮತ್ತೆ ಬಂದು ಸರ್ಕಾರ ರಚನೆ ಮಾಡುವ ಪ್ರಶ್ನೆಯೇ ಇಲ್ಲ ಎಂದು ಈಗಾಗಲೇ ಹೇಳಿದ್ದೇನೆ. ಆದ್ದರಿಂದ ಅದನ್ನು ಮರೆತು ಬಿಡಿ, ಜನತೆ ನನ್ನನ್ನು ಬೇಡ ಎಂದರೆ ನಾನು ಮನೆಗೆ ಹೋಗುತ್ತೇನೆಯೇ ಹೊರತು ನಿಮ್ಮ ಪಕ್ಷಕ್ಕೆ ಬಂದು ಸೇರುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ಇಂದಿರಾ ಗಾಂಧಿಯವರು ನನ್ನ ಕೈಬಿಟ್ಟರೆ ನಾನು ಕಲ್ಲಳ್ಳಿಗೆ ಹೋಗುತ್ತೇನೆ ಎಂದು ಹೇಳಿದ್ದಿರಿ, ಹೋದರಾ ?

ಶ್ರೀ ಡಿ. ದೇವರಾಜ ಅರಸ್.—ಹೋಗುತ್ತೇನೆ. ಚುನಾವಣೆಯಲ್ಲಿ ನನ್ನನ್ನು ಆರಿಸದೇ ಕಳಿಸಿದಾಗ ಅಲ್ಲಿಗೆ ಹೋಗುವುದು,

ಶ್ರೀ ಆರ್. ಗುಂಡೂರಾವ್.—ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವ ಬಿಟ್ಟ ದಿನ ನಾನು ಕಲ್ಲಹಳ್ಳಿಗೆ ಹೋಗುತ್ತೇನೆ. ಆದರೆ ಅವರ ನಾಯಕತ್ವ ಮಾತ್ರ ಬಿಡುವುದಿಲ್ಲ ಎಂದು ತಾವು ಹೇಳಿರಲಿಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಅವರು ಮೆಚ್ಚಿಗೆಯಾಗಿದ್ದರೆ ನೀವಿಟ್ಟುಕೊಳ್ಳಿ, ಸಂತೋಷ.

ಶ್ರೀ ಆರ್. ಗುಂಡೂರಾವ್.—ಇಲ್ಲಿಯವರೆಗೂ ನಿಮಗೂ ಮೆಚ್ಚುಗೆಯಾಗಿದ್ದರಲ್ಲ ?

ಶ್ರೀ ಡಿ. ದೇವರಾಜ ಅರಸ್.—ಚಿಕ್ಕಮಗಳೂರು ಚುನಾವಣೆಯಾದಮೇಲೆ ಶ್ರೀಮತಿ ಇಂದಿರಾ ಗಾಂಧಿಯವರು ಏನು ಹೇಳಿದ್ದಾರೆ ಎಂಬುದು 'ಹಿಂದೂ' ಪತ್ರಿಕೆಯಲ್ಲಿ ಬಂದಿದೆ. ಪಾರ್ಲಿಮೆಂಟ್ ಸೆಂಟ್ರಲ್ ಹಾಲ್‌ನಲ್ಲಿ ಮೀಟಿಂಗ್ ಸೇರಿತ್ತು, ನನ್ನನ್ನೂ ಅದಕ್ಕೆ ಕರೆಸಿದ್ದರು. ನಾನು ಹೋಗಿದ್ದೆ. ಅದು ಕಾಂಗ್ರೆಸ್ (ಐ) ಪಕ್ಷದ ಸಭೆ. ಅಲ್ಲಿ ನಡೆದಂಥ ಮಾತುಗಳು ದಿನಾಂಕ ೧೦-೧೧-೧೯೭೮ರ 'ಹಿಂದೂ' ಪತ್ರಿಕೆಯಲ್ಲಿ ಬಂದಿದೆ. ಅದನ್ನು ನಾನು ಓದುತ್ತೇನೆ.

"Mrs. Gandhi and other Speakers, notably Mr. C. M. Stephen and Mr. Kamalapathi, Tripathi party leaders. in the two Houses of Parliament, pointedly praised Mr. Urs. This was

topped by a laudatory reference by Mrs. Gandhi. Every effort was made, she said, to shake her confidence in Mr. Urs which she felt was a delberate move, to see that she did not function effectively.

She commended the efficient manner in which Mr. Urs conducted the poll compaign and mobilised resources. But what helped her party most, she said, was Urs Government's record in the implementation of programmes''.

ಶ್ರೀ ಆರ್. ಗುಂಡೂರಾವ್.—ಇಲ್ಲ ಎಂದು ಯಾರು ಹೇಳಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳು ಓದಿದ್ದನ್ನು ಕೇಳಿದೆ. ಸ್ಪ್ರೆಂತ ಮೊಬಿಲೈಸ್ಡ್ ರೀಸೋರ್ಸಸ್ ಅದನ್ನು......

ಶ್ರೀ ಡಿ. ದೇವರಾಜ ಅರಸ್.—ನೀವು ಆ ಬಗ್ಗೆ ಮಾತನಾಡಬೇಡಿ. ನೀವು ಏನು ಕಡಿಮೆ ಮಾಡಿರುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮತ್ತು ಮಾನ್ಯ ದೇವೇಗೌಡರು ಮಾತನಾಡುವಾಗ ಎರಡು ಪ್ರಶ್ನೆಗಳನ್ನು ಎತ್ತಿದೆವು, ಅದು ಗ್ರೋವರ್ ಕಮಿಷನ್ ವಿಷಯ. ಗ್ರೋವರ್ ಕಮಿಷನ್ ಬಗ್ಗೆ ಫಾಲೋ ಅಪ್ ಆಕ್ಷನ್ ಸರ್ಕಾರದವರು ಏನು ತೆಗೆದುಕೊಂಡಿದ್ದಾರೋ ಅದರ ಬಗ್ಗೆ ಸರ್ಕಾರದ ಕಡೆಯಿಂದ ಯಾವುದೇ ಉತ್ತರ ಬರಲಿಲ್ಲ, ಸರ್ಕಾರ ಮೌನವಾಗಿದೆ. ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ಡಿ. ದೇವರಾಜ ಅರಸ್.—ಅವಕ್ಕೆ ನಾವು ಕೇಂದ್ರಕ್ಕೆ ಉತ್ತರ ಬರೆಯುತ್ತೇವೆ.

(ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು).

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಗುಂಡೂರಾಯರು ಈಗ ಕೆಲವು ಮಾತುಗಳನ್ನು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಎರಡು ಮಾತುಗಳನ್ನು ಮಾತ್ರ ಹೇಳುವುದಿದೆ. ಈಗ ಮೊದಲನೆಯದಾಗಿ ನಾವು ಈ ಅವಿಶ್ವಾಸ ನಿರ್ಣಯವನ್ನು ಸದನದ ಮುಂದೆ ಮಂಡಿಸಿದ ಉದ್ದೇಶವೇನೆಂಬುದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಅಧಿಕಾರದ ದುರುಪಯೋಗ ಮತ್ತು ಶಾಸಕರ ಮೇಲೆ ಒತ್ತಡ, ದಾಳಿ ಇದನ್ನೆಲ್ಲಾ ಮಾಡಿದರೂ ಕೂಡ ಚಿನ್ನದಂತೆ ಪುಟವೆದ್ದಂಥ ಶಾಸಕರು ಎಷ್ಟು ಜನರಿದ್ದಾರೆ, ಎಷ್ಟು ಜನ ನ್ಯಾಯವಾಗಿದ್ದಾರೆ ಎಂಬುದನ್ನು ಜನತೆಗೆ ತೋರಿಸಿಕೊಡಬೇಕು ಎಂಬುದು ನಮ್ಮ ಪ್ರಮುಖವಾದ ಉದ್ದೇಶ.

೧೨-೩೦ ಪಿ. ಎಂ.

ಏತಕ್ಕೆಂದರೆ, ದೇಶದಲ್ಲಿ ಸತ್ಯ ಹರಿಶ್ಚಂದ್ರರ ಹಾಗೆ ರಾಜ್ಯ ಸ್ಥಾಪನೆ ಮಾಡಬೇಕಾದರೆ ನೀವು ಆ ರೀತಿಯಾಗಿ ಮಾಡಬೇಕು. ಮತ್ತು ನಿಮ್ಮಲ್ಲಿ ಎಷ್ಟು ಜನ ಮತದಾರರ ಅಭಿಪ್ರಾಯದಂತೆ ಸರಿಯಾಗಿ ನಡೆದಿದ್ದೀರಿ ? ಈರೀತಿಯಾಗಿ ನಾವು ಇನ್ನು ಅನೇಕ ಛಾರ್ಜಸ್‌ಗಳನ್ನು ಮಾಡಿದ್ದೇವೆ. ಕೆಲವು ಛಾರ್ಜಸ್‌ಗಳಿಗೆ ಮಾತ್ರ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆ ಉತ್ತರ ಅಷ್ಟು ತೃಪ್ತಿಕರವಾಗಿಲ್ಲದಿದ್ದರೂ ಕೂಡ ಇನ್ನು ಕೆಲವು ಪ್ರಶ್ನೆಗಳಿಗೆ ಉತ್ತರವನ್ನೇ ಕೊಟ್ಟಿಲ್ಲಾ. ಇನ್ನು ಕೆಲವು ಛಾರ್ಜಸ್‌ಗಳಿಗೆ ಅವರು ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಪ್ರಮುಖವಾಗಿ ಹೇಳಬೇಕಾದರೆ ಬೆಂಗಳೂರು ಅರಮನೆಯ ವಿಚಾರ......

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಇದಕ್ಕೆ ಉತ್ತರ ಕೊಟ್ಟಾದ ಮೇಲೆ ವಿರೋಧ ಪಕ್ಷದ ನಾಯಕರು ಕ್ಲಾರಿಫಿಕೇಷನ್ ಕೇಳುವುದು ಕ್ರಮಬದ್ಧವಾಗಿದೆ. ಆದರೆ ಇವರು ಕೇಳುವಂಥಾದ್ದು ಕ್ರಮಬದ್ಧವಾದುದಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಬೆಂಗಳೂರು ಅರಮನೆಯ ವಿಚಾರದ ಬಗ್ಗೆ ಕೇಳಿದ್ದೆ; ಅದಕ್ಕೆ ಉತ್ತರ ಕೊಟ್ಟಿಲ್ಲಾ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಮ್ಮ ನಾಯಕರ ಈಗಾಗಲೇ ಎಲ್ಲದಕ್ಕೂ ಉತ್ತರ ಕೊಟ್ಟಿದ್ದಾರೆ. ತಾವು ಒಬ್ಬರಿಗೆ ಏನಾದರೂ ಕೂಡ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಹಾಗೆಯೇ ಎಲ್ಲರಿಗೂ ಕೂಡ ಅವಕಾಶ ಕೊಡಬೇಕಾಗುತ್ತದೆ. ಇವರು ಕ್ಲಾರಿಫಿಕೇಷನ್ ಕೇಳದೇ ಬರೀ ಭಾಷಣವನ್ನು ಮಾಡಿಕೊಂಡು ಹೋಗುತ್ತಿದ್ದಾರೆ.

MADAM DEPUTY SPEAKER.—Hon. Member can seek only clarification.

SRI D. DEVARAJ URS.—I have noted down all the points. Why do you raise them again ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲಾ. ಎರಡೇ ಪಾಯಿಂಟ್ಸ್ ಮಾತ್ರ ಹೇಳುತ್ತೇನೆ. ನಾನು ಬೆಂಗಳೂರು ಅರಮನೆಯ ವಿಚಾರ ಕೇಳಿದ್ದೆ ಅದಕ್ಕೆ ಉತ್ತರ ಕೊಟ್ಟಿಲ್ಲಾ. ಮತ್ತು ಇವರು ಕಾಂಗ್ರೆಸ್ ಪ್ರೆಸಿಡೆಂಟ್ ಆಗಿರುವುದರಿಂದ ಇಲ್ಲಿ ಮುಖ್ಯ ಮಂತ್ರಿಗಳಾಗಿ ಮುಂದುವರೆದುಕೊಂಡು ಹೋಗುವುದಕ್ಕಾಗುವುದಿಲ್ಲ; ಅವರು ರಾಜೀನಾಮೆ ಕೊಡಬೇಕು ಎಂದು ಹೇಳಿದ್ದಕ್ಕೆ ಸರಿಯಾದ ಉತ್ತರ ಇಲ್ಲಾ. ಇನ್ನು ಆರೋಗ್ಯ ಇಲಾಖೆಯ ವಿಚಾರ ಮತ್ತು ವಿದ್ಯಾ ಇಲಾಖೆಯ ವಿಚಾರ ಪ್ರಸ್ತಾಪ ಮಾಡಿದ್ದೇನೆ, ಅದಕ್ಕೂ ಉತ್ತರ ಇಲ್ಲ. ಇನ್ನು ಶ್ರೀಮಾನ್ ದೇವೇಗೌಡರು ಸಿ.ಒ.ಡಿ. ಎನ್‌ಕ್ವೈರಿ ಬಗ್ಗೆ ಮಂತ್ರಿಗಳ ವಿಚಾರದ ಬಗ್ಗೆ ಹೇಳಿದ್ದಾರೆ.

ಹೈಕೋರ್ಟಿಗೆ ಅಪಾಲಾಜಿ ಕೊಟ್ಟಂಥಾ ಮಂತ್ರಿಗಳನ್ನು ಮುಂದುವರೆಸಬಾರದು ಅನ್ನುವ ವಿಚಾರ ಹೇಳಿದ್ದಾರೆ. ಇನ್ನೂ ಅನೇಕ ರೀತಿಯಲ್ಲಿ ಬೇರೆ ಬೇರೆ ಸದಸ್ಯರು ಮಾತನಾಡಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಧ್ಯಕ್ಷರೇ, ಅವರಿಗೆ ಹೀಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಾ ಹೋದರೆ ನಾವೂ ಕೂಡ ಮಾತನಾಡಬೇಕಾಗುತ್ತದೆ. ನಮಗೆ ತಾವು ಅವಕಾಶ ಕೊಡಬೇಕಾಗತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಹೇಳುವುದಕ್ಕೆ, ಹೋಗುವುದಿಲ್ಲಾ. ಇಷ್ಟು ಮಾತ್ರ ಹೇಳುತ್ತೇನೆ. ಇನ್ನು ಹೆಚ್ಚು ವಿಷಯಗಳು ಜನಗಳ ವಿಚಾರದಲ್ಲಿ ಹೇಳುವುದಕ್ಕೆ, ಮಾತನಾಡಲಿಕ್ಕೆ ನಮಗೆ ಅವಕಾಶ ಸಿಗಲಿಲ್ಲಾ. ಅಲ್ಲದೇ ಮಾನ್ಯ ಮುಖ್ಯಮಂತ್ರಿಗಳು ಇನ್ನೂ ಅನೇಕ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡದೇ ಇರುವುದರಿಂದಲೂ ಮತ್ತು ಅದರಲ್ಲೂ ಕೂಡ ಅನೇಕ ಶಾಸಕರನ್ನು ತಮ್ಮ ಕಡೆ ಒಲಿಸಿಕೊಂಡಿರುವುದರಿಂದಲೂ......

(*Interruptions*)

ನಾನು ಇಷ್ಟು ಮಾತ್ರ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರ ನಮಗೆ ಸಮರ್ಪಕವಾಗಿಲ್ಲ. ಆದುದರಿಂದ ಈ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕುವುದರಲ್ಲಿ ಅರ್ಥ ಇಲ್ಲ ಎಂದು ಹೇಳುತ್ತೇನೆ.

(*Interruptions*)

ಅವರು ಸಮರ್ಪಕವಾದ ಉತ್ತರ ಕೊಟ್ಟಿಲ್ಲಾ. ಆದುದರಿಂದ ಇದನ್ನು ಮತಕ್ಕೆ ಹಾಕುವುದರಲ್ಲಿ ಅರ್ಥ ಇಲ್ಲ ಎಂದು ಹೇಳುತ್ತೇನೆ. ಮೇಲಾಗಿ ಅವರು ಪ್ರಜಾಪ್ರಭುತ್ವದ ಹರಣ ಮಾಡಿದ್ದಾರೆ ಎಂದು ನಾವು ಊಹಿಸಿಕೊಂಡು, ಅವರು ಕೊಟ್ಟಂಥಾ ಉತ್ತರ ಸಮರ್ಪಕವಾಗಿ ಇಲ್ಲದೇ ಇರುವುದರಿಂದ ನಾವು ಅದಕ್ಕೆ ಮನ್ನಣೆ ಕೊಡುವುದಿಲ್ಲ ಎಂದು ಹೇಳುತ್ತಾ ಈ ಸಭೆಯಿಂದನಾವುಗಳು ಸಭಾ ತ್ಯಾಗ ಮಾಡುತ್ತೇವೆ.

[ಕಾಂಗ್ರೆಸ್ (ಐ) ಸದಸ್ಯರೆಲ್ಲಾ ಸಭಾತ್ಯಾಗ ಮಾಡಿದರು]

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್‌ರೆ ಗುಂಡೂರಾಯರ ನೇತೃತ್ವದಲ್ಲಿ ನಡೆಯುತ್ತಾ ಇರತಕ್ಕಂಥಾ ಕಾಂಗ್ರೆಸ್ (ಐ) ಪಕ್ಷದ ಜನ ಇಲ್ಲಿ ಅವಿಶ್ವಾಸ ನಿರ್ಣಯ ತಂದು ಅದನ್ನು ಅವರು ಎದುರಿಸುವ ಶಕ್ತಿ ಕಡಿಮೆ ಆದುದನ್ನು ನೋಡಿ, ಅವರು ಈ ಮಾತುಗಳನ್ನು ಹೇಳುತ್ತಾ ಪಲಾಯನ ಮಾಡಿದ್ದಾರೆ. ಇದನ್ನು ಯಾರೂ ಒಪ್ಪತಕ್ಕದ್ದಲ್ಲ. ಆದು ಈ ಹಿಂದೆ ಜನತಾ ಪಕ್ಷದವರು ಯಾವುದೋ ಒಂದು ನೆಪ ಇಟ್ಟುಕೊಂಡು ಏನೋ ಹೋದರು ಅದು

ಸರಿಯಾಗಿದೆ. ಅವರು ಈ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಕೊಡಬೇಕು ಎನ್ನುವ ದೃಷ್ಟಿಯಿಂದ ಯಾವುದೋ ಒಂದು ನೆಪ ಇಟ್ಟುಕೊಂಡು ಹೋದರು. ಆದರೆ ಈ ಕಾಂಗ್ರೆಸ್ (ಐ) ಪಕ್ಷದವರು ಏನು ಮಾಡಿದರು ಅದನ್ನು ಯಾರೂ ಒಪ್ಪತಕ್ಕದ್ದಲ್ಲ. ಏತಕ್ಕೆಂದರೆ ಅವರೇ ಈ ಅವಿಶ್ವಾಸ ನಿರ್ಣಯವನ್ನು ಈ ಸಭೆಯಲ್ಲಿ ತಂದು ಅದನ್ನು ಎದುರಿಸುವ ಶಕ್ತಿ ಇಲ್ಲದೆ, ಆ ಶಕ್ತಿ ಕಡಿಮೆಯಾಗಿದೆ ಎಂದು ತಿಳಿದು ಕೊಂಡು ಈ ರೀತಿ ಮಾಡಿದ್ದು ಯಾರೂ ಒಪ್ಪತಕ್ಕದ್ದಲ್ಲಾ. ಅವರು ನಮ್ಮ ಶಕ್ತಿಯನ್ನು ಎದುರಿಸಲು ಯಾವುದಾದರೂ ಒಂದು ವಿಷಯವನ್ನು ಕೂಡ ಈ ಸಭೆಯ ಮುಂದೆ ಎತ್ತಿ ಸರಿಯಾಗಿ ತೋರಿಸಲಿಲ್ಲ. ಮೊದಲು ಇವರು ವಿರೋಧ ಪಕ್ಷದವರು ಮತ್ತು ಬೇರೆ ಬೇರೆ ಪಕ್ಷದವರು ತಮ್ಮ ಅವಿಶ್ವಾಸ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತಾರೆ ಎನ್ನುವ ಭಾವನೆಯನ್ನು ಹೊಂದಿದ್ದರೆಂದು ಎಂದು ಕಾಣುತ್ತದೆ. ಈಗ ಅವರು ಯಾರೂ ಕೂಡ ಈ ಸೂಚನೆಗೆ ಬೆಂಬಲ ಕೊಡುವುದಿಲ್ಲ ಎಂದು ಗೊತ್ತಾಯಿತು. ಅದಕ್ಕಿಂತ ಹೆಚ್ಚಾಗಿ ಹೇಳಬೇಕಾದರೆ ಅವರ ಸಂಖ್ಯಾಬಲ ಮೊದಲು ಏನು ಇತ್ತು ಅದು ಈಗ್ಗೆ ಕಳೆದ ೪ ದಿವಸ ಗಳಿಂದ ಕಡಿಮೆಯಾಗಿದೆ. ಮೊದಲೇನೋ ೪೧–೪೨ ಇದ್ದಿತ್ತು ಎಂದು ಕಾಣುತ್ತದೆ, ಈಗ ಅದರಲ್ಲಿ ಇನ್ನೂ ೪–೫ ಸಂಖ್ಯೆ ಕಡಿಮೆಯಾಗಿದೆ. ಈ ಸಂದರ್ಭದಲ್ಲಿ ತಮ್ಮ ಸಂಖ್ಯಾಬಲ ಪ್ರದರ್ಶನ ಮಾಡ ಬೇಕಾದರೆ ಇದು ಒಂದು ದೊಡ್ಡ ಕಾರಣವಾಗಿರುವುದರಿಂದ ಅವರಿಗೆ ಗಾಬರಿಯಾಗಿ ನಾವೆಲ್ಲಾ ವಾಕ್‌ಔಟ್ ಮಾಡುತ್ತೇವೆ ಎಂದು ಹೇಳಿ ಹೋಗಿದ್ದಾರೇ ವಿನಹ, ಅದಕ್ಕೆ ಉತ್ತರ ಕೊಟ್ಟಿಲ್ಲಾ, ಇದಕ್ಕೆ ಉತ್ತರ ಕೊಟ್ಟಿಲ್ಲಾ ಎಂದು ಸುಮ್ಮನೆ ಹೇಳಿದ್ದಾರೆ. ಇದು ಒಂದು ಕುಂಟು ನೆಪವನ್ನು ಅವರು ಇಟ್ಟುಕೊಂಡು ಹೊರಗೆ ಹೋಗಿದ್ದಾರೇಯೋ ವಿನಹ ಮತ್ತೇನೂ ಅಲ್ಲ ಇದು ಒಂದು ಹೀನಾಯವಾದ ಸ್ಥಿತಿ ; ಹಾಗೂ ಇದು ಒಂದು ಅಸಹನೀಯವಾದ ಕೃತಿ ಆದುದರಿಂದ ನಾವು ಇದನ್ನು ಖಂಡಿಸಲೇ ಬೇಕಾಗಿದೆ. ಈ ಅವಿಶ್ವಾಸ ನಿರ್ಣಯವನ್ನು ಇಲ್ಲಿ ತಂದು ೩–೪ ದಿನಗಳಿಂದಲೂ ಕೂಡ ಈ ಮನೆಯ ಕಾರ್ಯಕಲಾಪ ಗಳಿಗೆ ಅವಕಾಶ ಕೊಡದೆ ಕಾಲಹರಣ ಮಾಡಿ ಸಭೆಯಿಂದ ಈಗ ಅವರು ಪಲಾಯನ ಮಾಡಿದ್ದಾರೆ. ಇದು ಹೇಯವಾದ ವಿಚಾರ. ಅವರು ನಮ್ಮನ್ನು ಹಿಯ್ಯಾಳಿಸಿ ಹೇಳುವುದಕ್ಕೆ ಈ ಮನೆಯ ಒಂದು ಅವಕಾಶವನ್ನು ಉಪಯೋಗಿಸಿಕೊಂಡರು ಅಷ್ಟೆ. ತಮ್ಮ ಶಕ್ತಿ ಎಷ್ಟರಮಟ್ಟಿಗೆ ಇದೆ ಮತ್ತು ಅವರು ನಡೆಯುತ್ತಾ ಇರತಕ್ಕಂಥಾ ನಡವಳಿಕೆಯನ್ನು ಈ ಮೂಲಕ ಪ್ರದರ್ಶನ ಮಾಡಿದ್ದಾರೆ. ಇಂಥಾವರು ದೇಶವನು ಆಳಬಲ್ಲರೇ ? ಇಂಥಾವರನ್ನು ನಂಬಿಕೊಂಡೆ ಶ್ರೀಮತಿ ಇಂದಿರಾಗಾಂಧಿಯವರಿಗೆ ಈ ಗತಿ ಬಂದದ್ದು.

MADAM DEPUTY SPEAKER.—I will now put the motion to the vote of the House. The question is :

"That this House expresses its want of confidence in the Council of Ministers headed by Sri D. Devaraj Urs." Those who are for the motion will say "Aye"

SRI C. M. ARUMUGHAM.—I press for a division.

SRI B. V. KAKKILAYA.—Madam, it is very necessary that we press for a division. If they want to come and vote, let them come and vote. We are interested in finding out whether they are interested in coming back and voting.

SRI QUAMARUL ISLAM.—Some of my friends may also come. Please see that the bell is rung. I also press for a division.

MADAM DEPUTY SPEAKER.—I will put the Motion to the Vote of the House.

The question is :

"That this House expresses its want of confidence in the Council of Ministers headed by Sri D. Devaraj Urs."

Those in favour of the Motion may please say "Aye"

SRI C. M. ARUMUGHAM.—I press for the division.

THE HOUSE DIVIDED

MADAM DEPUTY SPEAKER.—I request the Hon. Members to stand row by row.

Ayes	...	Ni
Noes	...	133.

The Motion was Negatived

MADAM DEPUTY SPEAKER.—N w we shall go to the next business in the agenda.

SRI D. DEVARAJ URS —With your permission, I have to go. Sri K. H. Ranganath, Minister for Agriculture and Parliamentary Affairs will take up the Bill st ding in my name *i.e.* the Karnataka Lokayukta Bill, 1979.

MADAM DEPUTY SPEAKER.—Yes.

SRI A. LAKSHMI SAGAR —About Lokayukta Bill, we had an understanding that we should sit togetn r and come to some agreed solution in respect of certain amendme ts that we had suggested. We have partially done that job. We may take it up later. Now the Command Areas Development Bill may be taken up.

MADAM DEPUTY SPEAKER.– Now let us take the Official Resolution.

OFFICIAL RESOLUTION

SRI G. RAME GOWDA (Minister for Food and Forests).—Madam Deputy Speaker, I beg to move :

"That this House approves the draft Notification which the Government of Karnataka proposes to make in regard to disforestment of lands."

The Question was proposed